UNIVERSAL LIBRARY
OU_200948
UNIVERSAL LIBRARY



ಶ್ರೀ ಚಿಕದೇವರಾಜ ಒಡೆಯರವರು

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ—೧೪

ಪ್ರಧಾನ ಸಂಪಾದಕ

ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ. ಎ., ಬಿ. ಎಲ್.

# ಹದಿಬದೆಯ ಧರ್ಮ

ಸಂಪಾದಕ

ಡಿ. ಚಂಪಾಬಾಯಿ, ಎಂ. ಎ.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೪೦

CHECKED 1951

Checked 1965 CHECKED 1956

ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ
ಬೆಂಗಳೂರು ನಗರ
೧೯೪೫

Checked 1969

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

# ಮುನ್ನುಡಿ

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಲೇಖಕಿಯರಲ್ಲಿ ತೇಜಸ್ವಿಗಳಾದವರು ಇಬ್ಬರು. ವೀರ ತಪಸ್ವಿನಿಯಾದ, ಬಸವನ ಮಹಾಕಾರ್ಯದಲ್ಲಿ ದೀಕ್ಷೆವಹಿಸಿದ ಅಕ್ಕಮಹಾದೇವಿ ಒಬ್ಬಳು, ಚಿಕ್ಕದೇವರಾಜ ಒಡೆಯರ ಸಂಚಿಯ ಊಳಿಗದವಳಾಗಿ ಅವರ ಕನ್ನಡದ ಪುನರುಜ್ಜೀವನ ಕಾರ್ಯದಲ್ಲಿ ಪ್ರೇರಣೆಗೊಂಡು ತನ್ನ ಅಳಿಲುಸೇವೆಯನ್ನು ಸಲ್ಲಿಸಿದ ಹೊನ್ನಮ್ಮ ಇನ್ನೊಬ್ಬಳು ಇಬ್ಬರೂ ಕನ್ನಡ ಪ್ರೇಮಿಗಳು, ಉಜ್ಜ್ವಲ ಭಕ್ತರು, ಸಮಾಜ ಸೇವಕರು ಅಕ್ಕಮಹಾದೇವಿ ರುದ್ರಕನ್ನಿಕೆ, ಸರ್ವಾಂತರ್ಯಾಮಿಯಾದ ದೇವರನ್ನು ಎಲ್ಲೆಲ್ಲೂ ಕಂಡು ಶಿವನೇ ಗಂಡನೆಂದು ತನ್ನ ಆತ್ಮವನ್ನೂ ಜೀವನವನ್ನೂ ಶಿವಕಾರ್ಯಕ್ಕೆ ಅರ್ಪಣಮಾಡಿ, ದೊಡ್ಡ ಧರ್ಮಚಳವಳಿಗಾಗಿ ನಾಡನ್ನೆಲ್ಲಾ ಸುತ್ತಿ, ವಚನಗಳಲ್ಲಿ ತನ್ನ ಕಾಣ್ಕೆಯನ್ನು ಬೀರಿ, ಆವೇಶ ಹುಟ್ಟಿಸಿದವಳು ಮನೆಗಿಂತ ಅವಳಿಗೆ ನಾಡು ದೊಡ್ಡದಾಯಿತು ಹೊನ್ನಮ್ಮ ಸೌಮ್ಯಮೂರ್ತಿ, ಮನೆ ಮಕ್ಕಳ, ಗಂಡ ಹೆಂಡಿರ, ಗೃಹಸ್ಥಾಶ್ರಮದ ಧರ್ಮಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ, ನಿತ್ಯ ಸಂಸಾರದ ನಿಷ್ಕಾಮಕರ್ಮವೇ ಭಗವಂತನ ಪಾದವನ್ನು ಸೇರುವ ಹಾದಿ ಎಂದು ಸಾರಿದವಳು. ಮನೆಯಲ್ಲಿಯೂ ತನ್ನ ಒಡೆಯರ ಮನಸ್ಸನ್ನು ಉಲ್ಲಾಸಪಡಿಸುವ ದುಡಿಮೆಯಲ್ಲಿಯೂ ನಾಡಿನ ಕೆಲಸವನ್ನು ಮಾಡಿದವಳು ಸಂಸಾರದ ಎರಡು ಮುಖವನ್ನೂ ತೋರಿರುವ ಈ ಇಬ್ಬರೂ ಕನ್ನಡಿತಿಯರು, ಆರಾಧಿಸತಕ್ಕವರು

ಈ ಪುಸ್ತಕದಲ್ಲಿ ಹೊನ್ನಮ್ಮನ ಪರಿಚಯವನ್ನೂ ಆಕೆಯ ಸ್ತ್ರೀ ಧರ್ಮಗೀತೆಯನ್ನೂ ಮುಖ್ಯವಾಗಿ ಕನ್ನಡಿತಿಯರ ಗಮನಕ್ಕೆ ತಂದಿದೆ ಇದು ಸಂಗ್ರಹವಲ್ಲ, ಪೂರ್ಣ ಗ್ರಂಥ ಕೀರ್ತಿಶೇಷರಾದ ಮ॥ ರಾ॥ ರಾಮಾನುಜಯ್ಯಂಗಾರ್ ಅವರು ಮೊದಲು ಈ ಗ್ರಂಥವನ್ನು ಬೆಳಕಿಗೆ ತಂದವರು. ಈಗ ಹೊಸ ಪ್ರತಿಗಳೊಡನೆ

ಹೋಲಿಸಿ, ಪರಿಷ್ಕರಿಸಿ, ಪೀಠಿಕೆ ಟಿಪ್ಪಣಿಗಳೊಡನೆ ಉತ್ಕೃಷ್ಟವಾಗಿ ಈ ಗ್ರಂಥ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುವುದಕ್ಕೆ ಸಂಪಾದಕತ್ವವನ್ನು ವಹಿಸಿ ಸಹಾಯಮಾಡಿರುವ ಶ್ರೀಮತಿ ಡಿ ಚಂಪಾಬಾಯಿ, ಎಂ ಎ ಅವರಿಗೆ ನಮ್ಮ ಕೃತಜ್ಞತೆ ಸಲ್ಲತಕ್ಕದ್ದಾಗಿದೆ

ಸಮಾಜದಲ್ಲಿಯೂ ಮನೆಯಲ್ಲಿಯೂ ಗೃಹಿಣಿಗೆ ಯಾವ ಸ್ಥಾನ, ಏನು ಅವಕಾಶಗಳು, ಹಕ್ಕುಬಾಧ್ಯತೆಗಳೂ ಕರ್ತವ್ಯಗಳೂ ಯಾವುವು ಎಂದು ವಿಚಾರಮಾಡುತ್ತಿರುವ ಈ ಕಾಲದಲ್ಲಿ, ನಮ್ಮ ಪೂರ್ವಿಕರ ಅಭಿಪ್ರಾಯಗಳನ್ನೂ ಉತ್ತಮ ಧ್ಯೇಯಗಳನ್ನೂ ತಳಹದಿಯಾಗಿಟ್ಟುಕೊಂಡು, ಯುಗಧರ್ಮಕ್ಕೆ ತಕ್ಕಂತೆ ಮಾರ್ಪಾಟು ಮಾಡಿಕೊಂಡು, ಹೊಸದೂ ಹಳದೂ ಸಮನ್ವಯವಾಗಿ, ಶಕ್ತಿಯಿಂದಲೂ ಸೌಂದರ್ಯದಿಂದಲೂ ಭಾರತೀಯ ಜೀವನ ಮುಂದುವರಿಯುವಂತೆ ಆಗಲೆಂದು ಅಕ್ಕಮಹಾದೇವಿ ಹೊನ್ನಮ್ಮನವರ ಹೆಸರಿನಲ್ಲಿ ಹಾರೈಸಬಹುದಾಗಿದೆ

ಹೊನ್ನಮ್ಮ ಕೇಳುವಂತೆ—

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ?
  ಪಣ್ಣಲ್ಲವೆ ಪೊರೆದವಳು ?
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
  ಕಣ್ಣು ಕಾಣದ ಗಾವಿಲರು ?
ಕುವರನಾದೊಡೆ ಬಂದ ಗುಣವೇನದರಿಂದ ?
  ಕುವರಿಯಾದೊಡೆ ಕುಂದೇನು ?
ಇವರಿರ್ವರೊಳೇಳ್ಗೆವಡೆದವರಿಂದ
  ಸವನಿಪುದಿಹಪರ ಸೌಖ್ಯ

ಬೆಂಗಳೂರು
೨೬—೧೦—೧೯೪೦

ಬಿ. ಎಂ. ಶ್ರೀ.

# ವಿಷಯ ಸೂಚಿಕೆ


| | | |
|---|---|---|
| ೧ | ಮುನ್ನುಡಿ | 1 |
| ೨ | ಪೀಠಿಕೆ | 1 |
| ೩ | ಅನುಬಂಧ | 49 |
| ೪ | ಸಂಧಿಪ್ರಕಾರ ವಿಷಯವಿವರಣೆ | 57 |
| ೫ | ಕಾವ್ಯ ಹದಿಬದೆಯ ಧರ್ಮ | ೧ |
| ೬ | ಟಿಪ್ಪಣಿ | ೧೦೭ |
| ೭ | ಪೂರ್ವಕಥೆಗಳು | ೧೧೫ |
| ೮ | ಶಬ್ದಕೋಶ | ೧೨೫ |

# ಪೀಠಿಕೆ

## ೧. ಭಾರತೀಯರ ಸ್ತ್ರೀಧ್ಯೇಯ

ಹೊನ್ನಮ್ಮ 'ಹದಿಬದೆಯ ಧರ್ಮ'ದಲ್ಲಿ ಎತ್ತಿ ಹಿಡಿದಿರುವುದು ದಾಂಪತ್ಯ ಜೀವನವನ್ನು, ಧರ್ಮದೃಷ್ಟಿಯಿಂದ ಅದನ್ನು ಅವಳು ಪರಿಶೀಲಿಸುತ್ತಾಳೆ "ಆದಿಕಾವ್ಯದೊಳೈದನೆಯ ವೇದದೊಳು ಮನ್ವಾದಿಕ ಧರ್ಮಶಾಸ್ತ್ರದೊಳು" ಹಿರಿಯರು ತಿಳಿಯಹೇಳಿದ್ದನ್ನೇ 'ಕೃತಿಗೈದು' ನಾನು ಹೇಳುವೆನು ಎಂದು 'ಪೀಠಿಕಾಸಂಧಿ'ಯಲ್ಲಿ ಹೇಳಿದ್ದಾಳೆ

ಆದ್ದರಿಂದ ಕವಿಯ ಕಾಲವಿಚಾರದ ಮತ್ತು ಕಾವ್ಯದ ವಿಮರ್ಶೆಗೆ ಮೊದಲು ಹೊನ್ನಮ್ಮನ ಆಧಾರಗಳಾದ ಧರ್ಮಶಾಸ್ತ್ರ ಗಳ ಕಾಲದ ಸ್ತ್ರೀ ಮತ್ತು ಆಕೆಯ ಬದುಕು, ಅಂದಿನ ರೀತಿ ಲಕ್ಷಣಗಳು, ಗುಪ್ತಚಕ್ರವರ್ತಿಗಳ ಕಾಲದ ಕವಿಗಳ ನಾಟಕ ಗಳಿಂದ ಸೂಚಿತವಾಗುವ ಮಹಿಳಾಜೀವನ, ವಿಜಯನಗರ ಸಾಮ್ರಾಜ್ಯದ ಕಾಲದ ಸ್ತ್ರೀಯ ಮೇಲ್ಮೆ, ಮುಂತಾದ ಅಂಶ ಗಳನ್ನು ಸೂಕ್ಷ್ಮವಾಗಿ ಇಲ್ಲಿ ವ್ಯಕ್ತಪಡಿಸಬಹುದಾಗಿದೆ

ವೇದಗಳ ಕಾಲ ಮಹಿಳೆಯ ತುಂಬು ಬದುಕಿನ, ಆತ್ಮ ವಿಕಾಸದ ಯುಗ, ವೇದವಿದ್ಯಾಭ್ಯಾಸ, ತಾತ್ವಿಕ ವಿಚಾರ, ಪ್ರತಿಭಾ ಸಾಧನ—ಇವಕ್ಕೆಲ್ಲ ಮಹಿಳಗೆ ಯಥೇಚ್ಛ ಅವಕಾಶವಿತ್ತು. ವಿವಾಹ ಐಚ್ಛಿಕವಾಗಿತ್ತು ತನ್ನ ಹದಿನಾರು, ಹದಿನೆಂಟನೆಯ ವರ್ಷದಲ್ಲಿ ಮದುವೆಯಾದ ಗೃಹಿಣಿಗೆ ದಾಂಪತ್ಯ ಜೀವನದಲ್ಲಿ ಧರ್ಮವಿಧಿಗಳಲ್ಲಿ ಪತಿಯೊಡನೆ ಸಹಕರಿಸಲು, ಇಲ್ಲವೆ ಸ್ವತಂತ್ರ ವಾಗಿ ಅವನ್ನು ನಿರ್ವಹಿಸಲು ಆಸ್ಪದವಿತ್ತು ಉಪನಯನವಾಗಿ ವಿವಾಹಕ್ಕೆ ಪೂರ್ವದಲ್ಲಿ ಆಕೆ ಗುರುಕುಲಗಳಲ್ಲಿ ವೈದಿಕ ವಿದ್ಯಾಭ್ಯಾಸ ಮಾಡಿ ಬಲ್ಲಿದಳಾಗಿರುತ್ತಿದ್ದಳು ಆದ್ದರಿಂದ ಆಕೆ ನಿಜವಾಗಿ

ಪತಿಯ 'ಅರ್ಧಾಂಗಿ'ಯಾಗಿದ್ದಳು ಗಾಂಧರ್ವ, ಬ್ರಾಹ್ಮ ಮುಂತಾದ ಎಂಟು ಬಗೆಯ ವಿವಾಹಗಳು ಪ್ರಚಾರದಲ್ಲಿದ್ದುವು

ಬ್ರಾಹ್ಮಣ ಮತ್ತು ಉಪನಿಷತ್ತುಗಳ ಯುಗದಲ್ಲಿಯೂ ಗೃಹಿಣಿಗೆ ಧರ್ಮಜೀವನದಲ್ಲಿ ಇದೇ ಸೌಕರ್ಯ ದೊರೆಯುತ್ತಿತ್ತು. ವೈದಿಕ ವಿದ್ಯಾಭ್ಯಾಸದಲ್ಲಿ ಲೋಪ ಕಂಡುಬಂದರೂ ವಿವಾಹ ವಿಚಾರ ದಲ್ಲಿ ಅನುಕೂಲ್ಯ ಉಳಿಯಿತು

ಮನು ಪರಾಶರ ನಾರದರು ಮೊದಮೊದಲ ಧರ್ಮಶಾಸನ ಕಾರರು ಸೂತ್ರ ಸ್ಮೃತಿಗಳ ಯುಗವನ್ನು (ಕ್ರಿ ಪೂ ಸುಮಾರು ೫೦೦–ಕ್ರಿ ಶ ಸುಮಾರು ೫೦೦) ನಿರ್ಮಿಸಿದ ಮಹಾಮುನೀಷಿಗಳು ಮನುಮಹರ್ಷಿಯ ಧರ್ಮಶಾಸ್ತ್ರ ಆರ್ಯರಿಗೆ ಪವಿತ್ರವಾದದ್ದು, ಹಿಂದೂ ಕಾನೂನಿನ ತಿಳಿವಳಿಕೆಯನ್ನು ಉಂಟುಮಾಡುವುದರಲ್ಲಿ ಮುಖ್ಯವಾದದ್ದು ಮನುಮಹರ್ಷಿ ವೇದಾಭ್ಯಾಸವನ್ನೂ ತತ್ವಶಾಸ್ತ್ರ ಗಳ ಅಧ್ಯಯನವನ್ನೂ ಮಾಡಿದ ಮಹಾನುಭಾವ ಇವನ ಗ್ರಂಥ ವಿಶಾಲವ್ಯಾಪ್ತಿಯುಳ್ಳದ್ದು, ಮನುಷ್ಯನ ಬದುಕಿನ ನೀತಿ ನಿಯಮ ಗಳನ್ನು ವಿಧಿಸುವಂಥದು ಈ ಶಾಸನಕಾರನ ಅಭಿಪ್ರಾಯದಲ್ಲಿ ಮನುಷ್ಯ ಜೀವಕೋಟಿಯಲ್ಲಿ ಬಹು ಮೇಲಾದವನು, ಪ್ರಪಂಚ ವನ್ನು ಹೆಚ್ಚು ಭಾಗ್ಯಶಾಲಿಯನ್ನಾಗಿ ಮಾಡಲೆಂದು ಜನ್ಮವೆತ್ತಿ ದವನು

ಮನು ಮೊದಲಾದ ಶಾಸ್ತ್ರಕಾರರ ಮಹಿಮೆಯನ್ನೂ, ದಯಾ ಗುಣವನ್ನೂ, ಸಮಷ್ಟಿದೃಷ್ಟಿಯನ್ನೂ ಕೆಳಗಿನ ವಾಕ್ಯಗಳಿಂದ ಅರಿಯಬಹುದಾಗಿದೆ ಇವರು ಹಿಂದೂ ಸಮಾಜದ 'ಶಿಕ್ಷೆ ರಕ್ಷಣೆ'ಯ ಕಾರಣ ಪುರುಷರು ಸಮಾಜದ ಶುಚಿ ಶ್ರೇಯಸ್ಸು ಗಳನ್ನೇ ಹಾರೈಸುತ್ತಿದ್ದ ಉತ್ತಮರು ಪಂಡಿತಪರಿಷತ್ತುಗಳಲ್ಲಿ ಅಂದಿನ ಸಮಾಜದ ಪದ್ಧತಿ ರೀತಿ ನೀತಿಗಳ ವಿಚಾರಮಾಡಿ, ನ್ಯಾಯಪರರಾಗಿ, ಉದಾರಿಗಳಾಗಿ ಸಮಾಜದ ಮಾರ್ಗದರ್ಶನ ಕ್ಕಾಗಿ ತಮ್ಮ ಅಭಿಪ್ರಾಯಗಳನ್ನು ಕೊಡುತ್ತ ಬಂದರು ಇವೇ ಕಾಲಕ್ರಮದಲ್ಲಿ ಶಾಸನಗಳಾಗಿ ಗ್ರಂಥಗಳಲ್ಲಿ ಸ್ಥಿರಪಟ್ಟುವು.

ಶಾಸನಕಾರರು ನಿಜವಾಗಿ ಸಮಾಜ ಸುಧಾರಕರು, ದುಷ್ಟ ಪದ್ಧತಿಗಳನ್ನು ಖಂಡಿಸುವುದು, ಸಮಾಜವನ್ನು ದೇಶ ಕಾಲ ಗಳಿಗೆ ತಕ್ಕಂತೆ ಮಾರ್ಪಡಿಸುವುದು, ಸ್ಥಿತಿಗತಿಗನುಗುಣವಾಗಿ ನೀತಿ ನಿಯಮಗಳನ್ನು ವಿವರಿಸುವುದು, ಶಾಸನಕಾರರ ಧ್ಯೇಯ ಗಳಾಗಿದ್ದುವು ಅವರು ವಿಮರ್ಶನಬುದ್ಧಿಯಿಂದ, ಯುಗಧರ್ಮ ವನ್ನು ಗಮನಿಸಿದರು, ತಾವು ಏರ್ಪಡಿಸಿದ ಕಟ್ಟುಪಾಡುಗಳು ಕೂಡ ಸಮಾಜದ ಕ್ಷೇಮಕ್ಕೆ ಅಹಿತವೆಂದು ತೋರಿದರೆ ಬದಲಾವಣೆ ಹೊಂದಲಿ, ಸಮಾಜಕ್ಕೆ ವಿಘಾತಕವೆಂದು ತೋರಿದರೆ ಉಚ್ಚಾಟನೆ ಯಾಗಲಿ ಎಂದು ಶಾಸನಕಾರರೇ ಸಾರಿದರು

ಚಾತುರ್ವರ್ಣಗಳು ಇಷ್ಟು ಹೊತ್ತಿಗೆ ಕಾಣಬಂದುವು. ಜನರಲ್ಲಿ ಧರ್ಮದೃಷ್ಟಿ ಹೆಚ್ಚಿತು ಪಿತೃಋಣವನ್ನು ತೀರಿಸಲು ಪುತ್ರಸು ಆವಶ್ಯಕವೆಂದು ಅವರು ಭಾವಿಸಿದರು ಹೆಣ್ಣುಮಕ್ಕಳಿಗೆ ಉಪನಯನಕ್ಕೆ ಬದಲಾಗಿ ಎಂಟನೆಯ ವರ್ಷದಲ್ಲಿ ಬಾಲ್ಯವಿವಾಹ ಮಾಡಿಕೊಡುವುದು ನಡವಳಿಕೆಯಾಯಿತು ಶ್ರೀಮಂತರ ಸಂಸಾರ ಗಳಲ್ಲಿ ಹನ್ನೆರಡು ವರ್ಷಗಳವರೆಗೆ ಕನ್ನೆ ಹಿರಿಯರ ಹತ್ತಿರ ವಿದ್ಯಾ ಭ್ಯಾಸ ಮಾಡುತ್ತಿದ್ದಳು, ಆದರೆ ಇದು ಲೌಕಿಕ ವಿದ್ಯೆ ಮಾತ್ರ ಇಂಥವಳು ಪತ್ನೀಪದಕ್ಕೆ ಬಂದಮೇಲೆ ವೈದಿಕ ವಿದ್ಯೆ ಸಾಲದೆ ಹೋಗಿ, ಧರ್ಮಕಾರ್ಯಗಳಲ್ಲಿ ಈಕೆ ಪತಿಯ ಸಂಗಾತಿನಿಯಾಗು ವುದು ಕಡಮೆಯಾಗುತ್ತ ಬಂತು ಮಿಶ್ರವಿವಾಹ ಬಹುಪತ್ನೀತ್ವ ಗಳು ಗೃಹಿಣಿಯ ಮಾನ್ಯತೆಯನ್ನು ತಗ್ಗಿಸಿದುವು ಪತಿಭಕ್ತಿ, ಪತಿಪೂಜೆಯ ಮತ ತಲೆಯೆತ್ತಿತು

ಮುಂದಿನ ಕಾಲದಲ್ಲಿ ಹಲವರು ವಿದ್ಯಾವತಿಯರಿದ್ದರೂ, ಒಟ್ಟಿನಲ್ಲಿ ಸ್ತ್ರೀಯರು ಅಜ್ಞಾನಿಗಳಾಗಿದ್ದುದರಿಂದ, ಅವರನ್ನು ಹೀನವರ್ಣದವರ ಸಾಲಿಗೆ ಕೂರಿಸಿ ಆಯಿತು. ಅವರ ಸಂಸ್ಕೃತಿ ಸಂತೋಷಗಳಿಗಾಗಿ ಯೋಜನೆ ಮಾಡಿ ಆಯಿತು ಭಕ್ತಿ ಸಾಹಿತ್ಯ ವಾದ ಪುರಾಣಗಳು ರಚಿತವಾದುವು ಈ ಹಿತವಾದ ಧರ್ಮಕಥೆ

ಗಳಿಂದ ಸ್ತ್ರೀಯರ ಧರ್ಮಶ್ರದ್ಧೆ ತಣಿಯಿತು, ಆಶೆ, ಬಯಕೆ ಈಡೇರಿತು.

ರಾಮಾಯಣ ಮಹಾಭಾರತಗಳು ಆರ್ಯ ಸಂಸ್ಕೃತಿಯನ್ನು ತಿಳಿಯಹೇಳುವ ಗ್ರಂಥಗಳು, ಹಿಂದೂ ಜನಜೀವನವನ್ನು ಶುಚಿಪಡಿಸಿರುವ, ಪಡಿಸುತ್ತಿರುವ ರಾಷ್ಟ್ರೀಯ ಕಾವ್ಯ ಇತಿಹಾಸ ಗಳು. ಇವು ಹೆಚ್ಚಾಗಿ ಕ್ಷಾತ್ರಜೀವನವನ್ನು ಚಿತ್ರಿಸುತ್ತವೆ. ಸಿರಿವಂತರ ಬದುಕಿನ ಹೆಗ್ಗುರುತುಗಳಾಗಿವೆ ಕ್ಷತ್ರಿಯರಲ್ಲಿ ಸ್ವಯಂವರ ಪದ್ಧತಿಯಿಂದ ವಿವಾಹವಾಗುವ ರೂಢಿಯಿತ್ತು ಇದು ಪ್ರೌಢ ವಿವಾಹ ಆದ್ದರಿಂದ ಕನ್ನೆಯರು ಮದುವೆಗೆ ಮೊದಲೇ ವಿದ್ಯಾವತಿಯರೂ, ಕಲಾಕುಶಲೆಯರೂ ಆಗಲು ಅವಕಾಶವಿರುತ್ತಿತ್ತು ಗುರುಜನ ವಿಧೇಯತೆ, ಪತಿಭಕ್ತಿ ಕ್ಷಾತ್ರ ಗೃಹಿಣಿಯರ ಜೀವನಾದರ್ಶಗಳಾಗಿದ್ದುವು. ಘೋರ ದಿವ್ಯಗಳ ಮೂಲಕ, ಶಪಥ ಪ್ರಮಾಣಗಳ ಮೂಲಕ ದೊಡ್ಡ ಸಭೆಯ ಎದುರಿನಲ್ಲಿ ಸತಿವ್ರತದ ಪರೀಕ್ಷೆಗಳು ನಡಸಲಾಗುತ್ತಿದ್ದುವು ಸೀತಾದೇವಿಯ ಅಗ್ನಿ ವರೀಕ್ಷೆಯಂತೆ ಪುರಾಣ ಪ್ರಪಂಚದ ಆದರ್ಶ ಗೃಹಿಣಿಯರಲ್ಲಿ, ಪರಮಪತಿವ್ರತೆಯರಲ್ಲಿ ಜಾನಕಿ ಕ್ಷಮಾಮಯಿ, ದ್ರೌಪದಿ ಹರದರ್ಪವುಳ್ಳ ವೀರರಮಣಿ, ಸಾವಿತ್ರಿ ಶ್ರದ್ಧಾಳು, ದಮಯಂತಿ ಪ್ರೇಮಮಯಿ ಈ ಮಹಿಳೆಯರ ಮನಸ್ಸು ಕರ್ತವ್ಯ ಪ್ರೇಮಗಳ ಒಳನಿಟ್ಟಿನಲ್ಲಿ ಅಲೆದಾಡಿ ಮಿರುಗುತ್ತಿತ್ತು

ಮಧ್ಯಯುಗದ ಕಾಳರಾತ್ರಿ ಹೆಣ್ಣಿನ ಬಾಳಿನ ಹಿರಿಮೆಯನ್ನು ಮರೆಮಾಚಿತು ಆದರೂ ಗುಪ್ತ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯಗಳ ಚಕ್ರವರ್ತಿಗಳ ಆಸ್ಥಾನಗಳಲ್ಲಿ ಸ್ತ್ರೀ ಜೀವನದ ಕುರುಹು ಮಿಣುಕುಗಳು ಕಂಡಿವೆ ಎನ್ನಬಹುದು

ಕವಿಕುಲ ಗುರುವಾದ ಕಾಳಿದಾಸನ ನಾಟಕಗಳಿಂದ ಗುಪ್ತರ ಕಾಲದಲ್ಲಿ ಮಹಿಳೆಯರು ವಿದ್ಯಾವತಿಯರಾಗಿದ್ದರೆಂದು ಊಹಿಸ ಬಹುದಾಗಿದೆ. ಅಂತಃಪುರದ ರಾಜಮಹಿಳೆಯರ ವಿದ್ಯೆ ವರ್ಚಸ್ಸು

ಗಳ ಫಲವಾಗಿ ಆಶ್ರಿತ ಜನರೂ ಸೇವಕಿಯರೂ ಸಾಕ್ಷರರಾಗಿ ಬುದ್ಧಿ ಬಲವನ್ನು ಹೊಂದಿದ್ದರೆನ್ನಬಹುದು

ಹನ್ನೆರಡನೆಯ ಶತಮಾನ ಕರ್ನಾಟಕದಲ್ಲಿ ವೀರಶೈವ ಮತ ಪ್ರಚಾರವಾಗುತ್ತಿದ್ದ ಯುಗ; ಕಲ್ಯಾಣದ ಶಿವಾನುಭವ ಮಂಟಪ, ವಚನಕಾರರು ಸ್ತ್ರೀ ಜನಕ್ಕೆ ಧಾರ್ಮಿಕ ಹಕ್ಕುಬಾಧ್ಯತೆಗಳನ್ನು ಕೊಟ್ಟದ್ದು, ತಮ್ಮ ಮತತತ್ವ ತಿಳಿಯಲು ಹೆಂಗಸರು ಓದುಕಲಿತು ತಿಳಿವನ್ನು ಹೊಂದಿ, ಅನುಭವಿಸಿ ವಚನಗಳಲ್ಲಿ ಹಾಡಿ ತೋರಿಸಿದ್ದು, ಇವರ ನಾಯಕಿಯಂತಿರುವ ಮಹದೇವಿಯಕ್ಕನ ತೇಜೋಮೂರ್ತಿ —ಇವನ್ನು ಇಲ್ಲಿ ಸೂಚಿಸಿದರೆ ಸಾಕಾಗಿದೆ

ವಿಜಯನಗರದ ಸಾಮ್ರಾಜ್ಯ (೧೩೩೬–೧೬೮೧) ಮೂರು ಶತಮಾನಗಳವರೆಗೆ ಬಾಳಿ, ಬಹು ಬಗೆಯಲ್ಲಿ ಜನಜೀವನವನ್ನು ಪರಿಷ್ಕರಿಸಿತ್ತು. ತತ್ವ, ಸಾಹಿತ್ಯ ಮತ್ತು ಇತರ ಕುಶಲ ಕಲೆಗಳು ಬರಹದಲ್ಲಿ, ಶಿಲ್ಪದಲ್ಲಿ ಹೊಳೆದುವು. ಈ ಸಾಮ್ರಾಜ್ಯಸ್ಥಾಪಕರಲ್ಲಿ, ಚಕ್ರವರ್ತಿಗಳಲ್ಲಿ ಅತಿ ಉದಾರಭಾವಗಳು ಕಂಡುವು; ಪ್ರಜೆಗಳಿಗೆ ತಿಳಿವು, ಸ್ವತಂತ್ರವಿಚಾರ ಶಕ್ತಿ ದೊರೆತುವು; ಮತ ಮತಗಳ ವಿಷಯದಲ್ಲಿ ಸಹಿಷ್ಣುತೆ, ಗೌರವ ಭಾವ ತೋರಿದುವು. ಕುಮಾರವ್ಯಾಸ ಚಾಮರಸರ ಉದ್ದಾಮ ಕಾವ್ಯಗಳಿಂದ ಕನ್ನಡ ಸಾಹಿತ್ಯ ಶೋಭಿಸಿತು. ಸ್ತ್ರೀಯರ ಬದುಕು ವಿಕಾಸವಾಗಲು ತಕ್ಕ ಸನ್ನಿವೇಶಗಳಿದ್ದುವು ಜನಸಾಮಾನ್ಯದಲ್ಲಿ ಮಹಿಳೆಯರು ವಿದ್ಯಾವತಿಯರಾಗಿದ್ದರು, ಅನೇಕರು ಶಾಸ್ತ್ರೀಯ ಮತ್ತು ಸಾಹಿತ್ಯ ಗ್ರಂಥಗಳನ್ನು ರಚಿಸಿದರು, ಕಲೋಪಾಸನೆಯನ್ನೂ ಮಾಡಿದರು ರಾಜಾಸ್ಥಾನದಲ್ಲಿ, ಆಶ್ರಿತರಲ್ಲಿ, ಪರಿಜನರಲ್ಲಿ ಹಲವರು ಸ್ತ್ರೀಯರು ಹೆಚ್ಚು ಕಷ್ಟದ, ತುಂಬ ಬುದ್ಧಿಶಕ್ತಿಯ ಕೆಲಸಗಳನ್ನು ಸಮಂಜಸವಾಗಿ ನಿರ್ವಹಿಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ

ವಿಜಯನಗರ ಸಾಮ್ರಾಜ್ಯ ಒಡೆದುಹೋದಮೇಲೆ ಹಿಂದೂ ಸಂಸ್ಕೃತಿ, ಸಾಹಿತ್ಯ ಪಾಳಯಗಾರರ, ನಾಯಕರ, ಸಂಸ್ಥಾನಿಕರ

ಊರು ಆಸ್ಥಾನಗಳಲ್ಲಿ ಉಳಿದು ಕಳೆಗೂಡುತ್ತ ಬಂದುವು. ಇಂಥ ವರಲ್ಲಿ ಮೈಸೂರು ಪ್ರಭುಗಳು ಮುಖ್ಯರು ವಂಶಪರಂಪರೆಯಿಂದ ವಿಜಯನಗರ ಸಾಮ್ರಾಜ್ಯದ ಉದಾರಭಾವ, ಮತಸಹಿಷ್ಣುತೆಯ ರಾಜಪದ್ಧತಿಯನ್ನೇ ಅಕ್ಷರಶಃ ತತ್ವತಃ ಮುಂದುವರಿಸಿಕೊಂಡು ಬಂದರು ದೇಶಭಾಷೆ ಮತ್ತು ರಾಜಭಾಷೆಯಾದ ಕನ್ನಡದ ಸ್ಥಾನ ಮಾನವನ್ನು ಕಾಪಾಡುವುದು, ವಿದ್ಯೆ ಕಲೆಗಳಿಗೆ ಪ್ರೋತ್ಸಾಹಕೊಡು ವುದು, ಸ್ತ್ರೀಜನವನ್ನು ಆದರಿಸಿ ಅವರ ಶಕ್ತಿಸ್ಫೂರ್ತಿಗಳು ಪ್ರಕಟ ವಾಗಲು ಅವಕಾಶ ಕಲ್ಪಿಸುವುದು ಮೈಸೂರ ಅರಸುಮನೆತನದ 'ಸದ್ವ್ರತ'ವಾಗಿದೆಯೆನ್ನಬಹುದು ಚಿಕದೇವರಾಜ ಒಡೆಯರ ಆಸ್ಥಾನ, ಅಲ್ಲಿಯ ಬರಹಗಾರರು, ಗ್ರಂಥರಚನೆ ಕಾವ್ಯರಚನೆ ಮಾಡಲು ತಿಳಿದವರಿಗೆ ದೊರೆತ ಪ್ರೋತ್ಸಾಹ ಉತ್ತೇಜನಗಳು ಈ ಮಾತಿಗೆ ಉದಾಹರಣೆಯಾಗಿವೆ ನಮ್ಮ ಕವಯಿತ್ರಿಯಾದ ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ'ದಿಂದ ಆ ಕಾಲದ ಮಹಿಳೆಯರ ಸಭ್ಯತೆ ಸಂಸ್ಕೃತಿಗಳೂ, ರಾಜ ಪರಿವಾರದ ಉನ್ನತಿಯೂ ವ್ಯಕ್ತವಾಗಿವೆಯೆನ್ನಬಹುದು

## ೨. ಕವಿಯ ಆವರಣ ಮತ್ತು ಕಾಲ

'ಹದಿಬದೆಯ ಧರ್ಮ'ದ ವಿಚಾರವನ್ನು ನೇರವಾಗಿ ತಿಳಿದು ಕೊಳ್ಳುವುದಕ್ಕೆ ಮೊದಲು ಕವಿಗೆ ಆಶ್ರಯವಾದ ಚಿಕದೇವರಾಜ ಒಡೆಯರ ಒಡ್ಡೋಲಗ ಕನ್ನಡ ಸಾಹಿತ್ಯದ ಏಳಿಗೆಯ ದೃಷ್ಟಿ ಯಿಂದ ಎಷ್ಟು ಮಹತ್ವದ್ದು ಎಂಬುದನ್ನು ಗೊತ್ತುಮಾಡಿಕೊಳ್ಳು ವುದು ಉಚಿತವಾಗಿದೆ

ಮೈಸೂರ ಪ್ರಭುಗಳಾದ ಚಿಕದೇವರಾಜ ಒಡೆಯರು (೧೬೭೨–೧೭೦೪) ವೈಭವದಿಂದ ಶ್ರೀರಂಗಪಟ್ಟಣದಲ್ಲಿ ಆಳಿದರು. ಸ್ವಯಂಸ್ಫೂರ್ತಿಯೂ ಸಾಹಿತ್ಯಾಭಿರುಚಿಯೂ ಉಳ್ಳ ಈ ರಾಜರ ಆಸ್ಥಾನ ಕನ್ನಡ ಸರಸ್ವತಿಯ ಪೂಜಾ ಮಂದಿರವಾಯಿತು. ಚಿಕದೇವರಾಜರು 'ಚಿಕದೇವರಾಜ ಬಿನ್ನಪ', 'ಗೀತಗೋಪಾಲ'

ಎಂಬ ಗ್ರಂಥಗಳನ್ನು ರಚಿಸಿದರು ಭಾಗವತ ಭಾರತಗಳ ಶ್ರೇಷ್ಠ ಧರ್ಮಗಳನ್ನು ಸಂಸ್ಕೃತದಿಂದ ಕನ್ನಡಿಸಿದರು ದೊರೆಗಳು 'ಬಿನ್ನಪ'ದಲ್ಲಿ, "ಅಕ್ಕರಮನಱಿಯದೊಕ್ಕಲಿಗರ್ಗಂ, ಪೆಣ್ಗಳ್ಗಂ ಸಕ್ಕದದಿಂ ತತ್ವಜ್ಞಾನಮಪ್ಪುದರಿದು ಎಂದು ಎಲ್ಲರುಮಱಿವಂತೆ ಕನ್ನಡವಾತಿನೊಳಂ ಮೆಲ್ನುಡಿಗಳಿಂದೆ ಅಖಿಲ ತತ್ವಾರ್ಥಂಗಳಂ ಸಂಗತಿಗೊಳಿಸಿ"ದುದಾಗಿ ಹೇಳಿದ್ದಾರ

ಈ ರಾಜರು ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ, ಹೊನ್ನಮ್ಮ, ಶೃಂಗಾರಮ್ಮ ಮೊದಲಾದ ಗಣ್ಯಕವಿಗಳಿಗೆ ಪ್ರೋತ್ಸಾಹ ನೀಡಿ ಅಂದಿನ ಕನ್ನಡ ಸಾಹಿತ್ಯೋತ್ಸವಕ್ಕೆ ಕಾರಣಕರ್ತರಾದರು, ಇಂಥ ಪ್ರಭುಗಳನ್ನು 'ಕರ್ನಾಟಕ ಭೋಜ' ರೆಂದು ಕರೆಯಬಹುದು ರಾಜರು ತಮ್ಮ ಪರಾಕ್ರಮದಿಂದ, ವಿಜಯ ಪರಂಪರೆಗಳಿಂದ, ಸಾತ್ವಿಕ ಜೀವನದಿಂದ ತಮ್ಮ ಆಸ್ಥಾನದ ಕವಿಗಳ ಕಾವ್ಯಗಳಿಗೆ ನಾಯಕರಾದರು ತಿರುಮಲಾರ್ಯನು ಈ ದೊರೆಗಳ ವಂಶಾವಳಿ, ಯಶಸ್ಸನ್ನು 'ಚಿಕದೇವರಾಜ ವಂಶಾವಳಿ', 'ಚಿಕದೇವರಾಜ ಯಶೋಭೂಷಣ', 'ಚಿಕದೇವರಾಜ ವಿಜಯ' ಎಂಬ ಗ್ರಂಥಗಳಲ್ಲಿ ನಿರೂಪಿಸಿದ್ದಾನೆ ಈ ಕವಿಯೇ ರಚಿಸಿದ 'ಅಪ್ರತಿಮ ವೀರಚರಿತೆ' ಎಂಬ ಅಲಂಕಾರ ಶಾಸ್ತ್ರದ ಗ್ರಂಥ ಚಿಕದೇವರಾಜರ ಬದುಕಿನ ಸಂಗತಿಯ ಉದಾಹರಣೆಗಳಿಂದಲೇ ಕೂಡಿದೆ

ಚಿಕದೇವರಾಜ ಒಡೆಯರ ಯಶಸ್ವಿಯಾದ ರಾಜ್ಯಾಡಳಿತದ ಕಾಲ ಕನ್ನಡ ಸಾಹಿತ್ಯ ಸಂಪನ್ನವಾದ ಉಜ್ಜ್ವಲ ಯುಗ. ಅವರ ಆಸ್ಥಾನದ ಕವಿಗಳು ಭಕ್ತಿಮತಪ್ರಧಾನವಾದ ಅನೇಕ ಗ್ರಂಥಗಳನ್ನು ಬರೆದರು ಚಿಕುಪಾಧ್ಯಾಯನು ಸುಮಾರು ಮೂವತ್ತು ಗ್ರಂಥಗಳನ್ನು ಬರೆದನು, ಇವು ಸ್ಥಳ ಮಹಿಮೆ, ದೇವತಾಸ್ತುತಿ, ಭಕ್ತಚರಿತ, ವಿಶಿಷ್ಟಾದ್ವೈತಮತದ ಸಾರಗಳನ್ನು ತಿಳಿಸುವಂಥವು; ಕೆಲವು ಚಂಪೂ ರೂಪದಲ್ಲಿ, ಕೆಲವು ಗದ್ಯದಲ್ಲಿ, ಕೆಲವು ಸಾಂಗತ್ಯ

ದಲ್ಲಿ ರಚಿತವಾಗಿವೆ. 'ಯಾದವಗಿರಿ ಮಹಾತ್ಮ್ಯ', 'ಪಶ್ಚಿಮ ರಂಗಧಾಮ ಸಾಂಗತ್ಯ', 'ದಿವ್ಯಸೂರಿಚರಿತೆ', 'ತಿರುವಾಯ್ಮೊಳಿ' ಎಂಬ ತಮಿಳು ಪ್ರಬಂಧದ ಕನ್ನಡ ವ್ಯಾಖ್ಯಾನ ಇವುಗಳ ಹೆಸರನ್ನು ನಿರ್ದೇಶಿಸಬಹುದು ಕನ್ನಡದಲ್ಲಿ ಸಿಕ್ಕಿರುವ ಮೊದಲನೆಯ ನಾಟಕವೆಂದು ಹೆಸರಾದ 'ಮಿತ್ರವಿಂದಾ ಗೋವಿಂದ'ವನ್ನು ಸಿಂಗರಾರ್ಯನು ಬರೆದನು "ಚಿಕದೇವ ಭೂಪಾಲ ಸಂತವಿಸಿದ ಸಣ್ಣ ಮಗಳು" ಎಂದು ಹೇಳಿಕೊಂಡಿರುವ ಶೃಂಗಾರಮ್ಮ ಇದೇ ಕಾಲದಲ್ಲಿ 'ಪದ್ಮಿನೀ ಕಲ್ಯಾಣ'ವನ್ನು ಸಾಂಗತ್ಯದ ರೂಪದಲ್ಲಿ ರಚಿಸಿದಳು ಈಕೆ ಹೊನ್ನಮ್ಮನ ಸಮಕಾಲೀನಳು (೧೬೮೦)

ಈ ಪ್ರಭುಗಳ ಕಾಲದಲ್ಲಿ ವಿಶಿಷ್ಟಾದ್ವೈತಮತದ ಪ್ರಕ್ರಿಯೆಗಳನ್ನೂ, ಶರಣಭಾವವನ್ನೂ ಹೊರಗೆಡಹುವ 'ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ'ದಂಥ ಗ್ರಂಥಗಳು ರಚಿತವಾದುವು ಕನ್ನಡ ಸಾಹಿತ್ಯ ಚಂಪು, ಷಟ್ಪದಿ, ತ್ರಿಪದಿ, ಸಾಂಗತ್ಯ, ಹಾಡು ಎಂಬ ಬಗೆಬಗೆಯ ದಾರಿಗಳಲ್ಲಿ ಹೊಮ್ಮಿ ಹೆಚ್ಚಿತು ಶ್ರೀ ಬಸವೇಶ್ವರ ಯುಗದ ಅನಂತರ ವಿಜಯನಗರದ ಸಾಮ್ರಾಜ್ಯ ಕರಗಿದ ಮೇಲೆ, ಈ ಮೈಸೂರ ಒಡೆಯರ ಕಾಲದಲ್ಲಿ ಆ ಹಿಂದಿನ ಎರಡು ಯುಗಗಳಲ್ಲಿ ಕಂಡ ಉದಾರಭಾವ ಮತ್ತೊಮ್ಮೆ ಸಾಹಿತ್ಯೋಪಾಸಕರಲ್ಲಿ, ನಾಯಕ ವ್ಯಕ್ತಿಗಳಲ್ಲಿ ತಲೆದೋರಿತು ಎಲ್ಲರಿಗೂ ತಿಳಿವು ದೊರಕಿ ಆನಂದವುಂಟಾಗಲಿ ಎಂಬ ಹಾರೈಕೆ ವಿಶೇಷವಾಯಿತು. ಕನ್ನಡ ಕೇವಲ ಪಂಡಿತ ಜನರ ಸೊತ್ತಾಗಿರದೆ ಪ್ರಜಾಸಾಹಿತ್ಯವಾಗುವ ಸೂಚನೆ ಕಂಡುಬಂದಿತು ಶ್ರದ್ಧಾಭಕ್ತಿಯ ತನಿಬೆಳಕು ಎಲ್ಲರಿಗೂ ಹಿತವನ್ನುಂಟುಮಾಡಿತು ಪ್ರಭುಗಳ ಸಾಹಿತ್ಯದ ಅಭಿರುಚಿಯೂ ಉದಾರ ಭಾವನೆಯೂ ಪ್ರಜೆಗಳಿಗೆ ಅರಿವನ್ನುಂಟುಮಾಡುವ ಕೆಲಸದಲ್ಲಿ ಫಲಕಾರಿಯಾದುವು ಧರ್ಮದ ತತ್ವವನ್ನು ತಿಳಿಯಲಾರದವರೂ ತಜ್ಞರಾದರು, ಅಲ್ಲದೆ ಗ್ರಹಿಸಿದುದನ್ನು ಹಾಡಿ ತೋರಿಸುವಷ್ಟು ಸಾರಸ್ವತ ಶಕ್ತಿಯನ್ನೂ ಗಳಿಸಿದರು. ಇದರಿಂದ ದೊರೆಗಳ ಆಸ್ಥಾನದಲ್ಲಿ ಎರಡು ಬಗೆಯ ಕಾವ್ಯಗಳು ಜನ್ಮ

ತಾಳುವಂತಾಯಿತು ಪ್ರೌಢಕಾವ್ಯಗಳು ಮತ್ತು 'ಹದಿಬದೆಯ ಧರ್ಮ'ದಂಥ ಸುಲಭ ಕಾವ್ಯಗಳು ದೊರೆಗಳ ಹಿರಿಯ ಆಸೆ ಸಫಲವಾಯಿತು ಅವರ ಸೇವಕ ವರ್ಗಕ್ಕೆ ಸೇರಿದ ಸಂಚಿಯ ಹೊನ್ನಮ್ಮ ಕವಯಿತ್ರಿಯಾಗಿ ರಾಜರ ಅಪೇಕ್ಷೆ ಈಡೇರಿತೆನ್ನಲು ಸಾಕ್ಷಿಯಾಗಿದ್ದಾಳೆ

ಹೊನ್ನಮ್ಮ 'ಹದಿಬದೆಯ ಧರ್ಮ'ವನ್ನು ಬರೆದದ್ದು ಚಿಕ ದೇವರಾಜರ ಆಳಿಕೆಯಲ್ಲಿ, ಈಕೆ ಬೇರೆ ಗ್ರಂಥಗಳನ್ನು ರಚಿಸಿದಂತೆ ಕಾಣುವುದಿಲ್ಲ ಕರ್ಣಾಟಕ ಕವಿಚರಿತೆಕಾರರು ಈ ಕಬ್ಬಿಗಿತಿಯ ವಿಚಾರವಾಗಿ, ಕವಿಚರಿತೆಯ ಎರಡನೆಯ ಸಂಪುಟದ ೫೦೫ನೆಯ ಪುಟದಲ್ಲಿ ವಿಶದವಾಗಿ ಹೇಳಿರುತ್ತಾರೆ

## ೩. ಕವಿ ವಿಷಯ, ಕಾವ್ಯದ ಹುಟ್ಟು

'ಹದಿಬದೆಯ ಧರ್ಮ'ದಿಂದ ಹೊನ್ನಮ್ಮನ ವಿಷಯವಾಗಿ ಕೆಲವು ಸಂಗತಿಗಳು ತಿಳಿಯುತ್ತವೆ 'ಆನಾವಳೆನ್ನ ಮುನ್ನಿರವಾವುದು' (ಸಂಧಿ ೧, ಪದ್ಯ ೩೮) ಎಂದು ಹೇಳಿರುವುದರಿಂದ ಈಕೆಯ ಪೂರ್ವಸ್ಥಿತಿ ಅಷ್ಟು ಅನುಕೂಲವಾಗಿರಲಿಲ್ಲವೆಂದು ತೋರುತ್ತದೆ 'ಪಾದದೂಳಿಗದೊಳು ಬಳೆದ ಬಾಲಕಿ' (ಸಂಧಿ ೧, ಪದ್ಯ ೪೫) ಎಂದು ಅರಿಕೆ ಮಾಡಿಕೊಂಡಿರುವುದರಿಂದ ಹೊನ್ನಮ್ಮ ಕಿರಿಯತನದಿಂದಲೂ ಒಡೆಯರ ಪಟ್ಟದರಸಿಯಾದ ಎಳಂದೂರ ದೇಪಾಜಮ್ಮಣ್ಣಿಯವರನ್ನು ಓಲೈಸಿಕೊಂಡು ಇದ್ದಳೆಂದು ತೋರುತ್ತದೆ ಆಮೇಲೆ ದೊರೆಗಳ ಪರಿಜನರ ಗುಂಪಿಗೆ ಸೇರಿ ಅರಸರ ಸಂಚಿಯ ಸೇವಕಳಾಗಿದ್ದಳೆಂದು ತಿಳಿದುಬರುತ್ತದೆ. ಈ ಕೆಲಸದಲ್ಲಿ ತುಂಬ ಗೌರವವನ್ನೂ, ಅಭಿಮಾನವನ್ನೂ ವಹಿಸಿದ್ದಳೆಂಬುದು ಆಕೆ ಪ್ರತಿ ಸಂಧಿಯ ಕಡೆಯ ಪದ್ಯವನ್ನು ಹಾಡುವ ರೀತಿಯಿಂದಲೇ ಗೊತ್ತಾಗುತ್ತದೆ, ಆಕೆ ತನ್ನ ವೃತ್ತಿಯಲ್ಲಿ ಕಾಣುವ ಮೆಚ್ಚಿಗೆ ತಿಳಿಯುತ್ತದೆ. ಉದಾಹರಣೆ.

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಪ್ಪಿದುದ್ವೈದನೆಯ ಸಂಧಿ
ಸನ್ನುತ ಗುಣಸಂಬಂಧಿ (೫, ೫೦)

ರಾಜದಂಪತಿಗಳು ಹೊನ್ನಮ್ಮನ ಓದಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ ವಿದ್ಯಾಗುರುವಾದ ಅಳಸಿಂಗರಾರ್ಯನು (ಮಿತ್ರವಿಂದಾ ಗೋವಿಂದದ ಕವಿ) ಹೊನ್ನಮ್ಮನಿಗೆ ಕನ್ನಡ, ಸಂಸ್ಕೃತ ಸಾಹಿತ್ಯಾಭ್ಯಾಸವನ್ನು ಮಾಡಿಸುತ್ತಾನೆ ರಾಜರ ಕರುಣೆಯಿಂದ 'ಕರ್ಬೊನ್ನು ಚೆಂಬೊನ್ನಾದಂತೆ' ಹೊನ್ನಮ್ಮ ವಿದ್ಯಾವತಿಯಾಗುತ್ತಾಳೆ ಈಕೆಯ ಸಂಸ್ಕೃತ ಭಾಷಾ ವ್ಯಾಸಂಗವೂ, ಶಾಸ್ತ್ರಗ್ರಂಥ, ಧರ್ಮಗ್ರಂಥಗಳ ಪರಿಚಯವೂ, ವಿಶಿಷ್ಟಾದ್ವೈತನಿಷ್ಠೆ ಮತ್ತು ಅಭ್ಯಾಸವೂ ಎಷ್ಟು ಆಳವಾಗಿದೆ ಎನ್ನಲು ಈ ಗ್ರಂಥದ ಪೀಠಿಕಾಸಂಧಿ, ಎರಡು ಮತ್ತು ಮೂರನೆಯ ಸಂಧಿಗಳು ಮತ್ತು ಒಂಬತ್ತನೆಯ ಸಂಧಿ ದೃಷ್ಟಾಂತವಾಗಿವೆ ಗೃಹ್ಯಸೂತ್ರಾದಿಗಳನ್ನು ಅರಿತು, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಶ್ರೀವಿಷ್ಣು ಪುರಾಣಾದಿಗಳನ್ನೂ ಪಾರಾಯಣ ಮಾಡಿದ್ದಳು ಎಂಬುದು ಗೊತ್ತಾಗುತ್ತದೆ ತಾನು 'ಸ್ವೀಕರಣ'ಮಾಡಿದ ಗ್ರಂಥಗಳು, ತನ್ನ ಕಾವ್ಯದ ಆಕರಗಳು ಯಾವುವೆಂಬುದನ್ನು ಹೇಳಿದ್ದಾಳೆ ಒಂಬತ್ತನೆಯ ಸಂಧಿಯ 'ಸಮ್ಮತಿ ವಚನ'ಗಳ ಪಕ್ಕದಲ್ಲಿ ಆಕರದ ಅಧ್ಯಾಯದ ಹಾಗೂ ಶ್ಲೋಕದ ಸಂಖ್ಯೆಯನ್ನು ತಿಳಿಸಿದ್ದಾಳೆ.

ಸುಸಂಸ್ಕೃತಳಾದ ಹೊನ್ನಮ್ಮನಿಗೆ ಲೋಕಾನುಭವವುಂಟಾಗುತ್ತದೆ ಹೆಣ್ಣಿನ ಬಾಳನ್ನು, ಜೀವನ ಲಕ್ಷಣವನ್ನು ಆಕೆ ಅರಿಯುತ್ತಾಳೆ, ನೀತಿಯ ನೆಲೆಗಟ್ಟು ಯಾವುದೆಂಬುದನ್ನು ಗ್ರಹಿಸುತ್ತಾಳೆ. ಅರಸರ ಆಸ್ಥಾನದ ಉದಾತ್ತ ಆವರಣ ಹೊನ್ನಮ್ಮನಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ ಜ್ಞಾನಿಯಾದ ಹೊನ್ನಮ್ಮ 'ಕನ್ನಡ

ಜಾಣೆ'ಯಾಗುತ್ತಾಳೆ. ಹೆಚ್ಚೇನು? 'ಸರಸ ಸಾಹಿತ್ಯದ ವರ ದೇವತೆ' ಆಗಿಬಿಡುತ್ತಾಳೆ ಆದರೂ ಆಕೆಯ ವ್ಯಕ್ತಿತ್ವ ವಿಚಾರ ಗಳೆರಡೂ ಮಾತಿಲ್ಲದ ಮೂಗರಂತಿರುತ್ತವೆ ಆಕೆಯ ಪಾಂಡಿತ್ಯ ಪ್ರತಿಭೆಯ ವಿಷಯ ಆಕೆಯ ಗುರುವಾದ ಅಳಸಿಂಗರಾರ್ಯನಿಂದ ಚಿಕದೇವರಾಜ ಒಡೆಯರಿಗೆ ತಿಳಿಯುತ್ತದೆ ಆಕೆ ತಿಳಿಗನ್ನಡದಲ್ಲಿ ಕಾವ್ಯವನ್ನು ಕಟ್ಟಿ ಹಾಡಲು ಸಾಕಷ್ಟು ಬಲ್ಲಿದಳಾಗಿರುವಳೆಂದು ಆ ರಾಜಸಭೆಯ ಸಾಹಿತಿಗಳೆಲ್ಲರೂ ಮನಗಾಣುತ್ತಾರೆ

ಅರಳುವ ಹೂವಿನ ಪರಿಮಳ ಹರಡದೆ ಹೋಗುವುದೆ? ಒಂದು ದಿನ ಒಳ ಓಲಗದಲ್ಲಿದ್ದ ರಾಜರು ತಮ್ಮ ಸ್ನೇಹದೃಷ್ಟಿಯನ್ನು ಹೊನ್ನಮ್ಮನ ಕಡೆಗೆ ಬೀರುತ್ತಾರೆ ಅವಳನ್ನು ಮನ್ನಿಸಲೆಂದು ಮುಖ್ಯ ರಾಣಿಯಾದ ದೇವಮ್ಮನ ಮುಖವನ್ನು ನೋಡಿ—ಅರಸಿ ಕೇಳು, ಪರಮಾರ್ಥವಾದಿ ಅಳಸಿಂಗರಾರ್ಯನು ಈ ಹೊನ್ನಿ 'ಸರಸ ಸಾಹಿತ್ಯದ ವರದೇವತೆ'ಯೆಂದು ಬಣ್ಣಿಸಿರುತ್ತಾನೆ ಓದು ಕಲಿಸಿದವರು ಹೀಗೆ ಹೇಳಬೇಕಾದರೆ ಶಿಷ್ಯರಲ್ಲಿ ತಿರುಳು ಇರಲೇ ಬೇಕು, 'ಇವಳು ಕಾವ್ಯಾಲಂಕಾರ ನಾಟಕಗಳ ಪವಣಿಗೆಯಿರವ ಬಲ್ಲವಳು', ಈಕೆಯ ಕಾವ್ಯ ಕೇಳಲು ನನಗೆ ತುಂಬ ಕುತೂಹಲ, ಈಕೆಯಿಂದ 'ಕವಿತೆಯೊಂದನು ಪೇಳಿಸು' ಎಂದು ಹೇಳುತ್ತಾರೆ ಹೊನ್ನಮ್ಮನಿಗೆ ತಾಯಿಯಂತಿರುವ ರಾಣಿ 'ಹೊನ್ನಿ ಬಾ ಹೊನ್ನಕ್ಕ ಬಾ' ಎಂದು 'ಕರವಿಡಿದು' ಮಮತೆಯಿಂದ ಮಾತನಾಡುತ್ತಾರೆ; ಅವರು ಒಳ್ಳೆಯ ವಿದ್ಯಾವತಿ, ತಿಳಿವಿನ ಸಫಲತೆ ಎಲ್ಲಿದೆ ಎಂಬುದನ್ನು ಅರಿತವರು 'ಕಲಿತ ಬಿಜ್ಜೆಯ ಬಲ್ಲವರಿಗೆ ಕೇಳಿಪುದೈಸೆ ಫಲ'. ಧೈರ್ಯವಾಗಿ ಕಾವ್ಯವನ್ನು ಹಾಡು ಕಂದ, ಕಟ್ಟಾಣಿ, ಎಂದು ಹೊನ್ನಮ್ಮನಿಗೆ ಪ್ರೋತ್ಸಾಹ ಕೊಡುತ್ತಾರೆ ಕಾವ್ಯರಚನೆಗೆ ಮೊದಲು ಕೃತಜ್ಞ ಸ್ವಭಾವದ ಹೊನ್ನಮ್ಮ ರಾಜಭಕ್ತಿಯನ್ನು ತೋರಿಸುತ್ತಾಳೆ, ಶ್ರದ್ಧಾಂಜಲಿಯನ್ನು ಒಡೆಯರಿಗೆ ನಿವೇದಿಸು ತ್ತಾಳೆ:

ಅರಸ ಕೇಳಿನಗೆ ನಿನ್ನಡಿಯೊಳಗಮೊಂ
ದರಸಿಯರಡಿಯೊಲ್ಮೆಯೊಂದು
ಪರಿಕಿಪೊಡಖಿಳಾರ್ಥ ಸಾಧನಂಗಳಿಗಿವು
ನೆರವಾಗಿಹವು ನೇಮದೊಳು (೧, ೩೧)

ಕಾವ್ಯಕಲೆಯನ್ನು ಅರಿತ ರಾಜರು ಹೊನ್ನಮ್ಮ ಎಂಥ ಕಾವ್ಯ ರಚಿಸಬೇಕೆಂಬುದನ್ನು ತಾವೇ ತಿಳಿಯಹೇಳುತ್ತಾರೆ, ಈಕೆ ಕಾವ್ಯ ಶಕ್ತಿಯನ್ನು ಪಡೆದಿದ್ದಾಳೆ ಆದ್ದರಿಂದ

ಪವಣಿಗೆಯೊಪ್ಪೆ ಪುರುಳು ಪೊಗರೇರೆಯಂ
ಗವಿಸೆಯಲಂಕಾರಗಳು
ಕವಿದು ಪರಿಯೆ ರಸದೊಳ್ಗಂಪು (೧, ೨೬)

ಹೊನ್ನಮ್ಮನ ಕಾವ್ಯ ಉದಿಸಲಿ ಎಂದು ಇಷ್ಟಪಡುತ್ತಾರೆ. ಹೊನ್ನಮ್ಮ ಪ್ರೌಢಕಾವ್ಯ ರಚಿಸಬೇಕೆಂದು ರಾಜರ ಆಶಯವಿದ್ದಿತೇನೊ? ಹೊನ್ನಮ್ಮ ಕಾವ್ಯ ಹೆಣೆಯಲು ಸಿದ್ಧವಾಗುತ್ತಾಳೆ; ಆದರೆ

ಎನ್ನ ಕವಿತೆಗಬ್ಬದ ಬಗೆ
ಈ ದಿವ್ಯ ಸಭೆಗೆ ಸಂಗತಮೆ (೧, ೪೫)

ಎಂದು ಶಂಕಿಸುತ್ತಾಳೆ ರಾಜಸಭೆ ತನ್ನ ಕಾವ್ಯ ಮೆಚ್ಚಬಹುದೆ, ಇಲ್ಲವೆ ಎಂದು ಸ್ವಂತ ಕಬ್ಬಿಗಿತಿಯೇ ತರ್ಕಿಸಬೇಕಾದರೆ, ಆಕೆಯ ಕಾವ್ಯದಲ್ಲಿ ಹೊಸತನ ವೈಲಕ್ಷಣ್ಯಗಳು ಇದ್ದಿರಬಹುದು

## ೪. ಕಾವ್ಯದ ಉದ್ದೇಶ

ಈ ಕಾವ್ಯವನ್ನು ಹಾಡುವುದಕ್ಕೆ ಮೊದಲು ಹೊನ್ನಮ್ಮ ಧೈರ್ಯದಿಂದ ತನ್ನ ಗ್ರಂಥ ಯಾವ ಬಗೆಯದು, ಮಹಾಕಾವ್ಯದ ನಿಯಮಗಳಿಗೆ ಒಳಪಟ್ಟಿದೆಯೆ, ಇಲ್ಲವೆ ಎಂಬುದನ್ನು ಸ್ಪಷ್ಟ ಪಡಿಸುತ್ತಾಳೆ :

ಪದಿನೆಂಟು [ ಬಣ್ಣನೆ]ಯಿಂದು ಬವಣಿಗೊಂಡು
ಪದಗೆಟ್ಟು ಬಯಲ ಬಣ್ಣಿಸದೆ
ಮುದದೊಡನಿಹಪರದೇಳ್ಗೆವಡೆಯೆ ಹದಿ
ಬದೆಯ ಧರ್ಮವ ಬಣ್ಣಿಪೆನು (೧, ೪೬)

ನಾನು ಸಂಪ್ರದಾಯಬದ್ಧವಾದ ಕಾವ್ಯವನ್ನು ರಚಿಸುವುದಿಲ್ಲ; ಧರ್ಮಕಾವ್ಯವನ್ನು, 'ಸ್ತ್ರೀಗೀತ'ವನ್ನು, 'ಪತಿವ್ರತಾ ಗೀತ'ವನ್ನು ಹಾಡುತ್ತೇನೆ ಇದರಿಂದ ನನ್ನ ಸೋದರಿಯರಿಗೆ (ಸಂಸಾರವಂದಿಗರಾದಂಥವರಿಗೆ) ಇಹವೂ ಉಂಟು, ಪರವೂ ಉಂಟು ಎಂದು ಹೊನ್ನಮ್ಮ ಸಾರುತ್ತಾಳೆ

'ನಿರ್ಮಲ ಸತಿಯರ ಧರ್ಮ' ಈ ಕಾವ್ಯದ ತಿರುಳು, ಕೆನೆ ವಿಷಯವನ್ನು ಸಂಗ್ರಹಿಸುವುದರಲ್ಲಿ ಪೂಜ್ಯರಿಗೆ ನಾನು ಕೇವಲ ಋಣಿ

ಆದಿಕಾವ್ಯದೊಳೈದನೆಯ ವೇದದೊಳು ಮ
ನ್ವಾದಿಕ ಧರ್ಮಶಾಸ್ತ್ರದೊಳು
ಭೇದಿಸಿ ಪಿರಿಯರು ಪೇಳಿದುದನೆ ಕೃತಿ
ಗೈದಾನು ಕಿವಿಗೊಳಿಸಿದೆನು (೧, ೫೧)

ಮಹನೀಯರು ವಿವರಿಸಿದುದನ್ನೇ ನಾನು ಕಾವ್ಯರೂಪದಲ್ಲಿ ಹಾಡುತ್ತೇನೆ, ಸೊಗಸುವಂತೆ ನೊಲ್ಲಿಸುತ್ತೇನೆ ಎಂದು ಹೊನ್ನಮ್ಮ ನಮ್ರತೆಯಿಂದ ಹೇಳುತ್ತಾಳೆ. ಪಾತಿವ್ರತ್ಯದ ತತ್ವ ಮನುವಿನಂಥ ಮಹಾಮುನಿಗಳಿಂದ ನಿರೂಪಿತವಾದುದು, ಆರ್ಷ ಮತ್ತು ಪುರಾಣ ಯುಗಗಳ ಶ್ರೇಷ್ಠ ಮಹಿಳೆಯರ ನಡತೆಯಲ್ಲಿ ಮೂಡಿದುದು; ಅಮರವಾದುದು ಇಂಥ ಘನವಿಷಯವನ್ನು ನನ್ನ ಕಾವ್ಯಕ್ಕೆ ಅಡಿಗಲ್ಲಾಗಿ ಮಾಡಿಕೊಂಡು ತತ್ವಪ್ರಧಾನವಾದ ಕಾವ್ಯವನ್ನು ರಚಿಸುತ್ತೇನೆ—ಎಂದು ಹೊನ್ನಮ್ಮ ವಿಶದಪಡಿಸುತ್ತಾಳೆ. ಮನೆ ಗೆಲಸದಲ್ಲಿ ತೊಡಗಿರುವ ಗೃಹಿಣಿಯರಿಗೆ ಬಾಳಿನ ಧ್ಯೇಯ

ವೊಂದನ್ನು ತೋರಿಸಬೇಕು ಗೃಹಿಣಿಯ ಭಾಗಕ್ಕೆ ಸೇವೆಯೇ ಪೂಜೆ, ತನ್ನವರ ಹಿತಚಿಂತನೆಯೇ ಆಕೆಯ ಶ್ರೇಯಸ್ಸು. 'ಸಂಸರಿಸುವ' ಸತಿಯರಿಗೆ ಆತ್ಮೋನ್ನತಿಯನ್ನು ಉಂಟುಮಾಡ ಬಲ್ಲ ವ್ರತವೇ ಪತಿವ್ರತ ಅಥವಾ ಪತಿಪ್ರೇಮ ಗೃಹಿಣಿಯ ಬಾಳಿನ ಹೆಗ್ಗುರಿಯನ್ನು ಆಕೆಗೆ ಖಚಿತವಾಗಿ ತಿಳಿಯಹೇಳ ಬೇಕೆಂಬುದೇ ಹೊನ್ನಮ್ಮನ ಆಶಯ ಇದೇ ಈ ಕಾವ್ಯದ ದೊಡ್ಡ ಉದ್ದೇಶ

## ೫. 'ಹದಿಬದೆಯ ಧರ್ಮ'ದ ಸಾಧ್ವಿಯ ಚಿತ್ರ

ಈ ಕಾವ್ಯದಲ್ಲಿ ಕಂಗೊಳಿಸುವ ಪತಿವ್ರತೆ ತತ್ವದ ಪುತ್ತಳಿ ಯಲ್ಲ, ಜೀವಕಾಂತಿಯ ಹೆಣ್ಣು ಈ ಸಜ್ಜನೆ ಓದುಗರ ಕಣ್ಣು ಮುಂದೆಯೇ ಬೆಳೆಯುತ್ತಾಳೆ ಈಕೆಯ ಮುಗ್ಧವಾದ ಬದುಕು ನೋಡುನೋಡುವಾಗಲೇ ಸಾರ್ಥಕಗೊಳ್ಳುತ್ತದೆ, ಈಕೆಯನ್ನು ಸತ್ವಸ್ಥಳನ್ನಾಗಿ ಮಾಡುತ್ತದೆ ಈ ಕೋಮಲೆ ಅತ್ತೆಯಮನೆಗೆ ಬಂದ ಹೊಸತರಲ್ಲಿ (ಸಂಧಿ ೬) ಈಕೆಗೆ ಪತಿದರ್ಶನದ ಸಮಯ ಬರುತ್ತದೆ ಇನಿಯನ ಗುರುತಿಲ್ಲ, ಮಾತನಾಡಿಸಲು ಧೈರ್ಯ ಸಾಲದು ಮನಸ್ಸಿನ ಒಲವನ್ನು ಹೊರಸೂಸಲು ಈ ಸರಳೆಗೆ ಧಾರ್ಷ್ಟ್ಯವಿಲ್ಲ ಈ ಕಿರಿಯಳ ಚೆಲುವು ಸೊಗಸುಗಳು ಬಹು ರಮ್ಯವಾಗಿ ಚಿತ್ರಿತವಾಗಿವೆ ಪತಿಯನ್ನು ಪ್ರೀತಿಸುವುದೇ ಈ ಎಳೆಯಳ ಸ್ವಭಾವವಾಗಿಬಿಡುತ್ತದೆ (ಸಂಧಿ ೩) ತನ್ನ ಸಿಂಗಾರದ ವಿಚಾರದಲ್ಲಿ ನಲ್ಲನ ರುಚಿ ಹೇಗಿದೆಯೆಂಬುದನ್ನು ಈ ಚದುರೆ ತಿಳಿದಿದ್ದಾಳೆ 'ಆವ ಪರಿಯ ದೇಸಿ ಆಣ್ಮಗೆ ಬಗೆವರ್ಪುದು' ಅಂಥ ಅಂದವಾದ ಉಡಿಗೆ ತೊಡಿಗೆಗಳನ್ನೇ ಧರಿಸುತ್ತಾಳೆ, ಪ್ರಿಯನ ಚಿತ್ತವನ್ನು ತನ್ನ ಕಡೆಗೆ ಮತ್ತಷ್ಟು ಸೆಳೆಯುತ್ತಾಳೆ ಪತಿ ಯೊಡನೆ ಹೇಗೆ ವರ್ತಿಸಬೇಕು, ಹೇಗೆ ನಡೆದುಕೊಳ್ಳಬೇಕು ಎಂಬ ವಿಚಾರ ಈ ತರುಣಿಗೆ ಒಂದು ಶಾಸ್ತ್ರದಷ್ಟು ಮಹತ್ವದ್ದಾಗು ತ್ತದೆ. 'ಇಂತು ನೋಡುವೆನಿಂತು ನುಡಿವೆನಿಂತಿರ್ಪೆ' (ಸಂಧಿ ೩).

ಕಾಂತನು ಮನೆಗೆ ಬಂದರೆ ಈ ರಮಣಿಯ ಸಡಗರ ಮೇರೆ ಮೀರುತ್ತದೆ ಮನದ ಉಬ್ಬಿನಿಂದ ಆತನನ್ನು ಉಪಚರಿಸಲು ಧಾವಿಸುತ್ತಾಳೆ ವಲ್ಲಭನ ಪರಿಚರ್ಯೆಯೇ ಈ ಪ್ರೇಮಿಯ ಸುಖವಾಗುತ್ತದೆ

ಸಂಸಾರದ ತಾಪತ್ರಯ ಮೆಲ್ಲಮೆಲ್ಲಗೆ ಈ ಸುಕುಮಾರಿಯನ್ನು ಬಾಧಿಸಲು ಪ್ರಾರಂಭಿಸುತ್ತದೆ ಆದರೂ ಈಕೆ ಧೈರ್ಯಗುಂದುವುದಿಲ್ಲ ಪತಿಗೆ ಸಿಟ್ಟುಬಂದಿದೆ ಕೂಗಾಡುತ್ತಿದ್ದಾನೆ (ಸಂಧಿ ೩) ಆಗ ಉಚಿತಜ್ಞಳಾದ ಈ ಯುವತಿ ನಮ್ರತೆಯಿಂದ ಒಪ್ಪುತ್ತಾಳೆ ತಾತ್ಕಾಲಿಕವಾಗಿ ಹೆದರಿ ಹಿಂದೆಗೆದರೂ, ಪತಿಯ ಕೋಪ ಆರಿದಮೇಲೆ ಬಹಳ ಜಾಣತನದಿಂದ ಆತನ ತಪ್ಪು ಹೀಗಿದೆಯೆಂದು ವಿನಯದಿಂದ ತೋರಿಸಿಕೊಡುತ್ತಾಳೆ ಪತಿಯಲ್ಲಿ ಸರ್ವಸ್ವವನ್ನು ಕಾಣುವ ಶಕ್ತಿಯನ್ನು ಹೊಂದಿದ ಈ ಸಾಧ್ವಿ ಆತನ ತಂದೆತಾಯಿಗಳನ್ನೂ, ಬಂಧುಬಳಗದವರನ್ನೂ ತುಂಬ ಸ್ನೇಹ ಸನ್ಮಾನದಿಂದ ಕಂಡರೆ ಆದರಲ್ಲಿ ಸೋಜಿಗವೇನಿದೆ? (ಸಂಧಿ ೪)

ಮನೆಯೆಂಬ ಶಾಲೆ ಈಕೆಗೆ ತಕ್ಕದ್ದನ್ನೇ ಮಾಡಲು ಬಲವನ್ನು ಕೊಡುತ್ತದೆ ತಾಯಾದ ಈಕೆ ವತ್ಸಲತೆಯಿಂದ ಹೆಣ್ಣುಮಕ್ಕಳನ್ನು ಮನ್ನಿಸುತ್ತಾಳೆ ತಪ್ಪುಮಾಡಿದ ಮಗಳಿಗೆ ಮನಕರಗಿ ಆದರೂ ನ್ಯಾಯನಿಷ್ಠುರವಾಗಿ ಬುದ್ಧಿ ಕಲಿಸುತ್ತಾಳೆ (ಸಂಧಿ ೫) ಈ ಒಳ್ಳೆಯ ತಾಯಿ ತನ್ನ ಹೆಣ್ಣುಮಕ್ಕಳಿಗೆ ಕೊಡುವ ಶಿಕ್ಷಣ ಅವರಿಗೆ ಉತ್ತಮವಾದದ್ದು, ತನಗೆ ಕೀರ್ತಿ ತರುವಂತಹುದು

ಇಷ್ಟುಹೊತ್ತಿಗೆ ಈ ಮಹಿಳೆ ಸಂಸಾರದಲ್ಲಿ ನುರಿತು ಆ ದೊಡ್ಡ ಕುಟುಂಬದ ಕಾರ್ಯಾಡಳಿತವನ್ನು ನಿರ್ವಹಿಸಲು ಶಕ್ತಳಾಗಿದ್ದಾಳೆ ಈ ಪತಿವ್ರತೆಯ ಬದುಕು ಈಗ ಶುಭವಾಗಿದೆ (ಸಂಧಿ ೬) ಈಕೆ ಮನೆಯ ಅನ್ನಪೂರ್ಣೆಯಾಗಿದ್ದಾಳೆ. ಎಲ್ಲರಿಗೆ ಮೇಲ್ಮೆಯನ್ನು

ಕೋರುತ್ತ, ಎಲ್ಲರಿಗಾಗಿ ದುಡಿಯುವುದೇ ಈಕೆಯ ಸ್ವಭಾವವಾಗಿ ಪರಿಣಮಿಸಿದೆ ಪತಿವ್ರತಾಧರ್ಮ ರಕ್ತಗತವಾಗಿದೆ ಮಕ್ಕಳಿಗೆ ಚಿಕ್ಕವರಿಗೆ ಈ ಸುವ್ರತೆ ಮೇಲ್ಪಂಕ್ತಿಯಾಗಿದ್ದಾಳೆ ಈಕೆ ನಿಷ್ಠಾವಂತಳು, ಉದ್ಯೋಗಿ, ದೈವಭಕ್ತೆ ಶ್ರೇಯಸ್ಸಿನ ದಾರಿ ಈಕೆಗೆ ತಿಳಿದಿದೆ ಈ ಆದರ್ಶ ಗೃಹಿಣಿಯ ಮನಸ್ಸು ಜಗಕ್ಕಿಂತ ಮಿಗಿಲಾಗಿದೆ, ಸಕಲರಿಗೆ ಮಂಗಳವನ್ನು ಹಾರೈಸುವಷ್ಟು ಮಹತ್ತರ ವಾಗಿದೆ ಶುಚಿಯಾಗಿ ಈ ನಿರ್ಮಲೆ ಅಡಿಗೆ ಮಾಡಿದ್ದಾಳೆ ಆತಂಕವಿಲ್ಲದೆ ತಿಳಿಮನದಿಂದ ಈ ಪುಣ್ಯವಂತಳು ದೇವರಮನೆ ಯಲ್ಲಿ ಕುಳಿತಿದ್ದಾಳೆ ಭಕ್ತಿಯಿಂದ ಬಾಗಿರುವಂತಿದೆ (ಸಂಧಿ ೮, ಪದ್ಯ ೩೦) ಕೈಗೆ ಬಿಡುವಿಲ್ಲ ಭಾವ ಬಂಜೆಯಲ್ಲ ರಂಗವಲ್ಲಿಯನ್ನು ಇಡುತ್ತಿದ್ದಾಳೆ ಸಾಲು ದೀಪವನ್ನು ಹೊತ್ತಿಸಿದ್ದಾಳೆ ಆ ಸೊಡರಿನ ಕಾಂತಿಯಂತೆ ಈಕೆಯ ಬಗೆಯಲ್ಲೂ ಒಂದು ಜ್ಯೋತಿ ಉರಿಯು ತ್ತಿದೆ ಎಂಬಂತೆ ಈ ಗುಣಸಂಪನ್ನೆಳ ಮುಖ ತೇಜಸ್ಸಿನಿಂದ ಬೆಳಗುತ್ತಿದೆ. ಕೆಲಸದಲ್ಲಿದ್ದು, ಈ ಮಾನ್ಯಳು ಅದನ್ನು ಮೀರಿ ದ್ದಾಳೆ ಸುಕೃತಶಾಲಿಯಾದ ಈ ಹದಿಬದೆ ಎಲ್ಲರಿಗೆ ಪೂಜ್ಯಳು, ಆದರಣೀಯಳು

ಈ ಕಾವ್ಯದಲ್ಲಿ ಹೊನ್ನಮ್ಮ ಸಾಧ್ವಿಯೊಬ್ಬಳ ದಿನಚರಿಯನ್ನು ಕಾಣಿಸಿದ್ದಾಳೆ ಇಲ್ಲಿ ಹೊಳೆಯುವ ಪತಿವ್ರತೆಯ ಸ್ವಭಾವದ ಚಿತ್ರ ಈಕೆಯ ಕಾರ್ಯಕಲಾಪಗಳಿಂದಲೇ ಓದುಗರಿಗೆ ಹೆಚ್ಚು ಪರಿಚಯ ವಾಗುತ್ತದೆ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಇದ್ದರೂ ಈ ಗುಣವಂತೆ ತುಂಬು ಜೀವನವನ್ನು ನಡಸುತ್ತಾಳೆ ಈಕೆಯ ಘನವಾದ ನಡೆನುಡಿ, ಈಕೆಯ ಸಂಸ್ಕೃತಿಯ ಹೊರಹೊಮ್ಮು, ಈಕೆಯ ಸದಾಚಾರ, ಈಕೆಯ ವ್ಯಕ್ತಿತ್ವ ಎಷ್ಟು ಸಮಂಜಸ ವಾಗಿ ಹೊಂದಿವೆ ಈ ಕಾವ್ಯ ವ್ಯಕ್ತಿಯೊಂದರ ಕಥೆಯಲ್ಲ, ಮನೆಯ ಯಜಮಾನಿಯಾದ ಉತ್ತಮಳ ನಿತ್ಯಗಟ್ಟಲೆ ಕೆಲಸಗಳ 'ಕೈಪಿಡಿ' ಅಬಲೆಯಾದ ಈಕೆ ವಿಚಕ್ಷಣೆಯಿಂದ, ಆನಂದ ದಿಂದ, ಕಷ್ಟಸಾಧ್ಯವಾದ ಕರ್ತವ್ಯಗಳನ್ನು ಕೈಕೊಳ್ಳುತ್ತಾಳೆ.

ಇವು ಶ್ರಮದ, ನೇಮದ ಕಜ್ಜಗಳು ಹಿಡಿದ ಕೆಲಸಗಳನ್ನು ಪ್ರಸನ್ನತೆಯಿಂದ, ನಿರಲಸತೆಯಿಂದ ಕೊನೆಮುಟ್ಟಿಸುವ ಛಲ ಬಲಗಳು ಪತಿವ್ರತೆಗೆ ಇವೆ.

'ಪರಮ ಪತಿವ್ರತೆಯರ ನಡತೆ' ಈ ಕಾವ್ಯದಲ್ಲಿ ಪ್ರತಿಪಾದಿಸಿರುವ ವಿಷಯವಾಗಿದೆ ಯತಿ ವ್ರತಿಗಳ ಉಗ್ರತಪವನ್ನು ಮೀರಿಸಬಲ್ಲ ಮಹಿಮಾ ವಿಶೇಷತೆ ಸುಚರಿತೆಯ ಮನೆಗೆಲಸಗಳಿಗೆ ಲಭಿಸಿದೆ:

ಕಡುನೇಮವಿಡಿದು ಕಕ್ಕಸಗೊಂಡು ಮುನಿವರ
ರೊಡರಿಸುವುಗ್ರತಪಗಳು
ಮಡದಿಯರಿನಿಯರ ಮನವರಿತೆಸಗುವ
ನಡತೆಗಳಿಗೆ ಪಡಿಯಲ್ಲ (೨, ೨೮)

ಆದುದರಿಂದ ಕುಲಸತಿಯ ಪ್ರತಿದಿನದ ಕೆಲಸಗಳ ವಿಚಾರದಲ್ಲಿ ವಿವರವಾಗಿ ತಿಳಿದುಕೊಳ್ಳಬೇಕೆಂದು ಓದುಗರಿಗೆ ಆದರ ಕುತೂಹಲಗಳು ಜನಿಸುತ್ತವೆ (ಎಂಟನೆಯ ಸಂಧಿ)

## ೬ 'ಹದಿಬದೆಯ ಧರ್ಮ'ದಲ್ಲಿ ನೀತಿಯ ಸ್ಥಾನ

ಮನುಷ್ಯನ ಬದುಕು ಕಾವ್ಯಕ್ಕೆ ವಸ್ತುವಾಗುತ್ತದೆ, ಹಾಗೆಯೇ ಆತನ ಬಾಳ ಬೆಳವಣಿಗೆಗೆ ಸಹಾಯ ಮಾಡುವ ಧರ್ಮ ನೀತಿಗಳಿಗೂ ಕಾವ್ಯದಲ್ಲಿ ಎಡೆ ದೊರಕುತ್ತದೆ "ನೀತಿಯನ್ನು ಸುಲಭವಾದ ಮಾತುಗಳಿಂದ ಹೇಳಹೊರಟ ಗ್ರಂಥ ಸಾಹಿತ್ಯವೇ" ಆಗುತ್ತದೆ ಕನ್ನಡದ ಪ್ರಾಚೀನ ಸಾಹಿತ್ಯ ವಿಶೇಷವಾಗಿ ನೀತಿಯನ್ನು ಉಪದೇಶಿಸುವಂತಹುದೂ ಮತ ಪ್ರಧಾನವಾದದ್ದೂ ಆಗಿದೆ ಹಿಂದಿನ ಕವಿಗಳ ಸ್ವಭಾವಕ್ಕೆ ಅದು ಸಹಜವಾಗಿತ್ತು ಹೊನ್ನಮ್ಮ 'ಉದಾರ ಜೀವಿ' ತನ್ನ ಕಾಲದ ಸಹೋದರಿಯರ ಬದುಕನ್ನೇ ತನ್ನ ಕಾವ್ಯದಲ್ಲಿ ಪ್ರತಿಬಿಂಬಿಸಿದ್ದಾಳೆ ಅಂದಿನ ಸ್ತ್ರೀಯರಿಗೆ ಮದುವೆಮಾಡಿಕೊಂಡು ಸಂಸಾರ ನಿರ್ವಹಿಸುವುದೇ ಬದುಕಿನ ಮುಖ್ಯ ಧ್ಯೇಯವಾಗಿತ್ತು . ಪಾತಿವ್ರತ್ಯ ಸಂಸಾರವಂದಿಗರಾದ

ಸೋದರಿಯರ ಉಸಿರು ಪ್ರಕೃತಿಗನುಸಾರವಾಗಿ ವ್ಯಕ್ತಿ ವ್ಯಕ್ತಿಗಳಿಗೆ ವ್ಯತ್ಯಾಸವಿರಬಹುದು, ಆದರೆ ಪತಿವ್ರತೆಯರ ಸದಾಚಾರ ಸೂತ್ರಗಳಲ್ಲಿ ಭೇದವಿಲ್ಲ ಅವರ ಕುಲವೊಂದೆ, ಶೀಲವೊಂದೆ. ಸತಿಯರ ಮಹಾಭಾವ ವಿಕಾಸವಾಗಲು ಅವರ ಶುಚಿ ಶೀಲ ದಾರಿ ಮಾಡಿಕೊಡುತ್ತದೆ ತನ್ನ ಗೃಹಿಣಿಯಾದ ಸೋದರಿ 'ಉತ್ತಮಳು ಸತ್ತಮಳಾಗಲಿ', ತಿಳಿಗೇಡಿ ಜಾಣಳಾಗಲಿ, ದುಡುಕುಳ್ಳವಳು ಸಹನಶೀಲಳಾಗಲಿ ಎಂದು ಹೊನ್ನಮ್ಮ ಈ ನೀತಿಕಾವ್ಯವನ್ನು ಹಾಡಿದ್ದಾಳೆ ಇಲ್ಲಿ ನೀತಿ ಮುಚ್ಚುಮರೆಯಿಲ್ಲದೆ ಕಾಣುತ್ತದೆ.

> ಬಸಿರೊಳು ಬಂದ ಕುವರನಾದೊಡಮೇನು
> ಪೊಸವರೆಯದ ಪುರುಷನನು
> ಒಸೆದು ನಿಟ್ಟಿಸಿಯೊಡಲೋಜೆಯೊಳ್ಪುಗಳ ಬ
> ಣ್ಣಿಸಲಾಗದು ಭಾವೆಯರು (೪, ೩೩)

ಎಂಬುದಾಗಿ ಹೊನ್ನಮ್ಮ ಕಾವ್ಯದಲ್ಲಿ ಹೇಳುತ್ತಾಳೆ ಆದರೆ ಉಪದೇಶಮಾಡುವ ರೀತಿ ಹಿತವಾಗಿದೆ ಪತಿವ್ರತೆಯ ಚಿತ್ರವನ್ನು ಮಸುಳಿಸುವಷ್ಟು ಹೆಚ್ಚಾಗಿ ನೀತಿ ಬೆಳೆದಿಲ್ಲ ಕಾವ್ಯನಾಯಕಿಯಾದ ಸಾಧ್ವಿಯನ್ನೂ ಆಕೆಯ ಹಿನ್ನೆಲೆಯನ್ನೂ ಸುಲಕ್ಷಣವಾಗಿಸಿ, ರಸಭಂಗವಾಗದಂತೆ ನಡುವೆ ಬರುತ್ತದೆ

ಈ ಕಾವ್ಯದ ಮೊದಲಿನ ಎರಡು ಸಂಧಿಗಳು ಪೀಠಿಕಾರೂಪದಲ್ಲಿವೆ ಆಮೇಲೆ ಹೊನ್ನಮ್ಮ ಹದಿಬದೆಯ ಜೀವನಾನುಭವದಲ್ಲಿ ನೀತಿಯನ್ನು ಬೆರಸಿದ್ದಾಳೆ, ಅದು ಸಜೀವಗೊಂಡು ಸರಸವಾಗುವಂತೆ ಮಾಡಿದ್ದಾಳೆ ಸುಚರಿತೆಯ ರೂಪು ಗುಣ ಕಾರ್ಯಗಳು ಓದುಗರಿಗೆ ಕಾವ್ಯದಲ್ಲಿ ಸುಲಭವಾಗಿ ಕಂಗೊಳಿಸುವಂತೆ ಮಾಡಿದ್ದಾಳೆ ಗ್ರಂಥದಲ್ಲಿ ಕಾವ್ಯಾಂಶಗಳು ತುಂಬಿವೆ. ಆದರೂ ಇದು 'ನೀತಿಕಾವ್ಯ'ವೆಂದು ಒಪ್ಪಲೇಬೇಕು.

ಧರ್ಮದ ತನಿಗಂಪು ತಲೆದೋರೆ ಕಾವ್ಯದ
ಪೆರ್ಮೆ ಬೇರ್ವರಿದು ಬಿತ್ತರಿಸೆ (೧, ೪೮)

ಈ ಗ್ರಂಥ ಬರೆದಿದ್ದಾಳೆ

ಭಕ್ತಿ ನವರಸಗಳ ತವರು ಸತಿಯ ಪತಿವಿಷಯದ ಅನುರಾಗ ಶುದ್ಧಭಾವ, ಏಕೋಭಾವವಾಗಿ ಭಕ್ತಿಯ ಬಣ್ಣವನ್ನು ತಾಳುವ ವರೆಗೆ ಅದರ ಏರಿಕೆಯನ್ನು ಕವಿ ಪ್ರತಿಭೆಯಿಂದ ಸ್ಫುಟಪಡಿಸಿರುತ್ತಾಳೆ ಸಾಧ್ವಿಯ ಚಿನ್ನದಂಥ ಸಂಸಾರದ ಸುಖಚಿತ್ರವನ್ನು ಕೆತ್ತಿದ್ದಾಳೆ ಕಾವ್ಯವನ್ನು ಹಾಡುವಾಗ ನೀತಿಶಾಸ್ತ್ರಜ್ಞನ ಮನೋಭಾವವನ್ನು ತೋರದೆ, ರಸಋಷಿಯ ಅಕ್ಕರೆಯ ಮಾರ್ದವವನ್ನು ಕಾವ್ಯದಲ್ಲಿ ಎರೆದಿದ್ದಾಳೆ ತನ್ನ ಊಹಾಶಕ್ತಿಯಿಂದ ಗೃಹಿಣಿಯ ಬದುಕಿನಲ್ಲಿ ಸಮರಸವಾಗಿದ್ದಾಳೆ, ಗ್ರಂಥದ ಹಾಸುಹೊಕ್ಕಿನಲ್ಲಿ ತನ್ನ ಸೌಹಾರ್ದವನ್ನು ಒಂದುಗೂಡಿಸಿದ್ದಾಳೆ ಆಮೇಲೆ ಕವಿ ನೀತಿಯನ್ನು ಸಾರುತ್ತಾಳೆ ಹೆಣ್ಣಿನ ಗುಣ ಗೌರವವನ್ನು ಕೀರ್ತಿಸುವಾಗ ಹೊನ್ನಮ್ಮನ ತಾಯ್ತನ ತಾನೇ ತಾನಾಗಿ ಉಕ್ಕುತ್ತದೆ 'ಕುವರಿ', 'ಕಂದ', 'ಅಣುಗಿ', 'ಮಗಳೆ', 'ಪೆಣ್ಮಗು'—ಹೆಣ್ಣುಮಗುವನ್ನು ಸಂಬೋಧಿಸುವ ಈ ಮಾತುಗಳು ಸ್ನೇಹರಸದ ಹನಿಗಳಂತಿವೆ

ಕವಿಯ ಮನಸ್ಸು ಮತ್ತು ಮಾತಿನ ಸೊಗಸು ಈ ಗ್ರಂಥದಲ್ಲಿ ಕಂಡಿರುವುದರಿಂದ ಇಲ್ಲಿ ಕಾವ್ಯ ಮತ್ತು ನೀತಿ ಗೆಳೆತನದಿಂದ ವರ್ತಿಸುತ್ತವೆ ಎನ್ನಬಹುದು ಒಂದರ ಹೆಚ್ಚಳವನ್ನು ಇನ್ನೊಂದು ಕುಗ್ಗಿಸುವುದಿಲ್ಲ, ಒಂದನ್ನೊಂದು ಮುನ್ನಡಸಿಕೊಂಡು ಹೋಗುತ್ತದೆ. ಕಾವ್ಯದೃಷ್ಟಿಯಿಂದ, ವ್ಯಕ್ತಿಚಿತ್ರವೆಂದು ರಮ್ಯತೆ ಹೊಂದಿರುವ ಏಳನೆಯ ಸಂಧಿ (ವಿರಹಿಣಿಯ ನಡೆಗನ್ನಡಿ) ಕಾತರಿಸುವ ಮನದ ಚಿತ್ರಣಕ್ಕೆ ಅರ್ಪಿತವಾಗಿದೆ. ಪತಿಯ ಅಗಲಿಕೆಯ ತಾಪದಿಂದ ಕಳವಳಿಸುವ ನಾಯಕಿಗೆ, ಔಚಿತ್ಯಬಲ್ಲ ಹೊನ್ನಮ್ಮ ನೀತಿ ಪಾಠ ಹೇಳಲು ಹೊರಡುವುದಿಲ್ಲ. ಒಂಬತ್ತನೆಯ ಸಂಧಿಯಲ್ಲಿ

ಈ ಕಾವ್ಯದ ಸಾಧ್ವಿ ವಿಷ್ಣುಭಕ್ತಿಯ ದೀಕ್ಷೆ ತಾಳುತ್ತಾಳೆ. ಆದುದರಿಂದ ವಿಶಿಷ್ಟಾದ್ವೈತಮತದ ಪ್ರಕ್ರಿಯೆಗಳು ಕಾಣುತ್ತವೆ, ಪುರಾಣಗಳ ಮಹಿಮೆ, ನಾಮಸಂಕೀರ್ತನ, ದಾನಧರ್ಮದ ಅಗ್ಗಳಿಕೆ, ಯಮಪುರಿಯ ದಾರಿಯ ಬಿಸಿ, ಬಿರುಸು—ಇವೆಲ್ಲ ನಿರೂಪಿತವಾಗಿವೆ.

## ೭. ಈ ಕಾವ್ಯದಲ್ಲಿ ಧರ್ಮದ ಸ್ಥಾನ

ಹೊನ್ನಮ್ಮ ಗೃಹಿಣಿಯ ಧರ್ಮ ಯಾವುದು ಎಂಬುದನ್ನು ಈ ಪುಸ್ತಕದಲ್ಲಿ ಸಮಾಲೋಚಿಸಿದ್ದಾಳೆ. ಗೃಹಿಣಿಯ ಬಾಳನ್ನು ಉದ್ಧರಿಸಬಲ್ಲ ಧರ್ಮ, ಆಕೆಯ ಪರಮ ಕರ್ತವ್ಯ, ಪತಿವ್ರತಾ ಧರ್ಮ ಎಂದು ಇಲ್ಲಿ ಸ್ಪಷ್ಟವಾಗಿದೆ

ಪತಿಭಕ್ತಿಯೊಂದು ಶ್ರೀಪತಿ ಭಕ್ತಿಯೊಂದಿದ
ರತಿಶಯಕಿನ್ನೆಣೆಯಿಲ್ಲ (೨, ೪)

'ಮಾಧವನ ಭಕ್ತಿಗೆ ಮತಭೇದವುಂಟು' ಆದರೆ ಪತಿಭಕ್ತಿಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿಗೆ ಆಸ್ಪದವಿಲ್ಲ ಬದುಕಿನ ಬೇರೆ ಬೇರೆ ಅವಸ್ಥೆಗಳಲ್ಲಿ ಇರುವವರಿಗೆ ಆಯಾ ಸ್ಥಳಗಳಿಗೆ ತಕ್ಕಂಥ ನಡವಳಿಯ ನಿಯಮಗಳೂ ಇರಬೇಕು 'ಧರ್ಮದ ತನಿಗಂಪು' ಕಾಣುವಾಗ ಈ ಗ್ರಂಥ ಮುಂದುವರಿಯುತ್ತದೆ

ತಿಳಿದೊ, ತಿಳಿಯದೆಯೊ ಗೃಹಿಣಿ ಒಳ್ಳೆಯದನ್ನು ಅನುಸರಿಸುತ್ತಾಳೆ ಇದು ಆಕೆಯ ಸ್ವಭಾವಲಕ್ಷಣ ಸಂಸಾರವತಿಯಾದ ಹೆಂಗಸಿನ ಕರ್ತವ್ಯ ಇಂಥಾದ್ದೆಂದು ಹೇಳಿದರೂ ತಪ್ಪಿಲ್ಲ ತನ್ನ 'ಭಾಗ್ಯದ ಫಲ' ಪತಿ, ಆತನನ್ನು ನಿಷ್ಠೆಯಿಂದ ಓಲೈಸು ಎಂದು ಹೇಳುವ ಧರ್ಮವಚನ ಕಠಿಣವಾದುದಲ್ಲ, ಪ್ರಿಯವಾದುದು. ಪತಿವ್ರತಾಧರ್ಮ ಬೇರೆಯಾಗಲಿ, ದೂರವಾಗಲಿ ಇರದೆ ಗೃಹಿಣಿಯ ನಿತ್ಯಗಟ್ಟಲೆಯ ಕೆಲಸಗಳಲ್ಲಿ ಹೊಂದಿಕೆಯಾಗಿದೆ ಸ್ತ್ರೀಯರ ಹುಟ್ಟುಗುಣ ಶ್ರದ್ಧೆಯೆಂದು ಹೇಳಬಹುದು, ಇಂಥ ಗೃಹಿಣಿಯರು ಸತೀಧರ್ಮವನ್ನು ಅಂಗೀಕರಿಸುವುದು, ಸಾಧಿಸುವುದು, ಕಷ್ಟವಲ್ಲ.

ಆದರೆ ಈ ಕಾವ್ಯದಲ್ಲಿ ಪ್ರಾಶಸ್ತ್ಯವನ್ನು ಹೊಂದಿರುವುದು ಶಾಸ್ತ್ರ ಪುರಾಣಗಳಲ್ಲಿ ಉಕ್ತವಾದ ಪತಿವ್ರತಾಧರ್ಮ ಮನುಧರ್ಮ ಶಾಸ್ತ್ರದ (೫ನೆಯ ಅಧ್ಯಾಯ, ಶ್ಲೋಕ ೧೫೪ರ) ಉತ್ತರಾರ್ಧ ಹೀಗೆ ಹೇಳುತ್ತದೆ.—

'ಉಪಚರ್ಯಃ ಸ್ತ್ರಿಯಾ ಸಾಧ್ವ್ಯಾ ಸತತಂ ದೇವವತ್ಪತಿಃ' ಪತಿ ಸಾಧ್ವಿಯಾದ ಸ್ತ್ರೀಯಿಂದ ದೇವರಂತೆ ಯಾವಾಗಲೂ ಆರಾಧಿಸಲ್ಪಡಬೇಕು

ಶ್ರೀಮನ್ಮಹಾಭಾರತದ ವನಪರ್ವದಲ್ಲಿಯ ದ್ರೌಪದೀ ಸತ್ಯಭಾಮಾ ಸಂವಾದ ಪರ್ವ (ಅಧ್ಯಾಯ ೨೩೪) ದ್ರೌಪದಿ ಸತ್ಯಭಾಮೆಗೆ ಪತಿವಶೀಕರಣ ಮಂತ್ರವನ್ನು ಹೇಳುವ ನೆಪದಲ್ಲಿ ಪತಿವ್ರತಾಧರ್ಮವನ್ನು ವಿಶದಪಡಿಸುತ್ತದೆ ಹೊನ್ನಮ್ಮನ ಕಾವ್ಯದ ಸತೀಧರ್ಮ ಅದರ ವ್ಯಾಖ್ಯಾನರೂಪದ್ದಾಗಿರುವುದರಿಂದ ದ್ರೌಪದಿಯ ಮಾತಿನ ತಾತ್ಪರ್ಯವನ್ನು ಇಲ್ಲಿ ಕೊಟ್ಟಿದೆ ಅದಕ್ಕೆ ಮೊದಲು ಅರ್ಥಗರ್ಭಿತವಾದ ಈ ಶ್ಲೋಕವಿದೆ.

ಪತ್ಯಾಶ್ರಯೋ ಹಿ ಮೇ ಧರ್ಮೋ
ಮತಃ ಸ್ತ್ರೀಣಾಂ ಸನಾತನಃ
ಸ ದೇವಃ ಸಾ ಗತಿರ್ನಾರ್ಯಾ
ಸ್ತಸ್ಯ ಕಾ ವಿಪ್ರಿಯಂ ಚರೇತ್

(ವನಪರ್ವ, ಅಧ್ಯಾಯ ೨೩೪, ಶ್ಲೋಕ ೩೯)

"ಸತ್ಯಭಾಮೆ, ನಾನು ಕಾಮಕ್ರೋಧ ಅಹಂಕಾರಗಳನ್ನು ತ್ಯಜಿಸಿ ಸದಾ ಪತಿಸೇವೆ ಮಾಡುತ್ತೇನೆ. ನನ್ನ ಪತಿಯ ಸ್ನಾನ, ಭೋಜನ, ನಿದ್ರೆಗೆ ಮುಂಚೆ ಅವನ್ನು ಮಾಡುವುದಿಲ್ಲ; ಅವನು ತೆಗೆದುಕೊಳ್ಳದೆ ಇರುವ ಆಹಾರ ಪಾನೀಯಗಳನ್ನು ನಾನೂ ತ್ಯಜಿಸುತ್ತೇನೆ ಯಾವಾಗಲೂ ಆತನಿಗೆ ಅನುಕೂಲಳಾಗಿರುತ್ತೇನೆ. ಹೊಲ, ವನ ಅಥವಾ ನಗರದಿಂದ ಹಿಂದಿರುಗಿದ ಪತಿಯನ್ನು ಸಂಭ್ರಮದಿಂದ ಎದುರುಗೊಂಡು ವಂದಿಸಿ, ಕಾಲು ತೊಳೆಯಲು

ನೀರು ಕೊಟ್ಟು ಪೀರ ಕೊಡುತ್ತೇನೆ. ಮನೆಯನ್ನೂ, ಮನೆಯ ಸಾಮಾನುಗಳನ್ನೂ ಅಚ್ಚುಕಟ್ಟಾಗಿ ಇರಿಸುತ್ತೇನೆ ಸಕಾಲದಲ್ಲಿ ಶುಚಿ ರುಚಿಯಾದ ಅನ್ನಾಹಾರಗಳನ್ನು ಮಾಡಿ ಪತಿಗೆ ಉಣಬಡಿಸುತ್ತೇನೆ ಅತಿಥಿ ಅಭ್ಯಾಗತರನ್ನು ಸತ್ಕರಿಸುತ್ತೇನೆ, ಗುರುಜನರನ್ನು ಮನ್ನಿಸುತ್ತೇನೆ ಉಪದೇಶಗಳಿಗೆ ಒಳಪಟ್ಟು, ಅಲಂಕೃತಳಾಗಿ ಯಾವಾಗಲೂ ಪತಿಯ ಶ್ರೇಯಸ್ಸನ್ನೇ ಹಾರೈಸುತ್ತೇನೆ. ಸೋಮಾರಿತನವನ್ನು ತೊಲಗಿಸಿ ಯಾವಾಗಲೂ ಪತಿಗೆ ಹಿತವಾದದ್ದನ್ನೇ ಮಾಡುತ್ತೇನೆ, ವಿನೋದದಲ್ಲಲ್ಲದೆ ನಗುವುದಿಲ್ಲ, ಮನೆ ಬಾಗಿಲ ಬಳಿ ನಿಲ್ಲುವುದಿಲ್ಲ, ದುಷ್ಟ ಸ್ತ್ರೀಯರನ್ನು ಅನುಕರಿಸುವುದಿಲ್ಲ ಯಾರಾದರೂ ಆಪ್ತರಿಗೋಸ್ಕರ ಪತಿ ಬೇರೆ ಕಡೆಗೆ ಹೋದರೆ, ಹೂ, ಗಂಧ, ಪರಿಮಳಗಳ ಸೊಗಸನ್ನು ತ್ಯಜಿಸಿ ನಾನು ವ್ರತವನ್ನು ಕೈಕೊಳ್ಳುತ್ತೇನೆ ಪತಿಯೇ ಪತ್ನಿಯ ದೇವರು, ಅವನೇ ಆಕೆಗೆ ಆಶ್ರಯ. ಆಕೆಗೆ ನಿಜವಾಗಿ ಬೇರೆ ಗತಿಯಿಲ್ಲ, ಹೀಗಿರುವಾಗ ಹೆಂಡತಿ ಹೇಗೆತಾನೆ ಕೆಡುಕನ್ನು ಪತಿಗೆ ಮಾಡಬಲ್ಲಳು?"

ಇಂಥ ಪತಿವ್ರತಾಧರ್ಮ ವ್ಯಕ್ತಿಗತ ಜೀವನವನ್ನು ಅಳಿಸಬಲ್ಲಂಥಾದ್ದೆ? ಬೆಳಸಬಲ್ಲಂಥಾದ್ದೆ? 'ಪಾಲು ನೀರುಗಳಂತೆ' ಪತಿ ಸತಿಯರು ಇದ್ದರೆ, ಗೃಹಿಣಿ ಛಾಯಾಜೀವಿಯಾಗಿ ತನ್ನ ವೈಯಕ್ತಿಕ ಸ್ವಭಾವಾಂಶವನ್ನು ಕಳೆದುಕೊಳ್ಳದಿರುವಳೆ ಎಂಬ ಹೆದರಿಕೆ ಉಂಟಾಗುತ್ತದೆ ಗೃಹಿಣಿ ಮೆಚ್ಚಿದ ಮನವೊಲಿದ ಕೆಲಸ ಮಾಡಲಿಕ್ಕೆ ಆಜ್ಞೆ ಬೇಕೆ? ಸ್ನೇಹ ಪ್ರೇಮಗಳನ್ನು ತೋರಿರೆಂದು ಯಾರೂ ಕೈಹಿಡಿದು ಕಲಿಸಬೇಕಾಗಿಲ್ಲ

ಇಷ್ಟದೇವತೆಯಿವನೆಂದು ಪತಿಯೊಳು ವಿ
ಶಿಷ್ಟ ಭಾವವ ಬಗೆಗೊಳಿಸಿ

ಪತ್ನಿ ಆತನನ್ನು ಆರಾಧಿಸುತ್ತಾಳೆ. ಆದರೆ ಈ ಕೆಲಸವನ್ನು,

'ಲಕ್ಷ್ಮೀಪತಿಯಾಣತಿಯೆಂದು ಬಗೆದು'

'ಈರೀತಿಯೊಳಿರ್ಪುದೇಕಪತ್ನಿಯರಿಗೆ
ನಾರಾಯಣನಾಜ್ಞೆಯೆಂದು
ಆರೈದು ತಿಳಿದು'—

ಮಾಡಬೇಕೆ? ಪತಿಯನ್ನು ಪ್ರೀತಿಸಲು ಪತಿವ್ರತೆಗೆ ಸ್ವಾತಂತ್ರ್ಯ ವಿಲ್ಲವೆ? 'ಪಲವು ಧರ್ಮಂಗಳ ಬಳೆಯಿಪುದಾಯಾಸ' ಹೊನ್ನಮ್ಮನ ಈ ಹೇಳಿಕೆಯನ್ನು ಎಲ್ಲರೂ ಒಪ್ಪಬೇಕಾದದ್ದು ಎಲ್ಲ ಕೆಲಸ ಕರ್ತವ್ಯಗಳನ್ನೂ ಹಚ್ಚಿಕೊಂಡು, ಹೆಚ್ಚಿಸಿಕೊಂಡು ಶ್ರೇಯಸ್ಸನ್ನು ಪಡೆಯುವೆನೆಂದು ಹೊರಟರೆ, ಅದು ಹುಚ್ಚು ಹವ್ಯಾಸವಾಗುತ್ತದೆ ಪ್ರೇಮ ಎಂಬ ಒಂದೇ ಬೆಳಕನ್ನು ಹಿಡಿದು ನಡೆಯುವುದು ಲೇಸು

ಪತಿವ್ರತಾಧರ್ಮಕ್ಕೆ ಮಿಗಿಲಾದ ಪರಂಪರೆ ಕೂಡ ಉಂಟು ಪುರಾಣಗಳು ಖ್ಯಾತಿಯನ್ನು ಹೊಂದಿದ ಮಹಾ ಪತಿವ್ರತೆಯರ ಚರಿತಗಳನ್ನು ಉಗ್ಗಡಿಸುತ್ತವೆ ಈ ಆದರ್ಶ ಮಹಿಳೆಯರನ್ನು ಸ್ಮರಿಸಿಕೊಂಡರೆ ಪಾತಿವ್ರತ್ಯವನ್ನು ಆಚರಿಸಲು ಇಮ್ಮಡಿ ಉತ್ಸಾಹ ಬರುತ್ತದೆ ಈ ಸತೀಧರ್ಮ ದುಸ್ಸಾಧ್ಯವಾದುದಲ್ಲ; ಮನೆಗೆಲಸ ಗಳಲ್ಲಿ ಈ ಧರ್ಮವನ್ನು ಸಮನ್ವಯಿಸಿ ಇದರ ಅನುಷ್ಠಾನದಿಂದ ಗೃಹಿಣಿಯರು ಉತ್ತಮರಾಗಬಹುದು.

ಹೊನ್ನಮ್ಮನಿಗೆ ಪುರಾಣಗಳಲ್ಲಿ ನಂಬಿಕೆಯಿದೆ, 'ಮನ್ವಾದಿಕ ಧರ್ಮಶಾಸ್ತ್ರ'ಗಳಲ್ಲಿ ಆದರವಿದೆ, ಪಾರಂಗತತೆಯಿದೆ ಶ್ರೇಷ್ಠ ವಾದ ಪತಿವ್ರತಾ ಧರ್ಮದ ಜತೆಗೆ ಶಾಸ್ತ್ರಕಾರರ ಕಟ್ಟಳೆಗಳನ್ನು ಅಂಗೀಕರಿಸಿ ಹೊನ್ನಮ್ಮ ಈ ಎರಡು ಅಂಶಗಳನ್ನು 'ಹದಿಬದೆಯ ಧರ್ಮ'ದಲ್ಲಿ ಜೋಡಿಸಿಕೊಂಡಿದ್ದಾಳೆ. ಇದರಿಂದ ಗೃಹಿಣಿಯ ಯಾಜಮಾನ್ಯಕ್ಕೆ ಹಾನಿ ತಟ್ಟುವಂತೆ ಕಾಣುತ್ತದೆ. 'ಆಯ ಬೀಯದ' ಆಲೋಚನೆ ಕೇಳಲು ಮಾತ್ರ ಆಕೆ ಬಾಧ್ಯಳಾದಂತೆ ತೋರುತ್ತದೆ ಗೃಹಿಣಿಯ ಸ್ಥಾನ ಮಾನ ಸ್ವಾತಂತ್ರ್ಯಗಳು ಹೀಗೆಯೆ ಸರಿ ಎಂದು ನಿಶ್ಚಿತವಾಗಿ ಹೇಳಬಲ್ಲವರು ಯಾರಿದ್ದಾರೆ?

ಪತಿವ್ರತಾಧರ್ಮಕ್ಕೆ ಪ್ರೇಮ ಮೊದಲು, ಆದರ್ಶಪ್ರೇಮಿಗಳು ಆಮೇಲೆ, ಕಟ್ಟಳೆ ಕಾಲಕಾಲಕ್ಕೆ ತಕ್ಕಂತಲ್ಲವೆ?

## ೮. ಈ ಕಾವ್ಯದಲ್ಲಿ ಸ್ತ್ರೀಯರ ಸ್ಥಾನ

ಸ್ತ್ರೀತ್ವದಲ್ಲಿ ಹೊನ್ನಮ್ಮನಿಗೆ ತುಂಬ ಗೌರವವಿದೆ. ಅದರ ಘನತೆಯನ್ನು ಅಭಿಮಾನದಿಂದ ಸಾರಲು ಹಿಂಜರಿದಿಲ್ಲ ಹೆಣ್ಣೆಂದು ಈ ಮಗುವನ್ನು ಹೀನಗಳೆಯುವ ಸಮಾಜದ ರೂಢಿಯನ್ನು ನಯ ನುಡಿಗಳಿಂದ ಖಂಡಿಸುತ್ತಾಳೆ

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು (೫, ೭)

ಹುಡುಗಿಗೆ ಹನ್ನೆರಡು ವರ್ಷಗಳಾಗುವವರೆಗೆ ಕಟ್ಟಳೆಯ ಭಯ ವಿಲ್ಲವೆಂದು ಕಾಣುತ್ತದೆ ಆಮೇಲೆ ಆಕೆಯ ಬುದ್ಧಿಯ ಬೆಳವಣಿಗೆಗೆ ಶಾಸ್ತ್ರನಿಯಮಗಳ ರೂಪದಲ್ಲಿ ಅಡ್ಡಿಗಳು ಬರುತ್ತವೆ ಅತ್ತೆಯ ಮನೆಯಲ್ಲಿ ಬಾಳುವಾಗ ನಿರ್ಬಂಧಗಳು ಗೃಹಿಣಿಯನ್ನು ಕಟ್ಟುತ್ತವೆ. ಧಾರ್ಮಿಕ ಶಾಸನಗಳ ಪ್ರಭಾವ ಒಂದು ಕಡೆ, ಮನೆಗೆಲಸಗಳ ಅವಾಂತರ ಒಂದು ಕಡೆ, ಅತ್ತೆಯ ಆಳಿಕೆ ಒಂದು ಕಡೆ ಗೃಹಿಣಿ ಯನ್ನು ಸುತ್ತುತ್ತವೆ ತನ್ನ ಸ್ವತಂತ್ರ ವಿಚಾರಶಕ್ತಿಯನ್ನು ಹೆಚ್ಚಿಸಿ ಕೊಳ್ಳಲು ಆವಶ್ಯಕವಾದ ಹಕ್ಕೂ, ಬಿಡುವೂ ಆಕೆಗೆ ಸಾಕಷ್ಟು ದೊರೆಯದೆ ಹೋಗುತ್ತದೆ. ಆದುದರಿಂದ ಆಕೆಯ ಸಂಪೂರ್ಣ ಅಭಿವೃದ್ಧಿ ಕುಗ್ಗಿದಂತಾಗುತ್ತದೆ ಎನ್ನಬಹುದು ಗೃಹಿಣಿ ಯಾವಾ ಗಲೂ ಒಬ್ಬರ ಅಧೀನದಲ್ಲಿ ಇರಬೇಕು. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಅವಳು ಒಡೆಯನ 'ಒಡವೆ' ಮಾತ್ರ

ತಡೆಯುದೆಳಮೆಯೊಳು ತಂದೆ ತಾಯಿಗಳಿಗೆ
ನಡುವರೆಯದೊಳು ನಲ್ಲನಿಗೆ
ಕಡುಮುದುಪಾದ ಕಾಲದೊಳು ತನ್ನಣುಗರಿ
ಗಡಕಮೆನಿಪುದಬಲೆಯರು (೪, ೪೭)

'ಪೊಸತಿಲ ಪೊರಗಡಿ'ಯಿಡದೆ ಮನೆಯಲ್ಲಿ ಘನವಾಗಿರುವ ಯಜಮಾನಿಯ 'ಜಸವಳ್ಳಿ ಜಗವ ಪರ್ಬುವುದು'

ಸಂಪ್ರದಾಯಬದ್ಧಳಾದರೂ ಹೊನ್ನಮ್ಮ ಪತಿವ್ರತೆಗೆ ಕೊಟ್ಟಿರುವ ಮಹತ್ವ ಹೆಚ್ಚಿನದಾಗಿದೆ ಇಕ್ಕಟ್ಟು ಬಿಕ್ಕಟ್ಟುಗಳ ಮೂಲಕವೇ ಗೃಹಿಣಿಯ ಅಂತಸ್ಸತ್ವ ಹೊರಹೊಮ್ಮುವುದು ಸಾಧ್ಯವೆಂಬ ನಂಬಿಕೆ ಹೊನ್ನಮ್ಮನಿಗೆ ಇದ್ದಿರಬಹುದು ಅಂತೂ ಹೊನ್ನಮ್ಮ ಸ್ತ್ರೀತ್ವಕ್ಕೆ ಕೊಟ್ಟಿರುವುದಕ್ಕಿಂತಲೂ ಹೆಚ್ಚಾಗಿ ಹದಿಬದೆಗೆ ಗೌರವವನ್ನು ಕೊಟ್ಟಿರುತ್ತಾಳೆ ಪತಿವ್ರತೆಯ ಮಹಿಮೆಯ ಯಥಾರ್ಥಕಲ್ಪನೆ ಕೆಳಗಿನ ಈ ಪದ್ಯದಿಂದ ಉಂಟಾಗುತ್ತದೆ

ಉದಯ ಕಾಲದೊಳೆದ್ದೊಲಿದಿಷ್ಟದೈವದ
ಪದಗಳ ಪಾಡುವಂದದೊಳು
ಹದಿಬದೆಯರ ಪೆಸರ್ಗೊಂಡು ಪೊಗಳ್ವುದು
ವಿದಿತವೈಸಲೆ ವೈದಿಕರಿಗೆ (೨, ೧೫)

ಒಡವೆ, ಪರಾಧೀನತೆ, ಮನೆಯೊಳಗಿನ ಬದುಕು—ಇಂಥ ಅಭಿಪ್ರಾಯಗಳು ಆಧುನಿಕ ಗೃಹಿಣಿಗೆ ವಿಚಿತ್ರವಾಗಿ ಕಾಣಬಹುದು. ಆದರೆ ಈ ಗ್ರಂಥ ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಫಲವಾಗಿದೆ ಆಗ, ಜನರು ರೂಢಿ ವಾಡಿಕೆಗಳಿಗೆ ಒಳಪಟ್ಟು ನಡೆಯುತ್ತಿದ್ದರು, ಶಾಸ್ತ್ರ ಪುರಾಣಗಳ ಹೇಳಿಕೆಯನ್ನು ಒಪ್ಪಿ ಅದರಂತೆ ವರ್ತಿಸುತ್ತಿದ್ದರು ಹೊನ್ನಮ್ಮ ಕೂಡ ಹತ್ತು ಜನರ ವಿಚಾರಸರಣಿಯನ್ನೇ ಸಮ್ಮತಿಸಿ ಕಾವ್ಯವನ್ನು ಈ ದೃಷ್ಟಿಯಿಂದಲೇ ಬರೆದಿದ್ದಾಳೆ ಇದಲ್ಲದೆ ಆ ಕಾಲದಲ್ಲಿ ಈಗ ಪ್ರಚಲಿತ

ವಾಗಿರುವ ಸಮಾನತೆ, ಸ್ವಾತಂತ್ರ್ಯ ಮೊದಲಾದ ಪಲ್ಲವಿಗಳು ಕಾಣಿಸಿ ಜನರ ಯೋಚನಾಕ್ರಮವನ್ನು ಬದಲಾಯಿಸಿರಲಿಲ್ಲ

## ೯. ಆಧುನಿಕ ದೃಷ್ಟಿ

ಈಗಿನ ಅಭಿಪ್ರಾಯಗಳ ಅಳತೆಯ ಕಡ್ಡಿಯಿಂದ ಹೊನ್ನಮ್ಮನ ಕಾವ್ಯವನ್ನು ವಿಮರ್ಶಿಸುವುದು ನ್ಯಾಯವಲ್ಲ ಇಂದಿನ ಗೃಹಿಣಿಗೂ ಹೊನ್ನಮ್ಮನ ಕಾವ್ಯನಾಯಕಿಯಾದ ಗೃಹಿಣಿಗೂ ಕೆಲವಂಶಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ ಹೊನ್ನಮ್ಮನ ಗೃಹಿಣಿಗಿಂತ ಇಂದಿನ ಗೃಹಿಣಿ ಆವರಿಸಿರುವ ಕಾರ್ಯಕ್ಷೇತ್ರ ವಿಶಾಲವಾದದ್ದು. ಶೀಲಸ್ವಭಾವದ ಉತ್ತಮತೆಯಲ್ಲಿ ಇಬ್ಬರೂ ಸರಿಸಮಾನರು. ಆದರೆ ಇಂದಿನ ಗೃಹಿಣಿಗೆ ಹೆಚ್ಚು ಸೌಲಭ್ಯಗಳು ದೊರೆತಿವೆ ಇಂದಿನ ಮನೆಹೆಣ್ಣು ಸಮಾನತೆಯನ್ನು ಹೊಂದಿರುವುದಲ್ಲದೆ, ಶಕ್ತಳಾದ ನಾಗರಿಕಳೂ ಆಗಿ ಪೌರಯೋಗ್ಯವಾದ ಹಕ್ಕು ಬಾಧ್ಯತೆಗಳನ್ನು ಗಳಿಸಿದ್ದಾಳೆ ಈಕೆ ಗಂಡನ ಸಂಗಾತಿ, ಸಂಘಜೀವಿ. 'ಮನೆಯ ಒಳಗೆ ಮತ್ತು ಹೊರಗೆ' ಇರುತ್ತ ಅನುಭವವನ್ನು ಪಡೆಯುತ್ತಾಳೆ. ತಾನೂ ಸಮಾಜದ ಒಂದು ಅಂಗವೆಂದು ತಿಳಿದು ತನ್ನ ಸಂಸಾರಕ್ಕೆ ಸೇರಿದವರಷ್ಟೇ ಅಲ್ಲ, ಬಹುಜನರ ಕ್ಷೇಮ ಕುಶಲಕ್ಕಾಗಿಯೂ ಶ್ರಮಿಸುತ್ತಾಳೆ

ಸಂಸ್ಕೃತಿ, ಪೌರತನ, ಮಾನವಸ್ನೇಹ ಚೆನ್ನಾದ ಬಾಳಿನ ಅಂಶಗಳು; ತುಂಬು ಬದುಕಿನ ಅಂಗೋಪಾಂಗಗಳು ಇಂದಿನ ಗೃಹಿಣಿಯ ಧ್ಯೇಯವೂ ಇವನ್ನು ಗಳಿಸಿ ಉಳಿಸಿಕೊಳ್ಳುವುದೇ ಆಗಿರುತ್ತದೆ ಉತ್ತಮ ಜೀವನವೇ ಎಲ್ಲರೂ ಹೊಂದಬೇಕಾದ ಸಿದ್ಧಿ ಬದುಕು ಒಮ್ಮೊಗದಲ್ಲಿ ಸಾಗಿದ ಹಾಗೆ, ವ್ಯಕ್ತಿಗಳ ಆದರ್ಶವೂ ಭೇದವನ್ನು ಹೋಗಲಾಡಿಸಿಕೊಳ್ಳುತ್ತದೆ

ಇಂದಿನ ಗೃಹಿಣಿ ಹೊನ್ನಮ್ಮನ 'ಹದಿಬದೆಯ ಧರ್ಮ'ವನ್ನು ವಿಶ್ವಾಸದಿಂದ ಕಾಣುತ್ತಾಳೆ. ಕವಿಯ ಘನ ಆಶಯವನ್ನು ಮೆಚ್ಚಿ ಆಕೆಯ ಪ್ರಾಮಾಣಿಕತನಕ್ಕೆ ತಲೆದೂಗುತ್ತಾಳೆ. ಹೊನ್ನಮ್ಮನ

ಕಾವ್ಯ ಅಂದಿನ ಗೃಹಿಣಿಯ ಜೀವನವನ್ನು ಮೂಡಿಸುವ ಕನ್ನಡಿ ಯೆಂದು ಇದನ್ನು ಸ್ವಾಗತಿಸುತ್ತಾಳೆ ಈ ಗ್ರಂಥದ ಓದಿನಿಂದ ಇಂದಿನ ಗೃಹಿಣಿಗೆ ಇತಿಹಾಸದೃಷ್ಟಿ ಉಂಟಾಗುತ್ತದೆ, ಧರ್ಮದ ತಳಹದಿ ಸಿಕ್ಕುತ್ತದೆ, ಆದ್ದರಿಂದ ಇವಳು ಹೊನ್ನಮ್ಮನಿಗೆ ಕೃತಜ್ಞಳು

## ೧೦. 'ಹದಿಬದೆಯ ಧರ್ಮ'ದ ಶೈಲಿ

ಧರ್ಮದ ಸುಲಭ ಪ್ರತಿಪಾದನೆಗೆ ತಕ್ಕ ಸರಳವಾದ ಪದ ರಚನೆಯಿಂದ ಈ ಕಾವ್ಯ ಒಪ್ಪುತ್ತದೆ ಹೊನ್ನಮ್ಮನ ಸ್ವಚ್ಛವಾದ, ವಿಚಾರಪೂರ್ಣವಾದ ಮನಸ್ಸನ್ನೂ ಆಶಯವನ್ನೂ ಬಿಚ್ಚಿ ತೋರಿ ಸಲು ತಕ್ಕ ಬಿಡುನುಡಿಗಳ ಹದವಾದ ಹೊಂದಾವಣೆ ಈ ಕಾವ್ಯದ ಶೈಲಿ ಎನ್ನಬಹುದು ಅರ್ಥಬೋಧೆ ಹೊನ್ನಮ್ಮನ ಮುಖ್ಯ ಗುರಿ ಆಕೆಯ ಉದ್ದೇಶ ಎಲ್ಲರೂ ನಿರಾಯಾಸವಾಗಿ ತನ್ನ ಗ್ರಂಥವನ್ನು ತಿಳಿದುಕೊಳ್ಳಲಿ ಎಂಬುದು 'ಎಲ್ಲರುಮರಿವಂತೆಳ ವಾತುಗಳಿಂದ' ಇದನ್ನು ಹಾಡುವೆನು, 'ಎನ್ನೀ ಸರಸಕಾವ್ಯ' ಅರಸು ಅರಸಿಯರಿಗೆ ಇಷ್ಟವಾಗಲಿ ಎಂದು ಕವಿಯ ಅಪೇಕ್ಷೆ. ಪತಿವ್ರತಾಧರ್ಮದಂಥ ಮಹಾ ವಿಷಯವನ್ನು ಹೇಳಹೊರಟ ಈ ಗ್ರಂಥ ಕವಿಯ ಕಣ್ಣಿಗೆ 'ಮಹಾಕೃತಿ'ಯಾಗಿ ತೋರುವುದೂ ಸ್ವಾಭಾವಿಕವಾಗಿದೆ

ಹೊನ್ನಮ್ಮನ ಶೈಲಿ ಸರಳವಾದರೂ ಕಳೆಯುಳ್ಳದ್ದು, ಸೊಗಸು ವಂತಹುದು ವ್ಯಕ್ತಿಯನ್ನು, ಭಾವಗಳನ್ನು, ಸನ್ನಿವೇಶವನ್ನು ಕವಿ ರಸವತ್ತಾಗಿ ವರ್ಣಿಸಿ ಸಜೀವಗೊಳಿಸಬಲ್ಲಳು ಕಾವ್ಯದ ಏಳನೆಯ ಸಂಧಿಯಲ್ಲಿ ಬರುವ ವಿರಹಿಣಿಯ ಚಿತ್ರಚರ್ಯೆಗಳು ಮನಸೆಳೆಯು ವಂಥವು ವಿರಹಿಣಿಗೆ ಮನೆ ಶೂನ್ಯ, ಮನ ಶೂನ್ಯ, ಆಕೆ ಪಾಡು ಗೆಟ್ಟಿದ್ದಾಳೆ, ನರಳಿ ಹೊರಳುತ್ತಾಳೆ, ಎದ್ದು ವ್ಯಾಕುಲಗೊಳ್ಳು ತ್ತಾಳೆ. ಸಿಂಗಾರವಾಗಲಿ, ಆಹಾರವಾಗಲಿ ಆಕೆಗೆ ಬೇಕಿಲ್ಲ. 'ಅರಿಯದೆ ತನಿಗೆಂಡವ ಮೆಟ್ಟಿ ನಿಂದಂತೆ' ತಲ್ಲಣಿಸುತ್ತಾಳೆ. ಪತಿ

ಬಂದನೆಂಬ ಸಂತೋಷದ ವಾರ್ತೆ ಕೇಳಿದೊಡನೆಯೆ ಆಕೆಯ ಹರ್ಷ ಕೋಡಿ ಹರಿಯುತ್ತದೆ

ಮೊದಲೊಳು ಮುಂದುವರಿವ ನೋಟದಿಂದೊಡ
ನೊದಗುವ ಹರ್ಷಾಶ್ರುವಿಂದ (೭, ೩೯)

ಇನಿಯನನ್ನು ಎದುರುಗೊಳ್ಳುತ್ತಾಳೆ ಈ ತಪಸ್ವಿನಿಯ ಹೆಚ್ಚಿನ ಹಿಗ್ಗು ಪದ್ಯದ ಸರಳ ಪದಗಳಿಂದ ಸ್ಫುಟವಾಗಿದೆ ನಿಂತಿರುವ ವ್ಯಕ್ತಿಯ ಚೆಲುವನ್ನು ವರ್ಣಿಸಬಹುದು, ಆದರೆ ಅದರ ನಡಗೆಯ ಚಂದವನ್ನು ವಿಶದಪಡಿಸುವುದು ಕಷ್ಟ ಕೆಲವು ವಿಷಯಗಳಲ್ಲಿ ಸ್ವತಂತ್ರ ಅಭಿಪ್ರಾಯಗಳುಳ್ಳ ಹೊನ್ನಮ್ಮ ಮನೆಹೆಣ್ಣಿನ ನಡಗೆಯನ್ನು 'ಹಂಸಗಮನ' ಎಂದು ಮುಂತಾದ ಕವಿಸಮಯದ ರೀತಿಯಿಂದ ತಿಳಿಯಪಡಿಸುವುದಿಲ್ಲ ಪತಿವ್ರತೆಯ ನಡಗೆ ಉತ್ತಮ ವಿಚಾರ ಆಚಾರಗಳಿಂದ 'ಶುಭಗಮನ'ವಾದದ್ದನ್ನು ಹೊನ್ನಮ್ಮ ಲಲಿತ ಪದಗಳಿಂದ ಚಿತ್ರಿಸಿರುತ್ತಾಳೆ

ಸಜ್ಜುವಡೆಯೆ ಸೌಮ್ಯತೆ ಸರ್ವಾಂಗದೊ
ಳುಜ್ಜುಗಗೊಳೆಯೊಳ್ನಡತೆ
ಲಜ್ಜೆ ಬಿಂಬಿಸೆ ಲಾವಣ್ಯದೊಳೊಯ್ಯನೆ (೮, ೩೭).

ಸುಗೃಹಿಣಿ 'ಪಜ್ಜೆ'ಯಿಡುತ್ತಾಳೆ, ಆಕೆಯ ಚೆಲುವಿನಲ್ಲಿ ಲಜ್ಜೆ ಬಣ್ಣ ತಾಳಿದೆ ಈ ಪದ್ಯ ಹೊನ್ನಮ್ಮನ ಸೌಂದರ್ಯದೃಷ್ಟಿಯನ್ನು ತೋರಿಸುತ್ತದೆ ಭಾವವನ್ನು ವ್ಯಂಜಿಸುವ ಶಕ್ತಿ ಹೊನ್ನಮ್ಮನಿಗೆ ಉಂಟು ಕುಲವಧು ಆತ್ಮಸಂರಕ್ಷಣೆಗೆ ಸ್ವಯಂಸಮರ್ಥಳು ಎಂಬ ಆಶಯ ಕವಿಯ ಈ ಮಾತುಗಳಲ್ಲಿ ಖಚಿತವಾಗಿದೆ:

ತನ್ನೊಡಲಿಗೆ ತನ್ನ ಮನವ ಕಾಪಿಡುವುದು
ತನ್ನ ಮನಕೆ ತನ್ನ ಮತಿಯ
ತನ್ನ ಮತಿಗೆ ತನ್ನ ಸಾತ್ವಿಕ ಧೈರ್ಯವ
ನುನ್ನತಿವಡೆದೊಪ್ಪುವುದು (೮, ೩೮)

ಚಿಕದೇವರಾಜ ಒಡೆಯರ ಒಳ ಓಲಗ ಶಬ್ದಚಿತ್ರದಂತೆ ಉಜ್ಜ್ವಲವಾಗಿದೆ ರಾಜ ರಾಣಿಯರನ್ನು ಊಳಿಗದವರು ಸುತ್ತಿದ್ದಾರೆ; ಕಲಾನಿಪುಣೆಯರು ಅನುಸರಿಸಿದ್ದಾರೆ, ವಿದ್ಯಾವತಿಯರು ಅಲ್ಲಿ ಕಾಣಿಸುತ್ತಿದ್ದಾರೆ, ಪ್ರಭು, ಪ್ರಭುಪತ್ನಿಯರ ಸದಯಾಂತಃಕರಣ ಅಲ್ಲಿ ಸಾಕ್ಷಾತ್ತಾಗಿದೆ (ಸಂಧಿ ೧, ಪದ್ಯಗಳು ೧೬–೧೯, ೨೧)

ಅರ್ಥಗರ್ಭಿತವಾದ, ನಾಣ್ಣುಡಿಯಂಥ ಮಾತುಗಳು ಈ ಕಾವ್ಯದ ಒಡಲಲ್ಲಿ ಮಿನುಗುತ್ತವೆ,

'ಪರಸಿದುದೆ ಅನುಗ್ರಹ, ಖತಿಗೊಂಡು ನುಡಿದುದೆ ಶಾಪ' (೨, ೪೪)

'ಎಂತು ನಡೆದೊಡೆಲ್ಲರುಮಿದು ಲೇಸೆಂಬ
ರಂತಿರು ಸಂತೋಷದೊಳು' (೫, ೪೪)

'ಆಚಾರದಿಂದನುಪಮ ಧರ್ಮದೇಳಿಗೆ' (೮, ೧೯)

'ಸಕಲ ಸತ್ಕರ್ಮಂಗಳಚ್ಯುತನಾರಾಧನೆ' (೯, ೮)

ಈ ಕಾವ್ಯದ ಅಲಂಕಾರಗಳು ಸಹಜವಾದುವು, ಸುಂದರವಾದುವು, ಉಪಮೆ ನೈಜತೆಯಿಂದ ಮೆರೆಯುತ್ತದೆ ಈ ಸಾದೃಶ್ಯ ಸಂಪತ್ತಿಗೆ ಬೇಕಾಗುವ ಸಲಕರಣೆಗಳನ್ನು ಕವಿ ಹತ್ತಾರುಕಡೆಗಳಿಂದ ಒದಗಿಸಿಕೊಂಡಿದ್ದಾಳೆ, ಪ್ರಕೃತಿ, ಕುಶಲಕಲೆ, ಮತ್ತು ಲೌಕಿಕ—ಈ ಆಯ್ಕೆಯಿಂದ ಶೈಲಿಗೆ ವೈವಿಧ್ಯ, ಕಾವ್ಯಕ್ಕೆ ಚಂದ ಮತ್ತು ನೈಜತೆ ಲಭಿಸಿವೆ

'ಒಂದು ನಾವೆಯೊಳೇರಿದವರಂತೆ'

'ಪೊಸಪೂವ ಸರಗೈದು ಮುಡಿಯದೆ ನಲುಗಿಸಿ
ರಸದೆಗೆವೆಸಕ'

'ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು'

'ಬನದೊಳು ದೆಸೆಗೆಟ್ಟು ಪರಿವಂತೆ ಕತ್ತಲೆ
ಮನೆಯೊಳು ಕಣ್ದೆರೆವಂತೆ'

'ನಿನ್ನ ಕೃಪಾರಸದಿಂದ್ವೆಸೆಯಾನು ಕ
ರ್ಬೊನ್ನು ಚೆಂಬೊನ್ನಾದಂತೆ'

'ಕಾಯ ಬಾಂಧವರ ಕಣ್ಣೆರಡೆಂದು ಕಾಂಬುದ'

'ದೇವರಿಲ್ಲದ ದೇಗುಲದ ಬಿತ್ತರದಂತೆ
ಭೂವರನಿಲ್ಲದೂರಂತೆ'

'ಪುಟ್ಟಿದಂದಿಂದ ಪುರುಳುಗಾಣದವರು
ನೆಟ್ಟನೆ ನಿಧಿಯ ಕಂಡಂತೆ'

ಹೊನ್ನಮ್ಮ ಸಂಸ್ಕೃತ ಪದಗಳನ್ನು ಮಿತವಾಗಿ, ದೇಶ್ಯ ಪದಗಳನ್ನು, ತದ್ಭವಗಳನ್ನು ವಿಶೇಷವಾಗಿ ಉಪಯೋಗಿಸುತ್ತಾಳೆ. ಒಡೆಯ, ಊಳಿಗ, ನೋಂಪಿ, ಓಲಗ, ಜಸ, ಬಿಜ್ಜೆ, ಬಿಡುಗಣ್ಣು, ಬಣ್ಣನೆ, ಬೈತಲೆವಣಿ—ಮುಂತಾದ ಮಾತುಗಳ ಪೋಣಿಕೆಯಿಂದ ಭಾಷಾಸರಣಿ ಮೃದುವಾಗುತ್ತದೆ, ಕನ್ನಡದ ದೇಸಿಯಿಂದ ಇಂಪಾಗುತ್ತದೆ 'ಸಂಸಾರಕಾವ್ಯ'ವಾದ ಈ ಗ್ರಂಥದಲ್ಲಿ, ಭಕ್ತಿ, ಪ್ರೇಮ, ಸ್ನೇಹದಂಥ ಸುಕುಮಾರ ಭಾವಗಳಿಗೇ ಅವಕಾಶವುಂಟು ಕ್ಷಾತ್ರವನ್ನು ಸೂಚಿಸುವ ಪ್ರೌಢಪದಗಳು ಇಲ್ಲಿ ಬೇಕಿಲ್ಲ ಅಂತರಂಗದ ತೀವ್ರ ಯಾತನೆಯನ್ನು ತಿಳಿಸುವಾಗ 'ಕಾಯಧಾರಣೆ', 'ಪ್ರಾಯಶ್ಚಿತ್ತ', 'ವೇದನೆ' ಎಂಬ ಬಲವುಳ್ಳ ಪದಗಳನ್ನು ಕವಿ ಯೋಜಿಸುತ್ತಾಳೆ. ಕೆಲವೆಡೆಗಳಲ್ಲಿ ಚಿತ್ತದ ಬಗೆಬವಣೆಗಳನ್ನು ತಿಳಿಸಲು, ಕ್ರಿಯಾಪದವೊಂದನ್ನೇ ಪದ್ಯದಲ್ಲಿ ಮತ್ತೆ ಮತ್ತೆ ತರುತ್ತಾಳೆ.

ಬೆಸಗೊಂಬಳಿನಿಯನಾವೆಡೆಯೊಳಿರುವನಾ
ದೆಸೆಯಿಂದ ಬಂದ ಬಂದವರ
ಬೆಸಗೊಂಬಳು ಜೋಯಿಸರ ಜೋಗಿಪುರುಷರ
ಬೆಸಗೊಂಬಳು ಬಿಜ್ಜೆವಳರ (೭, ೩೪)

ಹೊನ್ನಮ್ಮ ಪದಗಳಿಗಾಗಿ ಆಯಾಸಪಡುವಂತೆ ಕಾಣುವು ದಿಲ್ಲ, ಶಬ್ದಗಳು ಭಾವಗಳ ಸಂಗಡ ಹರಿಯುತ್ತವೆ. ಕಾವ್ಯದ ಆಶಯವನ್ನು ಹೊರಗೆಡಹುತ್ತವೆ

ಅನುರಾಗದ ಕಾವನ್ನಾಗಲಿ, ಪ್ರಣಯ ಪ್ರಸಂಗವನ್ನಾಗಲಿ ಗಂಭೀರರೀತಿಯಲ್ಲಿ ತೋರಿಸುವ ಕೌಶಲವೂ ಈ ಕವಿಗೆ ಉಂಟು ಹೊನ್ನಮ್ಮನ ಅಭಿಪ್ರಾಯದಲ್ಲಿ ಸಂಸಾರ 'ಸುಖದ ಸುಗ್ಗಿ', ತಿಳಿ ವನ್ನು ಉಂಟುಮಾಡಿಕೊಡುವ ಸ್ಥಳ (ಸಂಧಿ ೬)

ಈ ಕಾವ್ಯ ಹೊನ್ನಮ್ಮನ ವಿನಯಸ್ವಭಾವದಿಂದ ವ್ಯಾಪ್ತ ವಾಗಿದೆ, ಆಕೆಯ ಸಹಾನುಭೂತಿಯನ್ನು ಸೂರೆಗೊಂಡಿದೆ ಈ ಕವಿ ಚತುರಳು, 'ನಗೆಗಾರಳು' ಕನಿಕರದ ವಿನೋದದಿಂದ ಹೀಗೆ ಮಾತನಾಡುತ್ತಾಳೆ ಹೆಣ್ಣನ್ನು 'ನಡೆವೆಣಕೀಯಲಾಗದು' ಜಗಳ ಕಾಯುವ ದಂಪತಿಗಳನ್ನು,

> ಇರ್ವರನಿಳೆನುಂಗದೆ ಪೊರುವುದರಿಂದ
> ಸರ್ವಂಸಹೆಯೆನಿಸುವುದು

## ೧೧. 'ಹದಿಬದೆಯ ಧರ್ಮ'ದ ಛಂದಸ್ಸು

ಈ ಗ್ರಂಥವನ್ನು ಸಾಂಗತ್ಯದಲ್ಲಿ ಬರೆಯಲಾಗಿದೆ ಇದಕ್ಕೆ 'ಸಂಗತಿ' ಎಂದೂ ಹೇಳುವುದುಂಟು ಈ ರೂಪು ಕನ್ನಡಕ್ಕೆ ಹಿಂದಿನಿಂದಲೂ ಒಗ್ಗಿಬಂದದ್ದು, ಹೊನ್ನಮ್ಮನ ಕಾಲಕ್ಕೆ ಇದು ಕಾವ್ಯ ಕಟ್ಟಲು ಗಣ್ಯವಾದ ದಾರಿಯೆಂದು ಸ್ಥಿರಪಟ್ಟಿತ್ತು ಈ ಬಂಧ ದಲ್ಲಿ ಹೇರಳವಾಗಿ ಗ್ರಂಥಗಳು ರಚಿತವಾಗಿದ್ದುವು ಇದು ಹಾಡಿನ ಮಟ್ಟು ಎಂದು ಹೇಳುತ್ತಾರೆ ಜನಪದ ಸಾಹಿತ್ಯ ವಿಶೇಷವಾಗಿ ಕಾಣಿಸಿಕೊಳ್ಳುವುದು ತ್ರಿಪದಿ ಮತ್ತು ಈ ಸಾಂಗತ್ಯದಲ್ಲಿಯೇ.

ಸಾಂಗತ್ಯವೆಂಬ ಹೆಸರು ಕಿವಿಗೆ ಬಿದ್ದೊಡನೆ 'ಭರತೇಶ ವೈಭವ' ಮತ್ತು 'ಮೋಹನ ತರಂಗಿಣಿ'ಗಳನ್ನು ರಚಿಸಿದ ಉದ್ದಾಮ ಕವಿಗಳಾದ ರತ್ನಾಕರವರ್ಣಿ (೧೫೫೭) ಕನಕದಾಸರ (೧೫೫೦) ಹೆಸರುಗಳು ನೆನಪಿಗೆ ಬರುತ್ತವೆ ಉದಾತ್ತವೂ, ರಸ

ಭರಿತವೂ ಆದ ಈ ದೊಡ್ಡ ಕಾವ್ಯಗಳನ್ನು ಸಾಂಗತ್ಯದಲ್ಲಿ ಬರೆದು ಈ ಕವಿಗಳು ಅದರ ಗೌರವವನ್ನು ಹೆಚ್ಚಿಸಿದರು ಈಗ ತಿಳಿದಿರುವ ಮಟ್ಟಿಗೆ ಸಾಂಗತ್ಯದಲ್ಲಿ ಹಾಡುಗಬ್ಬ ಬರೆದ ಮೊದಲನೆಯ ಕವಿ ಶಿಶುಮಾಯಣ (ಕ್ರಿ ಶ ಸುಮಾರು ೧೨೩೩)

ಸಾಂಗತ್ಯ ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ಕಥಾಕಾವ್ಯಕ್ಕೆ ಬಳಕೆಗೆ ಬಂದಿದ್ದರೂ ಇದರಿಂದ ತತ್ವ, ವಿಚಾರ, ಭಕ್ತಿ ಜ್ಞಾನಗಳನ್ನು ಸಮರ್ಪಕವಾಗಿ ವಿವರಿಸಬಹುದು, ರಸಗಂಗೆಯನ್ನು ಹರಿಯಿಸಬಹುದು, ಈ ಪದ್ಯದ ರೀತಿ ಅಷ್ಟು ಬಲ್ಮೆಯುಳ್ಳುದಾಗಿದೆ ಆದುದರಿಂದಲೇ ಸಾಂಗತ್ಯದಲ್ಲಿ ಅನೇಕ ಜೈನ, ವೀರಶೈವ, ಬ್ರಾಹ್ಮಣ ಗ್ರಂಥಗಳು ಹುಟ್ಟಿವೆ ನಮ್ಮ ಕಬ್ಬಿಗಿತಿಯಾದ ಹೊನ್ನಮ್ಮನೂ ಕವಿಗಳು ಮೆಚ್ಚಿದ ಈ ಸಾಂಗತ್ಯ ರೀತಿಯನ್ನೇ ಒಪ್ಪಿ ಇದರಲ್ಲಿ 'ಹದಿಬದೆಯ ಧರ್ಮ'ವನ್ನು ಬರೆದಿದ್ದಾಳೆ

ಸಾಂಗತ್ಯವೆಂದರೆ ಸಂಗತಿ ಹಾಕಿ ಹಾಡಿಕೊಳ್ಳಬಹುದಾದ ಪದ್ಯ ಇದು ದ್ರಾವಿಡ ಗಣವೆಂದು ಕರಸಿಕೊಳ್ಳುವ ಬ್ರಹ್ಮ ಮತ್ತು ವಿಷ್ಣು ಗಣಗಳಿಂದ ಕೂಡಿರುವುದು. ಈ ಗಣಗಳು ಏರ್ಪಡಲು 'ಅಂಶ'ವೆಂದು ಹೇಳಿಸಿಕೊಳ್ಳುವ ಗುರು ಕಾರಣವಾಗುವುದು ಗಣರಚನೆಗೆ ಆಧಾರಿ ಮೊದಲ ಗುರು, 'ಮೂಲಾಂಶ'. ಇದಕ್ಕೆ ಎರಡು ಲಘುವಾಗಿ ಒಡೆಯುವ ಶಕ್ತಿಯುಂಟು ಇದರೊಡನೆ "ಒಂದು, ಎರಡು ಗುರುಗಳನ್ನು (ಅಂಶಗಳನ್ನು) ಸೇರಿಸಿದರೆ" ಬ್ರಹ್ಮ ವಿಷ್ಣು ಗಣಗಳು ಜನಿಸುವುವು, ಮೊದಲನೆಯ ಅಂಶವನ್ನು ಬಿಟ್ಟರೆ, ಮುಂದಿನ ಅಂಶಗಳಲ್ಲಿ ಗುರುಗೆ ಬದಲು ಲಘು ಬಂದರೆ ಒಂದೇ ಒಂದು ಬರಬೇಕು. ಇವು ಕಾವ್ಯದ ರಾಗ, ರಸಕ್ಕೆ ತಕ್ಕಂತೆ ಹಿರಿದಾಗಿ, ಕಿರಿದಾಗಿ ಮಾರ್ಪಡುವ ಶಕ್ತಿಯುಳ್ಳ ಮೃದುಗಣಗಳು. ಮಾತ್ರಾಗಣದ ಅಚ್ಚಿಗೆ ಬಿದ್ದು ಹೆಪ್ಪುಗಟ್ಟದೆ ಇರುವಂಥ, ಒಂದಕ್ಕೊಂದು ಬದಲಾಗಿ ಬರಬಲ್ಲ ಸ್ವಾರಸ್ಯವುಳ್ಳವು ಈ ದೇವಗಣಗಳು

(ಕನ್ನಡ ಕೈಪಿಡಿ ಸಂಪುಟ ೧, ೨ನೆಯ ಮುದ್ರಣ, ಪುಟ ೧೫೫)

ಸಾಂಗತ್ಯದಲ್ಲಿ ಸಾಮಾನ್ಯವಾಗಿ ೧, ೩ನೆಯ ಪಾದಗಳಲ್ಲಿ ನಾಲ್ಕು ವಿಷ್ಣುಗಣಗಳೂ, ೨, ೪ನೆಯ ಪಾದಗಳಲ್ಲಿ ೨ ವಿಷ್ಣುಗಣಗಳೂ ಕಡೆಗೆ ಒಂದು ಬ್ರಹ್ಮಗಣವೂ ಇರುತ್ತವೆ ಅಲ್ಲಲ್ಲಿ ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮಗಣ ಬರುವುದುಂಟು ಇಲ್ಲಿ, ಒಂದೆರಡು ಪದ್ಯಗಳಿಗೆ ಪ್ರಸ್ತಾರ ಹಾಕಿ ತೋರಿಸಬಹುದಾಗಿದೆ.

ಆದಿನಾ | ರಾಯಣ | ನಾಶೇಷ | ನೊಡಗೂಡಿ
ಯಾದರ | ದಿಂದವ | ತರಿಸೆ
ಯಾದವ | ಕುಲವೇ | ಳಿಗೆವೆ | ತ್ತಿರ್ಪುದು
ಮೇದಿನಿ | ಯೊಳು ಮೈಮೆ | ವಡೆದು

ಪೆಣ್ಣಲ್ಲ | ವೆ ತಮ್ಮ | ನೆಲ್ಲ ಪ | ಡೆದ ತಾಯಿ
ಪೆಣ್ಣಲ್ಲ | ವೆ ಪೊರೆ | ದವಳು
ಪೆಣ್ಣು ಪೆ | ಣ್ಣೆಂದೇ | ತಕೆ ಬೀಳು | ಗಳೆವರು
ಕಣ್ಣು ಕಾ | ಣದ ಗಾ | ವಿಲರು

**ಇಲ್ಲವೆ**

ಕಣ್ಣು ಕಾ | ಣದ ಗಾವಿ | ಲರು

ಶಬ್ದ ಅರ್ಥಗಳಿಗೆ ಗಮನಕೊಟ್ಟು, ಎಲ್ಲವನ್ನೂ ಒಂದೇ ಸರಾಗದ ಏಕನಾದಕ್ಕೆ ಇಳಿಸದೆ, ಗಣವಿಭಾಗ ಮಾಡಬೇಕು. ಉದಾಹರಣೆಗೆ—

– ˙ – ˙ ᑌ
ಪೆಣ್ಣು ಪೆ । ಣ್ಣೆಂದೇತ । ಕೆ ಬೀಳು । ಗಳಿವರು

ಎನ್ನುವುದಕ್ಕಿಂತ, ಏತಕೆ ಎಂಬ ಶಬ್ದವನ್ನು ಏ।ತಕೆ ಎಂದು ಒಡೆಯುವುದು ಹಿತಕರ ಹಾಗೆಯೇ

ಮೊಗದೋ । ರವು ಮೋ । ಸಗಳು (೨, ೨೦)

ಎಂಬ ಪಾದವನ್ನು

ಮೊಗದೋರಾ । ವೂ ಮೋಸಾ । ಗಾಳು

ಎಂದು ಹಾಡುವುದಕ್ಕಿಂತ

ಮೊಗದೋ(ಸಂಗತಿ) । ರವು ಮೋ(ಸಂಗತಿ) । ಸಗಳು

ಎಂದು ಹಾಡುವುದು ಲೇಸು ಸಂಗೀತಕ್ಕಾಗಿ ಶಬ್ದರೂಪವನ್ನು ಹಾಳುಮಾಡಬಾರದು

## ೧೨. ಕನ್ನಡ ಕಬ್ಬಿಗಿತಿಯರು

ಸ್ತ್ರೀಯರು ಪುರುಷರಿಗಿಂತ ಪ್ರತಿಭಾಶಕ್ತಿಯಲ್ಲಿ ಕಡಮೆಯೆಂದು ಹೇಳುವುದು ವಾಡಿಕೆ ಬಹುಶಃ ಮಹಿಳೆಯರಿಗೆ ಸಾಮಾಜಿಕ ನಿರ್ಬಂಧ ಪ್ರತಿಕೂಲಗಳು ಹೆಚ್ಚು ಒದಗಿ, ಅವರ ವಿದ್ಯಾಭ್ಯಾಸವನ್ನೂ, ಅನುಭವದ ವೈಶಾಲ್ಯವನ್ನೂ, ಕಾವ್ಯಶಕ್ತಿಯನ್ನೂ ಕುಗ್ಗಿಸುತ್ತಿರಬಹುದು, ಕುಗ್ಗಿಸಿರಬಹುದು ಇದು ಹೀಗೆಯೆ ಎಂದು ನಿಷ್ಕರ್ಷಿಸಿ ಹೇಳುವುದು ಕಷ್ಟ ಯಾವ ಸಾಹಿತ್ಯದಲ್ಲಿಯೂ ಸ್ತ್ರೀ ಲೇಖಕಿಯರು ಕಡಮೆಯೇ

ಕನ್ನಡ ಸಾಹಿತ್ಯಕ್ಕೂ ಸ್ತ್ರೀಯರು ಹೆಚ್ಚು ಸೇವೆ ಸಲ್ಲಿಸಿಲ್ಲ ಹಿಂದಿನಕಾಲದ ಕೆಲವರು ಕಬ್ಬಿಗಿತಿಯರ ಹೆಸರನ್ನು ಕೇಳಿದ್ದೇವೆ. ಇವರಲ್ಲಿ ನಮಗೆ ಐತಿಹ್ಯಗಳ ಆಧಾರದಿಂದ ಪರಿಚಿತರಾಗಿರುವವರು ವಿಜಯೆ ಅಥವಾ ವಿಜ್ಜಿಕಾ ಮತ್ತು ಕಂತಿ ಅಕ್ಕ ಮಹದೇವಿ, ಶೃಂಗಾರಮ್ಮ, ಚೆಲುವಾಂಬೆ, ಹೆಳವನ ಕಟ್ಟೆ ಗಿರಿಯಮ್ಮ—ಇವರ ಬಗ್ಗೆ ನಮಗೆ ಚಾರಿತ್ರಕ ಮತ್ತು ಪೌರಾಣಿಕ

ಆಧಾರಗಳು ದೊರೆಯುತ್ತವೆ. ಇವರ ವ್ಯಕ್ತಿವಿಷಯ ಕಾವ್ಯವಿಷಯ ಗಳನ್ನು ಸಂಕ್ಷೇಪವಾಗಿ ತಿಳಿಯುವುದು, ಈ ಕಾವ್ಯಗಳೊಡನೆ ಹೊನ್ನಮ್ಮನ ಗ್ರಂಥವನ್ನು ಅಳೆದುನೋಡುವುದು ಉಚಿತವೆಂದು ಕಾಣುತ್ತದೆ

ವಿಜಯೆ ಅಥವಾ ವಿಜ್ಜಿಕಾ ಗಣ್ಯಳಾದ ಕವಿಯೆಂದು ಹೆಸರು ವಾಸಿಯಾಗಿದ್ದಾಳೆ ಈಕೆ ಕನ್ನಡ ನಾಡಿನವಳೆಂದು ಪ್ರತೀತಿ ಕಂತಿ ದೋರಸಮುದ್ರದ ಹೊಯ್ಸಳ ದೊರೆಯಾದ ವಿಷ್ಣುವರ್ಧನನ ಆಸ್ಥಾನದಲ್ಲಿ ಇದ್ದಳೆಂದೂ, ಆ ದೊರೆಯ ಸಭಾಕವಿಯಾದ ನಾಗಚಂದ್ರನ ಸಮಕಾಲೀನಳೆಂದೂ ಹೇಳಿಕೆಯುಂಟು. ಈಕೆಗೆ 'ಅಭಿನವ ವಾಗ್ದೇವಿ' ಎಂಬ ಬಿರುದು ಇದ್ದಿತಂತೆ 'ಕಂತಿ ಹಂಪರ ಸಮಸ್ಯೆಗಳು' ಹುಟ್ಟಲು ಕಾರಣಳಾದ ಈ ಪಂಡಿತೆ ಗೌರವಾರ್ಹಳು

ಅಕ್ಕಮಹದೇವಿ (ಸುಮಾರು ೧೧೬೦) ಮತ್ತು ಹೊನ್ನಮ್ಮ ಆಯಾಕಾಲದ ಸ್ತ್ರೀ ಜೀವನದ ಪ್ರತಿನಿಧಿಗಳು ತಿಳಿಗನ್ನಡದಲ್ಲಿ, ಗದ್ಯದಲ್ಲಿ ಒಬ್ಬಳು, ಪದ್ಯದಲ್ಲಿ ಒಬ್ಬಳು, ಕಾವ್ಯ ಕಟ್ಟಿದ ಉದಾರ ವ್ಯಕ್ತಿಗಳು ತಾವು ಅನುಭವಿಸಿ ಆಚರಿಸಿದ ವೀರಶೈವ ವಿಶಿಷ್ಟಾದ್ವೈತ ಭಕ್ತಿಪಂಥಗಳ ಮುಖ್ಯ ಲಕ್ಷಣಗಳನ್ನು ತಮ್ಮ ಗ್ರಂಥಗಳಲ್ಲಿ —'ಮಹದೇವಿಯಕ್ಕನ ವಚನಗಳು', 'ಹದಿಬದೆಯ ಧರ್ಮ'— ಅಚ್ಚುಕಟ್ಟಾಗಿ ಬಿಂಬಿಸಿದ ಸಹಜ ಕವಿಗಳು ಹೊನ್ನಮ್ಮನ ಕಾಲ ಮತ್ತು ಆವರಣದ ಪ್ರಸ್ತಾಪ ಈ ಮೊದಲೆ ಬಂದಿದೆ ಅಕ್ಕ ಮಹದೇವಿ ಜೀವಿಸಿದ ಹನ್ನೆರಡನೆಯ ಶತಮಾನದ ವೈಶಿಷ್ಟ್ಯಗಳನ್ನು ತಿಳಿಯುವುದು, ವಚನಗಳ ಮೂಲಕ ಆಕೆಯ ವ್ಯಕ್ತಿಪರಿಚಯವನ್ನು ಮಾಡಿಕೊಳ್ಳುವುದು ಈ ಸಂದರ್ಭಕ್ಕೆ ಪ್ರಕೃತ.

ಹನ್ನೆರಡನೆಯ ಶತಮಾನ ಭಕ್ತಿಭಂಡಾರಿಗಳಾದ ಬಸವಣ್ಣನವರನ್ನು ಕರ್ನಾಟಕಕ್ಕೆ ದಯಪಾಲಿಸಿ ಅವರ ಯುಗವೆಂದು ಪ್ರಸಿದ್ಧವಾದದ್ದು, ವೀರಶೈವ ಮತದ ದಾಸಯೋಗ ಹೊಮ್ಮಿ ಜನರು ಉದ್ಧಾರವಾದ ಸಮಯವದು ಬಹು ಜನರ ಹಿತದ

ಸಲುವಾಗಿ, ಈ ಧರ್ಮ ಸಾರ್ವತ್ರಿಕ ಚಳವಳಿಯ ರೂಪು ತಾಳಿತು. ಒಬ್ಬ ದೇವರಲ್ಲಿ ಭಕ್ತಿಯನ್ನೂ ದಯಾಧರ್ಮವನ್ನೂ ಜನಜೀವನ ದಲ್ಲಿ ಹರಡಿ ಲೋಗರ ಬಾಳನ್ನು ತಿದ್ದಿತು. ಬಸವಣ್ಣನವರು ಸ್ತ್ರೀಯರಿಗೆ ಪುರುಷರಿಗೆ ಸರಿಸಮವಾದ ಹಕ್ಕುಬಾಧ್ಯತೆಗಳನ್ನು ಕಲ್ಪಿಸಿಕೊಟ್ಟರು. ಆದುದರಿಂದ ಅಂದಿನ ಮಹಿಳೆಯರಲ್ಲಿ ಆತ್ಮಗೌರವ, ಧರ್ಮಬುದ್ಧಿ, ವಚನರಚನೆಯ ಕುತೂಹಲ ಹೆಚ್ಚಿದುವು. ಸ್ತ್ರೀಯರು ಸಂಸಾರದಲ್ಲಿದ್ದು ಶರಣಭಾವ ಪಡೆಯು ವಂಥವರಾದರು ಹೀಗೆ ಶಕ್ತರಾದವರು ಅಕ್ಕತಂಗಿಯರ ತಿಳಿವಿ ಗಾಗಿ 'ವಚನೋಪನಿಷತ್ತು'ಗಳನ್ನು ಸರಳಪದಗಳಲ್ಲಿ ಹಾಡಿದರು, ಅವುಗಳ ತತ್ವವನ್ನು ಆಚರಿಸಿ ತೋರಿಸಿದರು 'ವಚನ' ಕನ್ನಡ ಸಾಹಿತ್ಯದ ರಮ್ಯವಾದ ಗದ್ಯಪ್ರಭೇದ, ಇದು ವೀರಶೈವ ಮತ ಕನ್ನಡ ವಾಙ್ಮಯಕ್ಕೆ ಕೊಟ್ಟ ಆಸ್ತಿ; ಶಿವಶರಣೆಯರ ಗದ್ಯಗೀತ ಗಳು ಅವರು ಮಾಡಿದ ಸಾಹಿತ್ಯಸೇವೆ

ವಚನಕಾರ್ತಿಯರು ಬದುಕಿನ ಬಗೆಬಗೆಯ ಹಂತದಲ್ಲಿರುವ ಭಕ್ತೆಯರು, ಅಕ್ಕಮಹದೇವಿ, ಅಕ್ಕನಾಗಾಯಿ, ಗಂಗಾಂಬಿಕೆ, ಮುಕ್ತಾಯಕ್ಕ — ಈ ಮಹಾನುಭಾವೆಯರೆಲ್ಲ ತಮ್ಮ ಧರ್ಮ ಜೀವನದ ಚಿತ್ರಗಳನ್ನು ಇಂಪಾದ ಗದ್ಯದಲ್ಲಿ ಸುಳಿಯಿಸಿದ್ದಾರೆ. ಇವೇ ಶಿವಶರಣೆಯರ ಅನುಭವಜನ್ಯ ವಚನಗಳು, ನುಡಿಗಳು

ಈ ವಚನಕಾರ್ತಿಯರೆಲ್ಲ ಪೂಜ್ಯರು ಅಕ್ಕಮಹದೇವಿ ಇವರ ನಾಯಕರತ್ನ ಈ ಯೋಗಿನಿಯ ವಿಷಯವಾಗಿ ರಗಳೆ, ಪುರಾಣ, ನಾಟಕಗಳು ಹುಟ್ಟಿವೆ ಈಕೆ ಹುಟ್ಟಿದ ಊರು ಉಡುತಡಿ. ಮದುವೆಯಾಗಿತ್ತೊ ಇಲ್ಲವೊ ನಿಶ್ಚಿತವಾಗಿ ತಿಳಿದಿಲ್ಲ. ಈ 'ವಿರಾಗಿಣಿ' ಕಿರಿಯತನದಲ್ಲಿ ಪಾರಮಾರ್ಥಿಕ ಸಂಸಾರವನ್ನು ಸ್ವೀಕರಿಸಿದಳು. ಈಕೆಯ ಜೀವನವೇ ಒಂದು 'ದಿವ್ಯಕಾವ್ಯ' ದಂತಿದೆ ಭಕ್ತಿಯಲ್ಲಿ, ಜ್ಞಾನದಲ್ಲಿ ಬದುಕುತ್ತಿದ್ದ ಈ ಪುಣ್ಯವಂತಳು ಸಂಸ್ಕೃತದಲ್ಲಿ ಹೊನ್ನಮ್ಮನಂತೆ ಪಾರಂಗತಳಾದವಳು. ಹೊನ್ನಮ್ಮ ನಂತೆ ಮನಗಂಡು ಮೆಚ್ಚಿದ ತನ್ನ ಮತದ ಗುಟ್ಟು ಗಹನತೆಗಳನ್ನು

ಅಭ್ಯಾಸಿಸಿದ ಶ್ರೇಷ್ಠಳು ಗೃಹಿಣಿಯಾಗದೆ ಶರಣೆಯಾದ ಅಕ್ಕ ಅಂದಿನ ಸಾರ್ವಜನಿಕ ಧರ್ಮಪ್ರಸಾರದ ಕಾರ್ಯದಲ್ಲಿ ಭಾಗ ವಹಿಸಿದಳು ಧರ್ಮಾಚರಣೆಯಲ್ಲಿ ನ್ಯಾಯಸಮ್ಮತವಾದ ಸ್ವಾತಂತ್ರ್ಯವುಳ್ಳ ಮಹದೇವಿ 'ನಾಮದಲ್ಲಿ ಹೆಣ್ಣುರೂಪಲ್ಲದೆ ಭಾವಿಸಲು ಗಂಡುರೂಪು ನೋಡಾ' ಎಂದು ಸ್ತ್ರೀ ಜೀವನದ ಅತಿ ಶಯವನ್ನು ಸಾರಿದಳು ಅಕ್ಕ ಕಲ್ಯಾಣನಗರದ ಶಿವಾನುಭವ ಮಂಟಪದಂಥ ತತ್ವಜ್ಞಾನದ ಪರಿಷತ್ತಿನಲ್ಲಿದ್ದು ನಿಗೂಢ ವಿಷಯ ಗಳನ್ನು ವಿಚಾರಮಾಡುವಷ್ಟು ಪ್ರಜ್ಞೆಯುಳ್ಳ ಮೇಧಾವಿನಿ ಈಕೆ ಮನೆ ತೊರೆದರೂ ಜನರನ್ನು ತೊರೆಯದೆ ಅವರ ಸಮೂಹದಲ್ಲಿದ್ದು ಅನೇಕರಿಗೆ ಕುಶಲವನ್ನು ಒದಗಿಸಿ ತನ್ನ ಬದುಕಿನ ಧ್ಯೇಯವನ್ನೂ ಸಾಧಿಸಿಕೊಂಡ ತೇಜಸ್ವಿನಿ

ಹೊನ್ನಮ್ಮ ಇನ್ನೊಂದು ತರದ ತೇಜಸ್ವಿನಿ, ಸಂಪ್ರದಾಯ ಬದ್ಧಳಾಗಿದ್ದವಳು, ರಾಜರ ಆಶ್ರಿತವರ್ಗಕ್ಕೆ ಸೇರಿದವಳು ಅಂದಿನ ಮತವಿಚಾರಗಳನ್ನು ನಂಬಿ ವರ್ತಿಸುವ ವ್ಯಕ್ತಿ ಆದರೂ, ಹೊನ್ನಮ್ಮ ತನ್ನ ಆಲೋಚನೆಗಳನ್ನು ಧೈರ್ಯವಾಗಿ ಹೇಳಿದ್ದಾಳೆ, ಹೆಣ್ಣುಮಕ್ಕಳ ಯೋಗಕ್ಷೇಮಕ್ಕಾಗಿ ತವಕಿಸುತ್ತಾಳೆ, ತನ್ನ ವ್ಯಕ್ತಿತ್ವ ವನ್ನು ತಕ್ಕಮಟ್ಟಿಗೆ 'ಹದಿಬದೆಯ ಧರ್ಮ'ದಲ್ಲಿ ಕಾಣಿಸಿದ್ದಾಳೆ ಆದರೆ, ಅಕ್ಕಮಹದೇವಿಯಂತೆ ಒಂದು ಜನಮಾನ್ಯ ಚಳವಳಿ ಯಲ್ಲಿ ಪಾತ್ರವಹಿಸಿ ಕೆಲಸಮಾಡಲು ಹೊನ್ನಮ್ಮನಿಗೆ ಸಾಧ್ಯವಾಗ ಲಿಲ್ಲ ಇವರಿಬ್ಬರ ವಿಚಾರಕ್ರಮ, ವರ್ತನೆಯಲ್ಲಿ ವ್ಯತ್ಯಾಸವಿದ್ದರೂ, ಉದಾರಭಾವದಲ್ಲಿ, ಸೋದರೀವಾತ್ಸಲ್ಯದಲ್ಲಿ ಹೊನ್ನಮ್ಮ ಅಕ್ಕಮಹ ದೇವಿಯರಿಬ್ಬರೂ ಸರಿಸಮರು

ಅಕ್ಕಮಹದೇವಿಯ ವಚನಗಳು ನಿಷ್ಠೆಯ ಕೆಚ್ಚಿನಲ್ಲಿ, ಸತ್ಯದ ಸವಿಯಲ್ಲಿ ಮಿಗಿಲಾಗಿವೆ, ಕೆಲವನ್ನು ಮಾತ್ರ ಇಲ್ಲಿ ಗಮನಿಸ ಬಹುದಾಗಿದೆ

ಈ ದೈನ್ಯಭಾವ—'ಎನ್ನ ಮಾಯದ ಮದವ ಮುರಿಯಯ್ಯ! ಎನ್ನ ಕಾಯದ ಕತ್ತಲೆಯ ಕಳೆಯಯ್ಯ! ಎನ್ನ ಜೀವದ ಜಂಜಡವ

ಮಾಣಿಸಯ್ಯ! ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವಯ್ಯ; ಎನ್ನ ಸುತ್ತಿದ ಪ್ರಪಂಚವ ಬಿಡಿಸು ನಿಮ್ಮ ಧರ್ಮ'

ಈ ಕೃತಜ್ಞತಾಬುದ್ಧಿ—'ಏಳೇಳು ಜನ್ಮದಲಿ ಶಿವಭಕ್ತರೇ ಬಂಧುಗಳೆನಗೆ', 'ನಿಮ್ಮ ಮಂಡೆಗೆ ಹುವ್ವ ತಾಹೆನಲ್ಲದೆ ಹುಲ್ಲ ತಾರೆನು'

ಈ ಛಲಗಾರಿಕೆ—'ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡೆಯ, ಏನು ಮಾಡಿದರೆಯೂ ನಾನಂಜುವಳಲ್ಲ, ತರಗೆಲೆಯ ಮೇಲಿದ್ದು ನಾನಿಹೆನು, ಸುರಿಗೆಯ ಮೇಲೊರಗಿ ನಾನಿಹೆನು ಚೆನ್ನಮಲ್ಲಿಕಾರ್ಜುನಯ್ಯ! ಕರಕೆಡೆ ನೋಡಿದೊಡೆ, ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು'

ಈ ಪರಮಾತ್ಮಭಾವ— 'ವನವೆಲ್ಲ ನೀವೆ ವನದೊಳಗಣ ದೇವತರುವೆಲ್ಲ ನೀವೆ ತರುವಿನೊಳಗಾಡುವ ಖಗಮೃಗವೆಲ್ಲ ನೀವೆ ಚೆನ್ನಮಲ್ಲಿಕಾರ್ಜುನ! ಸರ್ವಭರಿತನಾಗಿ ಎನಗೆ ಮುಖದೋರ'

ಅಕ್ಕನವರ ಮಾತುಗಳು ಪರಮಾನುಭವದ ಆಣಿಮುತ್ತುಗಳು ಅಕ್ಕ ಹಿರಿಯ ವ್ಯಕ್ತಿ, ಹಿರಿಯ ಕವಿ

ಶೃಂಗಾರಮ್ಮ (ಕಾಲ ಸುಮಾರು ೧೬೮೫) 'ಪದ್ಮಿನೀ ಕಲ್ಯಾಣ'ವನ್ನು ಸಾಂಗತ್ಯದಲ್ಲಿ ಬರೆದಿದ್ದಾಳೆ ತಿರುಪತಿಯ ಶ್ರೀನಿವಾಸ ದೇವರಿಗೂ ಪದ್ಮಾವತಿಗೂ ನಡೆದ ವಿವಾಹ ಇಲ್ಲಿ ವರ್ಣಿತವಾಗಿದೆ ಕಾವ್ಯ ಪದ್ಮಿನಿಯ ಬಾಲ್ಯದ ಸಹಜ ಸರಳತೆಯಿಂದ ಕೂಡಿ ಮುದ್ದಾಗಿದ್ದರೂ ಕಾವ್ಯದ ಘಟನೆ ಅಮಾನುಷವಾದುದು

ಮೈಸೂರ ದೊರೆಗಳಾದ ದೊಡ್ಡ ಕೃಷ್ಣರಾಜ ಒಡೆಯರ (೧೭೧೩–೧೭೩೫) ಅರಸಿಯಾದ ಚೆಲುವಾಂಬೆ 'ವರನಂದಿ ಕಲ್ಯಾಣ'ವನ್ನು ಸಾಂಗತ್ಯದಲ್ಲಿ ರಚಿಸಿದ್ದಾಳೆ ಇದು ಏಳು ಸಂಧಿಗಳಿಂದ ಕೂಡಿದೆ ವಸ್ತು ಪೌರಾಣಿಕ, ಮೇಲುಕೋಟೆಯ ಚೆಲುವರಾಯ ಸ್ವಾಮಿಗೂ ದಿಲ್ಲಿಯ ಪಾದಷಹನ ಮಗಳಿಗೂ ನಡೆದ ಮದುವೆಯ ವಿಷಯ ಮುಖ್ಯವಾಗಿದೆ ಮಾನುಷಾಂಶಗಳಿಂದ ಕಾವ್ಯ ಸುಂದರವಾಗಿದೆ ಪ್ರೇಮಭಾವದ ಹುಟ್ಟು, ವಿರಹಯಾತನೆ ರಮ್ಯವಾಗಿ

ನಿರೂಪಿತವಾಗಿವೆ ಚೆಲುವಾಂಬೆ ಬಹುಶಃ ಹೊನ್ನಮ್ಮನ ಕಾವ್ಯದ ವಿರಹಿಣಿಯ ಸಂಧಿಯಿಂದ ತನ್ನ ನಾಯಕಿಯ ವಿರಹಾವಸ್ಥೆಯ ವರ್ಣನೆಗೆ ಸಲಹೆ ಸೂಚನೆಗಳನ್ನು ತೆಗೆದುಕೊಂಡಿರಬಹುದು. ಮಗಳನ್ನು ಅತ್ತೆಯ ಮನೆಗೆ ಕಳುಹಿಸುವಾಗ ಕೊರಗಿ ಕಣ್ಣೀರು ಸುರಿಸುವ ತಾಯಿ, ಮರುಗುವ ಅಣ್ಣಂದಿರು ಓದುಗರ ಮನವನ್ನು ಆಕರ್ಷಿಸುತ್ತಾರೆ ಅಲ್ಲಿ ಕನ್ನೆ ಹೇಗೆ ವರ್ತಿಸಬೇಕು ಎಂಬು ದನ್ನು ಕುರಿತು ಹೊನ್ನಮ್ಮ ಚೆಲುವಾಂಬೆಯರಿಬ್ಬರೂ ಹೆಣ್ಣುಮಗು ವಿಗೆ ಮೃದುಮಧುರವಾಗಿ ಬೋಧೆಮಾಡುತ್ತಾರೆ

ಹೊನ್ನಮ್ಮ ‘ಪೆತ್ತವರನು ಪೆರ್ಮೆಗೊಳಿಸು’
‘ಮನೆಯೊಳಗಿರುವೆಮ್ಮ ಮಂದಿಗೆ ಬರಿಸದೆ
ಮನದನ್ನನ ಮನ ಒಲಿಸು’

ಚೆಲುವಾಂಬೆ ಅತ್ತೆಯಮನೆಯೊಳು ಉತ್ತಮಳೆನಿಸಿಕೊಳ್ಳಮ್ಮ
ಪೆತ್ತವರೊಳ್ಳಿದರೆನಿಸು ನೀ
ಸುತ್ತಮ ಸತಿಯಾಗಿ ಬಾಳು

ಭಕ್ತಕವಿಯಾದ ಗಿರಿಯಮ್ಮ (೧೭೫೦) ಚಂದ್ರಹಾಸನ ಕಥೆ, ಉದ್ದಾಲಿಕನ ಕಥೆ ಮತ್ತು ಹಾಡುಗಳನ್ನು ಬರೆದಿದ್ದಾಳೆ ಅಕ್ಕಮಹದೇವಿಯಂತೆ ಈಕೆ ಇಷ್ಟದೇವತೆಯಾದ ಹೆಳವನಕಟ್ಟೆ ರಂಗನಾಥನನ್ನು ಭಾವುಕತನದಿಂದ ಅರ್ಚಿಸಿ, ಆತ್ಮಾರ್ಪಣೆ ಮಾಡಿ ದವಳು ಈಕೆಯ ಪದಗಳು ಒಂದು ರೀತಿಯ ಭಾವಗೀತಗಳು, ಈ ಹರಿಶರಣಳ ಅಂತರಂಗವನ್ನು ಕಾಣಿಸುವ ಹರಳುಗಳು

‘ಹದಿಬದೆಯ ಧರ್ಮ’ಕ್ಕಿರುವ ವಾಸ್ತವತೆ, ವಿಚಾರಪುಷ್ಟಿ ಮಿಕ್ಕ ಕಬ್ಬಿಗಿತಿಯರ ಗ್ರಂಥಗಳಲ್ಲಿ ವಿಶೇಷವಾಗಿ ಗೋಚರಿಸಿಲ್ಲ ವೆನ್ನಬಹುದು ಹೊನ್ನಮ್ಮ ಕಾವ್ಯಕ್ಕಾಗಿ ಆರಿಸಿಕೊಂಡ ವಿಚಾರ ಹೆಂಗಸರ ಉನ್ನತಿಯನ್ನು ಕುರಿತದ್ದು, ಇದು ಉದಾತ್ತವಾಗಿದೆ, ಭದ್ರವಾಗಿದೆ ಬಹುಜನ ಅಕ್ಕತಂಗಿಯರ ಹಿತದೃಷ್ಟಿ ಈ ಕಬ್ಬಿಗಿತಿ ಗಿದೆ. ಶ್ರೇಷ್ಠವಾದ ತತ್ವವನ್ನು ತೂಕ ಕೆಡಿಸದೆ ಕೌಶಲದಿಂದ

ಕಿರಿದನ್ನು ಮಾಡಿಕೊಂಡಿದ್ದಾಳೆ. ಔಚಿತ್ಯದಿಂದ ಕಾವ್ಯದ ಸಂಧಿಗಳನ್ನು ಭಾಗಿಸಿಕೊಂಡಿದ್ದಾಳೆ ಈ ಕಾವ್ಯದಲ್ಲಿ ಬೇಡವಾದ ಪದವಿಲ್ಲ, ಉದ್ದವಾದ ವರ್ಣನೆಯಿಲ್ಲ, ಸಂಸಾರದಲ್ಲಿರುವ ಹೆಣ್ಣಿನ ಬಾಳು ಹೇಗೆ ಸುಮಂಗಳವಾದೀತು, ವಿವಾಹ ಮಂಗಳಗಳಲ್ಲಿ ಹೇಗೆ ಸಮರ್ಪಕತೆ ಬಂದೀತು—ಎಂಬ ಆಳವಾದ ವಿಚಾರವನ್ನು ಕವಿ ಚಿಂತನೆಮಾಡಿ, ಕಾವ್ಯದಲ್ಲಿ ಉಚ್ಚರಿಸಿ ತೋರಿಸಿದ್ದಾಳೆ.

ಇಂದಿನ ಗೃಹಿಣಿಯರು ಕೂಡ ಹೊನ್ನಮ್ಮನ ಕಾವ್ಯದ ಪಠನದಿಂದ ತತ್ವಬೋಧೆಯನ್ನು ಪಡೆಯಬಹುದು ವಿವಾಹದ ಸಂಸ್ಥೆ ಉಳಿಯುವಂತಹುದು, ಮನಸ್ಸಿನ ಪ್ರೇಮಭಾವ ಬದುಕ ಬೇಕಾದದ್ದು, ಪಾತಿವ್ರತ್ಯದ ಆದರ್ಶ ನಡವಳಿಗೆ ತಕ್ಕದ್ದು. ಆದುದರಿಂದ ಹೊನ್ನಮ್ಮನ ಪುಸ್ತಕ ಇಂದಿಗೂ ಪಾತಿವ್ರತ್ಯದ ನೆಲೆಬೆಲೆಯನ್ನು ಕುರಿತು ಯಥಾಶಕ್ತಿಯಾಗಿ ಸಹಾಯಮಾಡಬಲ್ಲುದು. ಈಕೆಯ ಗ್ರಂಥ ಓದಲು ಸುಲಭವಾಗಿದ್ದರೂ, ಮರೆಯಲು ಸುಲಭವಾಗಿಲ್ಲ

ಈ ಕಾವ್ಯ ನಮ್ಮ ನಾಡು ಮತ್ತು ನಾಡೊಡೆಯರಲ್ಲಿ ನಮಗೆ ಭಕ್ತಿ ಗೌರವಗಳನ್ನು ಹೆಚ್ಚಿಸಲು ತಕ್ಕದ್ದಾಗಿದೆ, ಹಾಗೆಯೇ ಪತಿವ್ರತೆಯರ ಕುಲವನ್ನೂ ಕನ್ನಡಿಗರ ಬಳಗವನ್ನೂ ಬೆಸೆಯಲು ಇದು ಸಮರ್ಥವಾಗಿದೆ ಹಿಂದಿನ ಕಾವ್ಯವಾಗಿದ್ದರೂ, ಇಂದಿನ ಮನೆಯಜಮಾನಿಯರಿಗೆ ನೆರವಾಗಬಲ್ಲ ಈ ಗ್ರಂಥ ಪ್ರಯೋಜನವುಳ್ಳದ್ದಾಗಿದೆ

## ೧೩. ಸ್ತ್ರೀಯರ ಬಗೆಗೆ ಕವಿಗಳ ಉಕ್ತಿಗಳು

ಈ ಪೀಠಿಕೆಯ ಕಡೆಯಲ್ಲಿ ಕೆಲವರು ಸಂಸ್ಕೃತ ಮತ್ತು ಕನ್ನಡ ಕವಿಗಳು ಮಹಿಳೆಯರ ವಿಷಯದಲ್ಲಿ ಆಡಿದ ಮಾತುಗಳನ್ನು ನೆನೆಯಬಹುದಾಗಿದೆ

ಆದಿಕಾವ್ಯವಾದ ರಾಮಾಯಣದ ಉತ್ತರ ಕಾಂಡ, ಸೀತಾ ಪರಿತ್ಯಾಗದ ಹೃದಯದ್ರಾವಕ ಸನ್ನಿವೇಶ; ಪೂಜ್ಯರಾದ ವಾಲ್ಮೀಕಿ

ಮಹರ್ಷಿಗಳು ಲೋಕಮಾತೆಯಾದ ಸೀತಾದೇವಿಯ ಮುಖದಿಂದ ಈ ಮಾತುಗಳನ್ನಾಡಿಸಿದ್ದಾರೆ·

ಮಾಮಿಕೇಯಂ ತನುರ್ನೂನಂ ಸೃಷ್ಟಾ ದುಃಖಾಯ ಲಕ್ಷ್ಮಣ
ಧಾತ್ರಾಯಸ್ಯಾಸ್ತಥಾಮೇಽದ್ಯ ದುಃಖಮೂರ್ತಿಃ ಪ್ರದೃಶ್ಯತೇ

ಲಕ್ಷ್ಮಣ ! ಬ್ರಹ್ಮ ದುಃಖಕ್ಕಾಗಿಯೇ ನನ್ನ ಈ ಒಡಲನ್ನು ರಚಿಸಿದ, ಇದು ನಿಶ್ಚಯ ಪ್ರಕೃತ ಅದು ನನಗೆ ಸಾಕಾರ ಸಂಕಟದ ಹಾಗೆ ಕಾಣುತ್ತಲಿದೆ

ಪೂಜ್ಯರಾದ ವ್ಯಾಸಮಹರ್ಷಿಗಳು ಮಹಾಭಾರತದ ವನ ಪರ್ವದಲ್ಲಿ ನಳೋಪಾಖ್ಯಾನವನ್ನು ವಿವರಿಸುವಾಗ ವಿಷಮಪರಿಸ್ಥಿತಿ ಯನ್ನು ಚಿತ್ರಿಸಿದ್ದಾರೆ ನಿಷಧಾಧಿಪತಿಯಾದ ನಳಮಹಾರಾಜ ಜೂಜಾಟದಲ್ಲಿ ತಮ್ಮನಾದ ಪುಷ್ಕರನಿಗೆ ಸರ್ವಸ್ವವನ್ನೂ ಸೋತು ಪತ್ನಿಯಾದ ದಮಯಂತಿಯೊಡನೆ ಅರಣ್ಯಕ್ಕೆ ಬಂದಿದ್ದಾನೆ. ಹೆಂಡತಿ ಆಕೆಯ ತಂದೆಯೂ ವಿದರ್ಭದೇಶದ ದೊರೆಯೂ ಆದ ಭೀಮಮಹಾರಾಜನಲ್ಲಿ ಹೋಗಲೆಂದು ಆತನ ಇಷ್ಟ ಪತಿ ಪ್ರಾಣಳಾದ ದಮಯಂತಿ ಈ ಸೂಚನೆಗೆ ಒಪ್ಪುವುದಿಲ್ಲ ಆಗ ಪತ್ನಿ ಎಂಥ ಅಮೂಲ್ಯ ಪದಾರ್ಥ, ಪತಿಗೆ ಎಂಥ ಹತ್ತಿರದ ಹಿತೈಷಿಯೆಂಬುದನ್ನು ನಳನು ಹೇಳುತ್ತಾನೆ

ನಾಸ್ತಿ ಭಾರ್ಯಾಸಮಂ ಮಿತ್ರಂ ನರಸ್ಯಾರ್ತಸ್ಯ ಭೇಷಜಮ್

ದೈನ್ಯಹೊಂದಿದ ಮನುಷ್ಯನಿಗೆ ಹೆಂಡತಿಗೆ ಸಮನಾದ ಸ್ನೇಹಿತನೂ, ಉಪಾಯವೂ ಬೇರೆ ಯಾವುದೂ ಇಲ್ಲ

ಧರ್ಮಶಾಸ್ತ್ರಕಾರನಾದರೂ ಸಹಜ ಕವಿಯೂ, ಸ್ತ್ರೀ ಹೃದ ಯದ ಕೋಮಲತೆಯನ್ನು ಅರಿತವನೂ ಆದ ಮನುಮಹರ್ಷಿ ತನ್ನ ಕಾಲದ ಜನದ ಎರಡು ಬಗೆಯ ಅಭಿಪ್ರಾಯಗಳನ್ನು ಈ ಶ್ಲೋಕಗಳಲ್ಲಿ ವ್ಯಕ್ತಪಡಿಸಿದ್ದಾನೆಂದು ತೋರುತ್ತದೆ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ

ಎಲ್ಲಿ ಸ್ತ್ರೀಯರು ಗೌರವಿಸಲ್ಪಡುವರೋ, ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ

ನ ಸ್ತ್ರೀ ಸ್ವಾತಂತ್ರ್ಯಮರ್ಹತಿ

ಯಾವ ಸ್ತ್ರೀಯೂ ಸ್ವಾತಂತ್ರ್ಯ ಹೊಂದಲು ಅರ್ಹಳಲ್ಲ

ಸ್ತ್ರೀಯರ ವಿಚಾರವಾಗಿ ರೂಢಿಯಲ್ಲಿದ್ದ ಅಂದಿನ ಸಮಾಜದ ಈ ಭಿನ್ನಾಭಿಪ್ರಾಯಗಳು ಮುಂದಿನ ಕವಿಗಳ ಮನದಲ್ಲಿ ನೆಲೆಗೊಂಡಿರಬಹುದು, ಅವರ ಕೃತಿಗಳಲ್ಲಿ ಗೋಚರಿಸಿರಬಹುದು ಕಾಲಕ್ರಮದಲ್ಲಿ ಸ್ತ್ರೀ ಅಪ್ರಬುದ್ಧಳು, ಅಳುಗೋಳಿನ ವ್ಯಕ್ತಿ ಎಂಬ ಯೋಚನೆ ದೃಢಪಟ್ಟಿರಬಹುದು

ಕವಿಕುಲಗುರುವಾದ ಕಾಳಿದಾಸ ತನ್ನ ಉದಾತ್ತಸುಂದರ ಕಾವ್ಯನಾಟಕಗಳಲ್ಲಿ ಸ್ತ್ರೀಯರ ಸಂಬಂಧವಾಗಿ ಎರಡು ರೀತಿಯ ಯೋಚನೆಗಳನ್ನೂ ಕಾಣಿಸಿದ್ದಾನೆ

'ಕುಮಾರ ಸಂಭವ' ಕಾವ್ಯದಲ್ಲಿ ಪಾರ್ವತೀಪರಮೇಶ್ವರರ ವಿವಾಹ ಸಮಯ ಬರುತ್ತದೆ. ತಪಸ್ಸಿನಿಂದ ಮಹಿಮಾಶಾಲಿಗಳಾದ ಈ ಅನ್ಯಾದೃಶ ವಧೂವರರ ಲಗ್ನವನ್ನು ಗೊತ್ತುಮಾಡಲು, ಸಪ್ತರ್ಷಿಗಳೂ, ಅರುಂಧತೀದೇವಿಯೂ ಹಿಮಾಲಯ ರಾಜನ ನಗರಕ್ಕೆ ಬರುತ್ತಾರೆ ಅರಮನೆಯಲ್ಲಿ ಮಹಾರಾಜನಿಂದ ಸತ್ಕಾರ ಹೊಂದುತ್ತಾರೆ ಆಮೇಲೆ, ಅರಸನು ಅವರಿಗೆ ಸತಿಸುತೆಯರ ಗುರುತನ್ನು ಮಾಡಿಕೊಡುತ್ತಾನೆ ತಂದೆಯ ಕನ್ಯಾವಾತ್ಸಲ್ಯ, ಕವಿಗೆ ಸ್ತ್ರೀತ್ವದ ವಿಷಯವಾಗಿ ಇರುವ ಅಪಾರಗೌರವ ಈ ಶ್ಲೋಕಾರ್ಧದಲ್ಲಿ ಹೊರಸೂಸುತ್ತದೆ.

ಏತೇ ವಯಮಮೀ ದಾರಾಃ
ಕನ್ಯೇಯಂ ಕುಲಜೀವಿತಮ್

ಸ್ವಯಂ ನಾವು, ಇಲ್ಲಿ ನನ್ನ ಪತ್ನಿ, ಈಕೆ ನನ್ನ ಮಗಳು—ನನ್ನ ಸಂಸಾರದ ಪ್ರಾಣ.

'ಅಭಿಜ್ಞಾನ ಶಾಕುಂತಲ'ದ ನಾಲ್ಕನೆಯ ಅಂಕದ ಇಪ್ಪತ್ತೆರಡನೆಯ ಶ್ಲೋಕ, ಕಣ್ವಋಷಿಗಳ ನಿಶ್ಚಿಂತ ಮನೋಭಾವವನ್ನು ತಿಳಿಸುತ್ತದೆ, ಶಕುಂತಳೆಯನ್ನು ಅತ್ತೆಯಮನೆಗೆ ಕಳುಹಿಸಿ ಮುನಿಶ್ರೇಷ್ಠರು ನೆಮ್ಮದಿಯನ್ನು ಹೊಂದಿದ್ದಾರೆ 'ಅರ್ಥೋ ಹಿ ಕನ್ಯಾ ಪರಕೀಯ ಏವ' ಎನ್ನುತ್ತಾರೆ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂದ ಹಾಗೆ

ಕನ್ನಡ ಕವಿಗಳಿಗೆ ಮಾರ್ಗದರ್ಶಕನಾದ ನಾಡೋಜ ಪಂಪನ(೯೪೧) ಸುಂದರ ಗಂಭೀರ ಕಾವ್ಯವಾದ 'ವಿಕ್ರಮಾರ್ಜುನ ವಿಜಯ'ದಲ್ಲಿ ಮನಕರಗಿಸುವ ಒಂದು ಸನ್ನಿವೇಶ ಬರುತ್ತದೆ ಪಾಂಡವರು ಅರಗಿನ ಮನೆಯಿಂದ ತಾಯಿ ಕುಂತಿಯೊಡನೆ ಪಾರಾಗಿ, ಏಕಚಕ್ರನಗರಕ್ಕೆ ಬಂದು ಬದುಕುತ್ತಿದ್ದ ಕಾಲ, ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇಳಿದಿದ್ದಾರೆ ಆ ಊರಿಗೆ ಹೆಮ್ಮಾರಿಯಾದ ಬಕಾಸುರನ ಉಪಟಳದ ಬಿಸಿ ಈ ಬ್ರಾಹ್ಮಣ ಕುಟುಂಬಕ್ಕೆ ಸೋಕಿರುತ್ತದೆ ಇರುವ ನಾಲ್ವರಲ್ಲಿ, ಗಂಡ ಹೆಂಡಿರು, ಮಗ, ಮಗಳು, ಯಾರಾದರೊಬ್ಬರು ರಕ್ಕಸನಿಗೆ ತುತ್ತಾಗಿಯೇ ತೀರಬೇಕು, ವಿಷಮವೇಳೆ, ಬಗೆಹರಿಯದೆ ಅವರು ದೈನ್ಯಾಲಾಪಮಾಡುವುದನ್ನು ಕೇಳಿ ಕುಂತಿ ಬಂದು ಸಮಾಚಾರವೇನೆಂದು ಪ್ರಶ್ನಿಸುತ್ತಾಳೆ ಮನೆಯ ಯಜಮಾನ ಉತ್ತರ ಕೊಡುತ್ತಾನೆ ಹೆಂಡತಿ ಮಕ್ಕಳನ್ನು ಸಾಕಲು ಬೇಕು, ವಂಶವನ್ನು ಉಳಿಸಿ, ಪಿತೃಗಳಿಗೆ ತಿಲತರ್ಪಣ ಕೊಡಲು ಮಗ ಬೇಕು 'ಮಗಳನೀವೆನಪ್ಪೊಡೆ ಕೊಡಗೂಸೆಂಬುದು ಪೆಱರೊಡವೆ' ಆದ್ದರಿಂದ ನಾನೇ ರಾಕ್ಷಸನಿಗೆ ಬಲಿಯಾಗುತ್ತೇನೆ

ಬಸವಯುಗದ ಮುಖ್ಯವಚನಕಾರರು ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವ, ಸಿದ್ಧರಾಮ, ಮಡಿವಳ ಮಾಚಯ್ಯ, ಈ ಮಹನೀಯರು ಅನೇಕ ಭಕ್ತರೊಡನೆ ಶಿವಾನುಭವ ಮಂಟಪದಲ್ಲಿ ಮಂಡಿಸಿರುವಾಗ 'ಗುರುವನರಸುವೆನೆಂದು' ತೊಳಲಿ, ಬಳಲಿ ಮಹದೇವಿ ಅಲ್ಲಿಗೆ ಬಂದಳು ಅಕ್ಕನವರ ಭಕ್ತಿ ವರ್ಚಸ್ಸಿಗೆ

ಸಾಧುಗಳು ಬೆರಗಾದರು ಚಾಮರಸನ (೧೪೩೦) 'ಪ್ರಭುಲಿಂಗ ಲೀಲೆ'ಯಲ್ಲಿಯ ಆ ಸನ್ನಿವೇಶದ ಒಂದು ಪದ್ಯ ಗಮನಾರ್ಹ ವಾಗಿದೆ ·

ಲೋಕದೊಳು ಸತಿಜನ್ಮವನು ತಾ
ಸ್ವೀಕರಿಸಿ ತನುಲೋಭ ಮೋಹವ
ನೂಕಿ ನಿಸ್ಪೃಹೆಯಾಗಿ ನಿಲುವವರಾರು ಧಾತ್ರಿಯಲಿ
ಈಕೆಗಾರೆಣೆ ಶಿವಶಿವಾ ಎನು
ತಾಕೆಯನು ಬಸವಣ್ಣ ಮುಖ್ಯರ
ನೇಕ ಪರಿಯಲಿ ಹೊಗಳುತಿರ್ದರು ಶರಣು ಶರಣೆನುತ

'ಭರತೇಶ ವೈಭವ'ವನ್ನು ರಚಿಸಿದ ರತ್ನಾಕರವರ್ಣಿ ತನ್ನ ಕಾವ್ಯ ನಾಯಕನಾದ ಭರತಚಕ್ರೇಶ ಹೆಣ್ಣುಮಕ್ಕಳ ಮದುವೆ ಮಾಡಿ ಅವರನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸನ್ನಿವೇಶವನ್ನು ಚಿತ್ರಿಸಿದ್ದಾನೆ ರಾಣಿಯರು ಕಣ್ಣೀರು ಸುರಿಸುತ್ತ ಮಕ್ಕಳನ್ನು ಹೋಗಗೊಡುತ್ತಿದ್ದಾರೆ, ಮಕ್ಕಳ ಅಗಲಿಕೆಯ ದುಃಖದಿಂದ ತಂದೆ ಯಾದ ಚಕ್ರವರ್ತಿಯ 'ಎದೆ ಹಣ್ಣಾಯ್ತು'

ಆ ಕುವರಿಯರೊತ್ತಿನೊಳಗೆ ಕಂಬನಿದಾಳ್ದ
ವ್ಯಾಕುಲ ಸತಿಯರ ನೋಡಿ
ಏಕೆ ಪೆಣ್ಬಡೆದಿರೌ ಗಂಡುವಡೆಯದೆಂದು
ಭೂಕಾಂತ ಮರುಕದೊಳ್ ನುಡಿದ

ಹೊನ್ನಮ್ಮನ ಸಮಕಾಲಿಕನಾದ ಪದ್ಮನಾಭ (೧೬೮೦) 'ಪದ್ಮಾವತೀ ಚರಿತೆ'ಯಲ್ಲಿ ಹೇಳುವ ಮಾತುಗಳು ಎಂದೂ ಮರೆಯು ದಂಥವು :

ಹೆಣ್ಣುಮಕ್ಕಳ ಹೆತ್ತು ಹೆರರ ಬಾಳಿಗೆ ಕೊಟ್ಟು
ಕಣ್ಣೀರಿಕ್ಕುತ ಮನದಿ
ಉಣ್ಣರೊ ಉಡರೊ ಎನುತ ಚಿಂತಿಸುತಿಹ
ಹೆಣ್ಣಿಂದ ಫಲವುಂಟೆ ನಮಗೆ

ಜನಪ್ರಿಯ ಕವಿಗಳಾದ ಸರ್ವಜ್ಞ (೧೭೦೦) ಲಕ್ಷ್ಮೀಶರ (೧೭೦೦) ಕಾಲಕ್ಕೆ ಬಂದರೆ ಸ್ತ್ರೀ ವಿಷಯಕವಾಗಿ ಒಂದು ತರದ ಅಭಿಪ್ರಾಯ ಜನಮನದಲ್ಲಿ ಖಚಿತವಾಗಿ ಮನೆಮಾಡಿಕೊಂಡಂತೆ ಕಾಣುತ್ತದೆ. ಮೊದಲ ಕವಿ ಸ್ತ್ರೀ ಘಾತಕಬುದ್ಧಿಯ ಚಂಚಲೆ ಎಂದರೆ, ಎರಡನೆಯವನು ಹೆಣ್ಣಿನ ಬಾಳು ಗೌರವಾರ್ಹವಾದರೂ ದುಃಖದ್ದು, ಕಷ್ಟದ್ದು ಎಂಬ ಅಂಶವನ್ನು ಸೂಚಿಸುತ್ತಾನೆ.

ನಂಬಿದಂತಿರಬೇಕು ನಂಬದಲೆ ಇರಬೇಕು
ಇಂಬರಿದು ಎಚ್ಚರಿರಬೇಕು ಹೆಣ್ಣನು
ನಂಬಿದವ ಕೆಟ್ಟ ಸರ್ವಜ್ಞ

ಸತ್ವಮೂರ್ತಿಯಾದ ಸೀತಾದೇವಿ, ಸದಾ ವನವಾಸಿನಿ, ದುಃಖಿನಿ. ಪತಿವ್ರತೆಯರಲ್ಲಿ ಪತಿವ್ರತೆ, ಜನರ ಹೊಲ್ಲದ ಅನುಮಾನಕ್ಕೆ ಗುರಿಯಾಗಿ ರಾಮನಿಂದ ಪರಿತ್ಯಕ್ತಳಾಗುತ್ತಾಳೆ ಲಕ್ಷ್ಮಣನೊಡನೆ ಅರಣ್ಯಕ್ಕೆ ಬರುತ್ತಾಳೆ ಆಕೆಗೆ ಏನೊ ಆತಂಕ, ಏನೊ ಕಳವಳ. ನಿಜವಾದ ಸುದ್ದಿ ತಿಳಿದು 'ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ' ಮುರಿದು ನೆಲಕ್ಕೆ ಒರಗುವಂತೆ ಮೂರ್ಛೆಹೊಂದಿ, ಎಚ್ಚತ್ತು, ಹಮ್ಮೈಸಿ ಹಲುಬುತ್ತಾಳೆ, ಹೆಣ್ಣು ಜನ್ಮ ಪಾಪದ ಫಲವೆಂದು ವಿಚಾರಮಾಡುತ್ತಾಳೆ

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರವುದೆನ್ನೊಳಪರಾಧಮುಂಟು

ಆದುದರಿಂದ ಈ ಪಾಡು ಅನುಭವಿಸುತ್ತಿರುವೆನೆಂದು ಶೋಕಿಸುತ್ತಾಳೆ. ಹೆಂಗಸು ಹೀಗೆ ಭಾವಿಸುವುದು ಯಾರ ಪಾಪ?

## ೧೪. ಗ್ರಂಥ ಪಾಠ

'ಹದಿಬದೆಯ ಧರ್ಮ'ದ ಪಾಠವನ್ನು ನಾಲ್ಕು ಪ್ರತಿಗಳ ಆಧಾರದಿಂದ ಗೊತ್ತುಮಾಡಿದೆ. ಇವುಗಳಲ್ಲಿ ಎರಡು ಓಲೆ

ಗರಿಯವು, ಒಂದು ಕೈಬರಹದ್ದು, ಒಂದು ಮುದ್ರಿತವಾದದ್ದು. ಮೈಸೂರು ಸರಕಾರದ ಓರಿಯೆಂಟಲ್ ಲೈಬ್ರರಿಯ ಓಲೆಯ ಪ್ರತಿಯನ್ನು 'ಕ' ಎಂದು ಕರೆದಿದೆ ಇದೇ ಶುದ್ಧಪಾಠವುಳ್ಳದ್ದೆಂದು ಬರಹದ ಸ್ಪಷ್ಟತೆ, ಸಮರ್ಪಕತೆಗಳಿಂದ ತೋರಿಬರುತ್ತದೆ. ಕೈಬರಹದ ಪ್ರತಿಗೂ, ಓಲೆಯದಕ್ಕೂ ವ್ಯತ್ಯಾಸಗಳೇನೂ ಕಂಡು ಬಾರದುದರಿಂದ ಅದನ್ನು ಇಲ್ಲಿ ಸೂಚಿಸಿಲ್ಲ 'ಕ' (ಮೈಸೂರು ಓ ಪ್ರ ೧೩೦ ಹದಿಬದೆಯ ಧರ್ಮ ಕ ೭೫-೧೨೪) ಇದರಲ್ಲಿ ಗ್ರಂಥದ ಹೆಸರು **ಸ್ತ್ರೀಧರ್ಮ ಸಾಂಗತ್ಯಂ** ಎಂದಿದೆ ಕಾವ್ಯ ಪ್ರಾರಂಭವಾಗುವುದು ಹೀಗೆ.

ಶ್ರೀಮತೇ ರಾಮಾನುಜಾಯನಮಃ
ಶ್ರೀ ಶ್ರೀಧರಾಯನಮಃ
ಶ್ರೀಮತೇ ನಾರಾಯಣಾಯನಮಃ
ಶ್ರೀ ಶೈಲಾರ್ಯಗುರವೇನಮಃ
ಶ್ರೀ ಶಿಂಗಲಾರ್ಯಗುರವೇನಮಃ
ಸ್ತ್ರೀಧರ್ಮ ಸಂಗತ್ಯ ॥ ಶ್ರೀ ಶ್ರೀ ಶ್ರೀ

ಕಾವ್ಯದ ಕಡೆಯಲ್ಲಿ,

ಶ್ರೀಮತೇ ರಾಮಾನುಜಾಯನಮಃ
ಶ್ರೀ ಶ್ರೀಮದ್ ವೇಲಾಪುರೀ ಸೌಮ್ಯ ಕೇಶವಾಯನಮಃ
ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾ

ಇಲ್ಲಿ ಅಕ್ಷರ ಮುಗಿದುಹೋಗಿದೆ

ಮದ್ರಾಸು ಸರಕಾರದ ಓರಿಯೆಂಟಲ್ ಲೈಬ್ರರಿಯ ಓಲೆಗರಿಯ ಪ್ರತಿ (೧೮-೪-೧೦ ಪ್ರತಿವ್ರತಾಸ್ತ್ರೀಧರ್ಮಸಾರ) ಇದನ್ನು 'ಖ' ಎಂದಿದೆ ಕಾವ್ಯದ ಮೊದಲು ಹೀಗಿದೆ.

ಶ್ರೀಮತೇ ರಾಮಾನುಜಾಯನಮಃ

ಗ್ರಂಥದ ಕೊನೆಯಲ್ಲಿ 'ಸಂಪೂರ್ಣಂ' ಎಂದಿದೆ

ಮ ಆ ರಾಮಾನುಜಯ್ಯಂಗಾರ್ ಅವರು ೧೮೭೩ರಲ್ಲಿ ಪರಿಷ್ಕರಿಸಿ ಮುದ್ರಿಸಿದ ಪ್ರತಿಯನ್ನು 'ಗ' ಎಂದಿದೆ ಎಲ್ಲ ಪ್ರತಿಗಳು ಒಂಬತ್ತು ಸಂಧಿಯುಳ್ಳುವಾಗಿವೆ

ಱ ೞ ಕುಳದ ಉಪಯೋಗ ಹೊನ್ನಮ್ಮನ ಕಾಲಕ್ಕೆ ವಿರಳವಾಗುತ್ತಿತ್ತು ಎನ್ನಲು ಓಲೆಗರಿಯ ಪ್ರತಿಗಳಲ್ಲಿ ಇವು ಕೆಲವು ಕಡೆ ಮಾತ್ರ ಬಂದಿರುವುದು ಸೂಚನೆ ಹೆಣ್ಣುಮಕ್ಕಳು ಈ ಗ್ರಂಥವನ್ನು ಹೆಚ್ಚುಹೆಚ್ಚಾಗಿ ಓದಲೆಂದು ಇದು ಪುನರ್ಮುದ್ರಿತವಾಗುತ್ತಿರುವುದರಿಂದ, ಇಲ್ಲಿ ಱ ೞದ ತೊಡಕಿಗೆ ಹೋಗಿಲ್ಲ

ಅಭಿಪ್ರಾಯದ ಸುಲಭತೆಗಾಗಿ ಅಷ್ಟು ಪರಿಚಯವಿಲ್ಲದ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಕೊಟ್ಟಿದೆ

## ೧೫. ಕೃತಜ್ಞತೆ

ಈ ಗ್ರಂಥದ ಪಾಠವನ್ನು ಗೊತ್ತುಮಾಡುವಾಗ, ಪೀಠಿಕೆ ಶಬ್ದಕೋಶಾದಿಗಳನ್ನು ಸಿದ್ಧಪಡಿಸುವಾಗ, ಇದರ ಮುದ್ರಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳಲ್ಲಿ ಮೊದಲಿನಿಂದ ಕೊನೆಯವರೆಗೂ ಉಚಿತವಾದ ಅನೇಕ ಸಲಹೆಗಳನ್ನು ಕೊಟ್ಟು, ಅಚ್ಚಿನ ಕರಡು ಪ್ರತಿಗಳನ್ನು ವಿಶ್ವಾಸದಿಂದ ತಿದ್ದಿ ನನಗೆ ವಿಶೇಷ ಉಪಕಾರ ಮಾಡಿದ್ದಕ್ಕಾಗಿ ಮಾನ್ಯರಾಗಿಯೂ, ನನ್ನ ವಿದ್ಯಾಗುರುಗಳಾಗಿಯೂ ಇರುವ ರಾಜಸೇವಾಸಕ್ತ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯ, ಎಂ ಎ , ಬಿ ಎಲ್ ಅವರಿಗೆ ನನ್ನ ಭಕ್ತಿಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ

ಈ ಕಾವ್ಯದ ಟಿಪ್ಪಣಿಯನ್ನು ನೋಡಿ, ವಿಮರ್ಶಿಸಿ, ಸರಿಯಾಗಿದೆಯೆಂದು ತಿಳಿಸಿ ನನಗೆ ತುಂಬ ಉಪಕಾರಮಾಡಿದ್ದಕ್ಕಾಗಿ ಆಸ್ಥಾನ ವಿದ್ವಾನ್ ಶ್ರೀಮಾನ್ ತಿರುವಳ್ಳೂರ್ ಶ್ರೀನಿವಾಸ ರಾಘವಾಚಾರ್ ಅವರಿಗೆ ನಾನು ಆದರಪೂರ್ವಕ ನಮಸ್ಕಾರಗಳನ್ನು ಒಪ್ಪಿಸುತ್ತೇನೆ.

ಈ ಸಂಪಾದನ ಕೆಲಸಕ್ಕೆ ಬೇಕಾದ 'ಹದಿಬದೆಯ ಧರ್ಮ'ದ ಓಲೆಗರಿ ಪ್ರತಿ, ಕೈಬರಹದ ಪ್ರತಿಗಳನ್ನು ನನಗೆ ಓದಿಕೊಳ್ಳಲು ಕೊಟ್ಟು, ಇತರ ಓಲೆಗರಿಯ ಪುಸ್ತಕಗಳನ್ನು ಉಪಯೋಗಿಸಿ ಕೊಳ್ಳಲು ಕೊಟ್ಟದ್ದಕ್ಕಾಗಿ ಮೈಸೂರು ಸರಕಾರದ ಓರಿಯೆಂಟಲ್ ಲೈಬ್ರರಿಯ ಅಧಿಕಾರಿಗಳಾಗಿರುವ ಶ್ರೀಮಾನ್ ಎಂ. ಎಸ್. ಬಸವಲಿಂಗಯ್ಯ, ಎಂ ಎ, ಬಿ ಎಲ್ ಅವರಿಗೆ ನನ್ನ ಕೃತಜ್ಞತೆಗಳು.

'ಹದಿಬದೆಯ ಧರ್ಮ'ದ ಪಾರ ಗೊತ್ತುಮಾಡುವಾಗ ಮದ್ರಾಸು ಸರಕಾರದ ಓರಿಯೆಂಟಲ್ ಲೈಬ್ರರಿಯಿಂದ ಓಲೆಗರಿಯ ಪ್ರತಿಯನ್ನು ತರಿಸಿಕೊಟ್ಟು, ಇತರ ಆವಶ್ಯಕ ಗ್ರಂಥಗಳನ್ನು ಎರವಲಾಗಿ ಕೊಟ್ಟು, ಬರವಣಿಗೆಯ ಸಂದರ್ಭದಲ್ಲಿ ಹಲವು ಉತ್ತಮ ಸೂಚನೆಗಳನ್ನು ಕೊಟ್ಟು ನನ್ನನ್ನು ವಿಶೇಷ ಋಣಿ ಯನ್ನಾಗಿ ಮಾಡಿದ ಮೈಸೂರು ವಿಶ್ವವಿದ್ಯಾನಿಲಯದ ಲೈಬ್ರರಿಯ ಮುಖ್ಯಾಧಿಕಾರಿಗಳಾದ ಡಾ|| ಎ ಎನ್. ನರಸಿಂಹಯ್ಯ, ಎಂ ಎ, ಎಲ್ ಟಿ, ಪಿಎಚ್ ಡಿ ಅವರಿಗೆ ನನ್ನ ಗೌರವಪೂರ್ವಕ ಪ್ರಣಾಮಗಳು

ಈ ಕಾವ್ಯದ ಮುದ್ರಣಕಾರ್ಯವನ್ನೆಲ್ಲ ಶೀಘ್ರವಾಗಿಯೂ ತೃಪ್ತಿಕರವಾಗಿಯೂ ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟದ ಅಧಿಕಾರಿಗಳಿಗೆ ನನ್ನ ಹೆಚ್ಚಿನ ಕೃತಜ್ಞತೆಗಳು ಸಲ್ಲುತ್ತವೆ

ಬೆಂಗಳೂರು
೨೦-೧೦-೧೯೪೦

**ಡಿ. ಚಂಪಾಬಾಯಿ**

# ಅನುಬಂಧ

'ಉತ್ತರರಾಮ ಚರಿತೆ', 'ಶಾಕುಂತಲ', 'ಮನುಸ್ಮೃತಿ', 'ಶ್ರೀಭಾಗವತ'—ಈ ಗ್ರಂಥಗಳ ಶ್ಲೋಕಗಳು ಮತ್ತು ಅವುಗಳನ್ನು ಹೋಲುವ 'ಹದಿಬದೆಯ ಧರ್ಮ'ದ ಪದ್ಯಗಳು

## ತಿದ್ದುಪಡಿ

| ಪುಟ | ಪದ್ಯ | ಸಾಲು | ತಪ್ಪು | ಒಪ್ಪು |
|---|---|---|---|---|
| ೪೭ | ೧ | ೨ | ಅಮರ್ಕ್ಕುಂರತಚ್ಚರಿವಡೆಯೆ | ಅಮರರ್ಕ್ಕುಂತಚ್ಚರಿವಡೆಯೆ |
| ೭೮ | ೪೫ | ೩ | ಘುಳ್ಳಲನುಗುವ | ಘುಳ್ಳಿಲನುಗುವ |

**ಹದಿಬದೆಯ ಧರ್ಮ–**

ಪೊಸಪೂವ ಸರಗೈದು ಮುಡಿಯದೆ ನಲುಗಿಸಿ
ರಸದೆಗೆವೆಸಕವೆನಿಪುದು (೬, ೨೪)

ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಂಡುರೆ
ತನ್ನ ಕುಂದಿನೊಳು ಕುಂದುವಳ (೬, ೪೪)

ಮನದೊಳು ಮನ ನೆನಹಿನೊಳು ನೆನಹು ಮತ್ತೆ
ತನು ತನುವಿನೊಳೊಡವೆರಸಿ
ಅನುಗೊಳೆ ಪಾಲು ನೀರುಗಳಂತಿನಿಯನು
ಮಿನಿಯಳುಮೇಕವೆನಿಪುದು (೬, ೪೭)

**ಹದಿಬದೆಯ ಧರ್ಮ–**

ಅತ್ತೆಮಾವಂದಿರಿಗಳುಕಿಯಕ್ಕರುಗೂಡಿ
ಚಿತ್ತವರಿತು ಸೇವೆಯೆಸಗು (೫, ೪೦)

ಸವತಿಯರೊಳು ಸಂಗಾತಿವೆಂಗಳವೊಲು
ನೆವಮಿಲ್ಲದ ನೇಹವೆರಸು (೫, ೪೧)

ಕಂದ ಕೇಳಿನಿಯನು ಕನಲಿ ಕಾಡಿದೊಡದ
ರಿಂದ ನೀನಳವಳಿಯದಿರು (೫, ೩೫)

ಪೇರೈಸಿರಿಯಿಂದ ಪಿಗ್ಗಿ ಬೆರೆತು ನಿನ್ನ
ಮೇರೆ ತಾರೆಯ ಮೀರದಿರು
ಸೇರಿಯೂಳಿಗವೆಸಗುವ ಸೇವಕರನು
ಸೈರಣೆಗೊಂಡು ಸಂತವಿಸು (೫, ೪೩)

**– ಉತ್ತರ ರಾಮಚರಿತ**

ನೈಸರ್ಗಿಕೀ ಸುರಭಿಣಃ ಕುಸುಮಸ್ಯ ಸಿದ್ಧಾ
ಮೂರ್ಧ್ನಿ ಸ್ಥಿತಿರ್ನ ಚರಣೈರವತಾಡನಾನಿ

(ಅಂಕ ೧, ಶ್ಲೋಕ ೧೪)

ಅದ್ವೈತಂ ಸುಖದುಃಖಯೋರನುಗುಣಂ
ಸರ್ವಾಸ್ವವಸ್ಥಾಸು ಯತ್

(ಅಂಕ ೧, ಶ್ಲೋಕ ೩೯)

**– ಶಾಕುಂತಲ**

ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀವೃತ್ತಿಂ ಸಪತ್ನೀಜನೇ
ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾಸ್ಮ ಪ್ರತೀಪಂಗಮಃ
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ

(ಅಂಕ ೪, ಶ್ಲೋಕ ೧೮)

**ಹದಿಬದೆಯ ಧರ್ಮ –**

ವ್ರತಹೋಮ ನಿಯಮೋಪವಾಸದಾನಂಗಳಿಂ
ದತಿಶಯವಡೆದ ಧರ್ಮಗಳು
ಪತಿಶುಶ್ರೂಷೆಗೆ ಪಡಿಯಲ್ಲೆಂದಿದ
ರತಿಶಯವರಿತಾಚರಿಪುದು (೩, ೬)

ಇಷ್ಟದೇವತೆಯಿವನೆಂದು ಪತಿಯೊಳು ವಿ
ಶಿಷ್ಟಭಾವವ ಬಗೆಗೊಳಿಸಿ (೩, ೧೮)

ತಡೆಯದೆಳಮೆಯೊಳು ತಂದೆತಾಯಿಗಳಿಗೆ
ನಡುವರೆಯದೊಳು ನಲ್ಲನಿಗೆ
ಕಡುಮುದುವಾದ ಕಾಲದೊಳು ತನ್ನಣುಗರಿ
ಗಡಕಮೆನಿಪುದಬಲೆಯರು (೪, ೪೭)

ಬರಿಸುವುದೊಂದೂರೊಳಿರ್ಪಳನುಪಚಾರ
ವೆರಸಿ ಪಾರಣೆ ಪರ್ವಗಳಿಗೆ (೫, ೨೯)

ಅಣ್ಣತಮ್ಮಂದಿರನಿಬರೊಡವುಟ್ಟಿದ
ಪೆಣ್ಣನು ಪೆರ್ಮೆಗೊಳಿಸಿ
ಬಣ್ಣ ಬಂಗಾರವ ಬಗೆಬಗೆಯಿಂದಿತ್ತು
ತಣ್ಣನೆ ತಣಿಸಿ ಬಾಳುವುದು (೫, ೪೬)

ಆಚಾರದಿಂದನುಪಮಧರ್ಮದೇಳಿಗೆ
ಆಚಾರದಿಂದಾಯುಷ್ಯ (೮, ೧೯)

ತನ್ನೊಡಲಿಗೆ ತನ್ನ ಮನವ ಕಾಪಿಡುವುದು
ತನ್ನ ಮನಕೆ ತನ್ನ ಮತಿಯ (೮, ೩೮)

**– ಮನುಸ್ಮೃತಿ**

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನ ವ್ರತಂ ನಾಪ್ಯುಪೋಷಿತಂ
ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹೀಯತೇ

(ಅಧ್ಯಾಯ ೫, ಶ್ಲೋಕ ೧೫೫)

ಉಪಚರ್ಯಃ ಸ್ತ್ರಿಯಾ ಸಾಧ್ವ್ಯಾ ಸತತಂ ದೇವವತ್ಪತಿಃ

(ಅ. ೫, ಶ್ಲೋಕ ೧೫೪)

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ
ರಕ್ಷಂತಿ ಸ್ಥಾವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ

(ಅ. ೯, ಶ್ಲೋಕ ೩)

ತಸ್ಮಾದೇತಾಃ ಸದಾ ಪೂಜ್ಯಾ ಭೂಷಣಾಚ್ಛಾದನಾಶನೈಃ
ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ

(ಅ. ೩, ಶ್ಲೋಕ ೫೯)

ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ
ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ

(ಅ. ೩, ಶ್ಲೋಕ ೫೫)

ಆಚಾರಾಲ್ಲಭತೇ ಹ್ಯಾಯುರಾಚಾರಾದೀಪ್ಸಿತಾಃ ಪ್ರಜಾಃ

(ಅ. ೪, ಶ್ಲೋಕ ೧೫೬)

ಆತ್ಮಾನಮಾತ್ಮನಾ ಯಾಸ್ತು ರಕ್ಷೇಯುಸ್ತಾಃ ಸುರಕ್ಷಿತಾಃ

(ಅ. ೯, ಶ್ಲೋಕ ೧೨)

**ಹದಿಬದೆಯ ಧರ್ಮ—**

ಸಾವಡಸಿದ ಸಮಯದೊಳು ಸದ್ಗತಿಗಾಗಿ
ಯಾವುದನೊಲಿದಾಲಿಪುದು
ಆವುದನೋದುವುದಾವುದನೊಡರಿಪು
ದಾವುದನಿರದೆ ನೆನೆವುದು (೯, ೨೮)

ಹರಿಕಥೆಗಳನೆ ಕೇಳುವುದು
ಹರಿನಾಮಂಗಳನೊಲಿದೋದುವುದು ಶ್ರೀ
ಹರಿಪದಂಗಳನೆ ನೆನೆವುದು (೯, ೩೦)

ಹರಿಪಾದಪದ್ಮದ ಸೇವೆಯಿಲ್ಲದೆ ಪಲ
ವರಿಸಮಿದ್ದೊಡೆ ಫಲವೇನು
ಮುರವೈರಿಯ ನೆನೆದೊಂದು ಮುಹೂರ್ತಕೆ
ಪರಗತಿ ಬಯಸಿದಂತಹುದು (೯, ೩೧)

ಅಂದು ಖಟ್ವಾಂಗನೆಂಬರಸು ತಾನಳಿವುದ
ಕೊಂದು ಮುಹೂರ್ತದೊಳರಿತು
ಕುಂದದೆ ಭಜಿಸಿ ಮುಕುಂದನ ಚರಣವ
ಸಂದನು ಪರಮಪದವಿಗೆ (೯, ೩೨)

ಏಳಿಲೆ ಭರತವಂಶಾಗ್ರಣಿ ಬೇಗದೊ
ಳೇಳು ಭಜಿಸು ಮಾಧವನ
ಏಳು ದಿವಸದಾಯುವಿರ್ಪುದು ನಿನಗಿ
ನ್ನಾಳೋಚನೆಯೇತಕಿದಕೆ (೯, ೩೩)

– ಶ್ರೀ ಭಾಗವತ

ಅತಃ ಪೃಚ್ಛಾಮಿ ಸಂಸಿದ್ಧಿಂ ಯೋಗಿನಾಂ ಪರಮಂ ಗುರುಮ್
ಪುರುಷಸ್ಯೇಹ ಯತ್ಕಾರ್ಯಂ ಮ್ರಿಯಮಾಣಸ್ಯ ಸರ್ವಥಾ
(ಸ್ಕಂಧ ೧, ಅ. ೧೯, ಶ್ಲೋಕ ೩೭)

ಯಚ್ಛ್ರೋತವ್ಯಮಥೋ ಜಾಪ್ಯಂ ಯತ್ಕರ್ತವ್ಯಂ ನೃಭಿಃ ಪ್ರಭೋ
ಸ್ಮರ್ತವ್ಯಂ ಭಜನೀಯಂ ವಾ ಬ್ರೂಹಿ ಯದ್ವಾ ವಿಪರ್ಯಯಮ್
(ಸ್ಕಂಧ ೧, ಅ. ೧೯, ಶ್ಲೋಕ ೩೮)

ತಸ್ಮಾದ್ಭಾರತ ! ಸರ್ವಾತ್ಮಾ ಭಗವಾನ್ ಹರಿರೀಶ್ವರಃ
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯಶ್ಚೇಚ್ಛತಾಽಭಯಮ್
(ಸ್ಕಂಧ ೨, ಅ. ೧, ಶ್ಲೋಕ ೫)

ಕಿಂ ಪ್ರಮತ್ತಸ್ಯ ಬಹುಭಿಃ ಪರೋಕ್ಷೈರ್ಹಾಯನೈರಿಹ
ವರಂ ಮುಹೂರ್ತಂ ವಿದಿತಂ ಘಟೇತ ಶ್ರೇಯಸೇ ಯತಃ
(ಸ್ಕಂಧ ೨, ಅ. ೧, ಶ್ಲೋಕ ೧೨)

ಖಟ್ವಾಂಗೋನಾಮ ರಾಜರ್ಷಿರ್ಜ್ಞಾತ್ವೇಯತ್ತಾಮಿಹಾಯುಷಃ
ಮುಹೂರ್ತಾತ್ಸರ್ವಮುತ್ಸೃಜ್ಯ ಗತವಾನಭಯಂ ಹರಿಮ್
(ಸ್ಕಂಧ ೨, ಅ. ೧, ಶ್ಲೋಕ ೧೩)

ತವಾಪ್ಯೇತರ್ಹಿ ಕೌರವ್ಯ ಸಪ್ತಾಹಂ ಜೀವಿತಾವಧಿಃ
ಉಪಕಲ್ಪಯ ತತ್ಸರ್ವಂ ತಾವದ್ಯತ್ಸಾಂಪರಾಯಿಕಮ್
(ಸ್ಕಂಧ ೨, ಅ. ೧, ಶ್ಲೋಕ ೧೫)

# ಸಂಧಿಪ್ರಕಾರ ವಿಷಯವಿವರಣೆ

**೧ನೆಯ ಸಂಧಿ – ಪೀಠಿಕಾಸಂಧಿ** **ಪುಟ ೧–೧೩**

ದೇವತಾಸ್ತುತಿ – ಕರ್ನಾಟಕ ದೇಶ – ಪಶ್ಚಿಮ ರಂಗನಾಥನ ವೈಭವ–ಮೇಲುಕೋಟೆ–ಯದುವಂಶದವರು ಕುಲದೇವರ ಸೇವೆಗೆಂದು ಇಲ್ಲಿಗೆ ಬಂದದ್ದು–ಮಹಿಶೂರು ಶೂರರ ನಾಡು – ಮೈಸೂರು ದೊರೆಗಳ ಚರಿತ್ರೆ–ಚಿಕದೇವರಾಜರು – ರಾಜಾಶೀರ್ವಾದ – ಅವರಿಗಿರುವ ದೈವಾನುಗ್ರಹ – ರಾಜರ ಪಟ್ಟದರಾಣಿ ಎಳವಂದೂರ ದೇವಮ್ಮ, ಗುಣವತಿ – ಕವಿಯ ವಿಚಾರ, ಆಕೆಯ ವಿದ್ವತ್ತು, ಸ್ವಾಮಿ ಭಕ್ತಿ – ಕಾವ್ಯದ ರೀತಿ ಆಶಯಗಳು–ಪತಿವ್ರತಾಧರ್ಮದ ಮಹಿಮೆ– ಈ ಸಂಧಿ ಪರಿಚಯಾತ್ಮಕ

**೨ನೆಯ ಸಂಧಿ** **ಪುಟ ೧೪–೨೪**

ಪತಿವ್ರತೆಯರ ಅಗ್ಗಳಿಕೆ–ಶ್ರೀಪತಿ ಭಕ್ತಿಗೆ ಮತಭೇದವಿದೆ, ಪತಿಭಕ್ತಿಗೆ ಇಲ್ಲ–ಪತಿವ್ರತೆ ಪಂಚಭೂತಗಳಿಗೂ ವಂದ್ಯಳು – ಸತ್ಕಾಲಕ್ಕೆ ಕಾರಣಳು – ಈಕೆಯಲ್ಲಿ ಪಿತೃಗಳು ಪ್ರಸನ್ನರು–ದೇವತೆಗಳು ಪ್ರೀತರು–ವೈದಿಕರು ಪತಿವ್ರತೆ ಮನುಷ್ಯದೇವತೆ ಎಂದು ಹೊಗಳುತ್ತಾರೆ – ಸತೀ ಧರ್ಮಕ್ಕೆ ಸರಿಯಾದ ಮಿಗಿಲಾದ ಧರ್ಮ ಬೇರೊಂದಿಲ್ಲ–ಪಾತಿವ್ರತ್ಯ ಸುಲಭ ತಪಸ್ಸು–ಪರಮಾರ್ಥ ದೊರಕಿಸಿಕೊಡುತ್ತದೆ – ಯತಿಧರ್ಮ, ಸತೀ ಧರ್ಮ – ಏಕಪತ್ನಿಯ ಕಥೆ – ಪತಿವ್ರತಾ ಮಹಾತ್ಮ್ಯೆ – ಸಾಧ್ವಿಯರ ದೃಷ್ಟಾಂತಗಳು

**೩ನೆಯ ಸಂಧಿ** **ಪುಟ ೨೫–೩೫**

ಸತಿ ಪತಿಯನ್ನು ಶುಶ್ರೂಷೆಮಾಡುವ ಬಗೆಗಳು – ಪತಿಯನ್ನು ಏಕೋಭಾವದಿಂದ ಗುರುವೆಂದು,

ದೇವರೆಂದು, ಗತಿಯೆಂದು ಉಪಚರಿಸಬೇಕು–ದೇವ ಪೂಜೆ, ಪತಿಪೂಜೆ ಒಂದೆ– ಮನಃಪೂರ್ವಕವಾಗಿ, ಪ್ರೇಮಪೂರ್ವಕವಾಗಿ ಪತಿಯನ್ನು ಆರಾಧಿಸಬೇಕು– ಔಚಿತ್ಯದಿಂದ ಪತಿಸೇವೆ ಮಾಡಬೇಕು– ನಿಗರ್ವಿ ಯಾಗಿ ತದೇಕಧ್ಯಾನದಿಂದ ಪತಿಯನ್ನು ಓಲೈಸಬೇಕು –ಆದರ್ಶ ಪತಿವ್ರತೆಯರ ಪ್ರಸ್ತಾಪ ಮತ್ತು ಪ್ರಶಂಸೆ.

**೪ನೆಯ ಸಂಧಿ** **ಪುಟ ೩೭–೪೭**

ಅತ್ತೆ ಮಾವ ಮೊದಲಾದ ಹಿರಿಯರನ್ನು ಆದರಿಸುವ ರೀತಿ–ಗಂಡನ ಬೆಂಬಲದಿಂದ ಅತ್ತೆಮಾವಂದಿರನ್ನಾಗಲಿ, ಅವರ ಒತ್ತಾಸೆಯಿಂದ ಪತಿಯನ್ನಾಗಲಿ ತೊಂದರೆಪಡಿಸುವುದು ಪತಿವ್ರತೆಗೆ ತಕ್ಕದ್ದಲ್ಲ– ಹೆತ್ತ ತಾಯಿಗೆ ಹೆಸರು ಬರುವಂತೆ ಶ್ರೇಷ್ಠ ಭಾವನೆಯಿಂದ ಈ ಗುರುಗಳನ್ನು ಪರಾಂಬರಿಸಬೇಕು – ಈ ದೊಡ್ಡ ಸಂಸಾರದಲ್ಲಿರುವ ಮಿಕ್ಕವರ ಸಂಗಡ ಸ್ನೇಹದಿಂದ ಇರಬೇಕು – ನೆರೆಮನೆಯವರಿಗೆ ಗೌರವ ತೋರಿಸಬೇಕು–ಅಯೋಗ್ಯರನ್ನು ದೂರಮಾಡಬೇಕು–ಗಂಡನ ಘನತೆಗೆ ತಕ್ಕಂತೆ ದೊಡ್ಡತನವನ್ನು ಹೊಂದಬೇಕು– ಯಾವಾಗಲೂ ಪುರುಷರ ಅಂಕೆಯಲ್ಲಿರಬೇಕು–ಇವೆಲ್ಲ 'ನಾರಾಯಣನಾಜ್ಞೆ'ಯೆಂದು ನಡಸಬೇಕು

**೫ನೆಯ ಸಂಧಿ** **ಪುಟ ೪೭–೫೭**

ಎಲ್ಲರೂ ಒಳ್ಳೆಯ ಸ್ವಭಾವದ ಹೆಣ್ಣನ್ನು ಸ್ನೇಹ ಅಭಿಮಾನಗಳಿಂದ ಕಾಣಬೇಕು–ಹೆಣ್ಣುಮಗು ಹೀನವಾದದ್ದಲ್ಲ ಮಾನ್ಯವಾದದ್ದು– ಹೆಣ್ಣಿನ ಪ್ರಾಶಸ್ತ್ಯ– ಉದಾಹರಣೆಗಳು– ಮಗಳು ಹುಟ್ಟಿದ ಕೊಟ್ಟ ಮನೆಗಳೆರಡನ್ನೂ ಉದ್ಧರಿಸುವಳು–ವರಾನ್ವೇಷಣೆ–ವರನಲ್ಲಿರಬೇಕಾದ ಗುಣಗಳು– ಕುಲೀನತೆ, ರೂಪ,

ಗುಣ, ಯವ್ವನ, ಶ್ರೀಮಂತಿಕೆ– ಇಂಥವನಿಗೆ ಮಗಳನ್ನು ಕೊಡಬೇಕು–ತಮ್ಮಂತೆ ಚೆನ್ನಾಗಿ ಬದುಕಬೇಕೆಂದು ಆಸೆಪಡುವ ಮಗುವನ್ನು 'ಬೀಳುಗುವರನಿಗೆ' ಕೊಡಬಾರದು–ತವರುಮನೆಯ ಮೋಹ ಹೆಣ್ಣುಮಗುವಿಗೆ ಹೆಚ್ಚು–ಆಕೆಗೆ ಒಡವೆ, ವಸ್ತ್ರ ಕೊಟ್ಟರೆ ಷೋಡಶದಾನದ ಫಲ ಬರುತ್ತದೆ–ಪಾರಣೆ ಪರ್ವಗಳಿಗೆ, ಮದುವೆ ಮುಂಜಿಗಳಿಗೆ ಆಕೆಯನ್ನು ಬರಮಾಡಿಕೊಂಡು ಮರ್ಯಾದೆ ಮಾಡಬೇಕು–ತಪ್ಪುಮಾಡಿದ ಮಗಳಿಗೆ ತಾಯಿ ಮಾಡುವ ಉಪದೇಶ

**೬ನೆಯ ಸಂಧಿ** **ಪುಟ ೫೮–೬೮**

ಸಂಸಾರ ಸುಖದ ಸಾರ– ಸೌಹಾರ್ದವುಳ್ಳ ದಂಪತಿಗಳು– ದುಷ್ಟ ದಂಪತಿಗಳು– ಆ ಚಿತ್ರ, ಈ ಚಿತ್ರ–ಸಂಸಾರ ದುರ್ಗತಿ–ದಿಟ್ಟೆಯಾದ ಪತ್ನಿಯನ್ನು ವಶಪಡಿಸಿಕೊಳ್ಳುವ ಗುಟ್ಟು–ಸ್ನೇಹ ಸೌಜನ್ಯದಿಂದ ಆಕೆಯನ್ನು ನಡಸಿಕೊಳ್ಳುವುದು

**೭ನೆಯ ಸಂಧಿ** **ಪುಟ ೬೯–೭೯**

ಸುಖದಾಂಪತ್ಯ–ಪತಿವಿರಹ ವಿರಹಿಣಿಯ ನಡತೆಯ ಪರಿ–ಪತಿಪ್ರಾಣಳಾದ ಸಾಧ್ವಿ–ಆಕೆಯ ವಿರಹವೇದನೆ ಒಂದು ಬಗೆಯ ತಪಸ್ಸು–ಪಾಪಪರಿಹಾರಕ–ಆಕೆಯ ವಿಹ್ವಲ ಸ್ಥಿತಿ– ಇನಿಯ ಬಂದನೆಂಬ ಸುವಾರ್ತೆ–ಪತಿರಾಯನ ದರ್ಶನ–ಪರಮಾನಂದ

**೮ನೆಯ ಸಂಧಿ** **ಪುಟ ೮೦–೯೦**

ನಡವಳಿಯ ಶಾಸ್ತ್ರ ತಿಳಿದ ಪತಿವ್ರತೆಯ ದಿನಚರಿ–ನಿರಲಸತೆ–ಕೆಲಸಗಳ ಮೇಲ್ವಿಚಾರಣೆ–ಮಕ್ಕಳಿಗೆ ತಿಳಿಯಹೇಳುವುದು–ವಿಚಕ್ಷಣೆ ಜಾಣ್ಮೆ ಸದಾಚಾರಗಳೇ ಬಾಳಿನ ಗುರಿ–ಗೃಹಿಣಿಯ ಪಾಕಶಾಸ್ತ್ರದ

ನಿಪುಣತೆ – ದೇವಪೂಜೆ – ಅತಿಥಿಸತ್ಕಾರ – ಪುರಾಣ ಶ್ರವಣ–ತತ್ವಚಿಂತನ–ಆತ್ಮಶುದ್ಧಿ–ವಿನಯಶೀಲತೆ–ಒಳ್ಳೆಯತನದ ಸೊಬಗು–ವಿಮರ್ಶೆಬುದ್ಧಿ–ದೋಷ ದೂರತೆ–ಯಶಸ್ಸು–ವ್ಯವಹಾರಜ್ಞಾನ–ಜಾಗರೂಕತೆ –ಪತಿಯ ಆದರ, ಆರೈಕೆ

**೯ನೆಯ ಸಂಧಿ** **ಪುಟ ೯೧–೧೦೫**

ಒಳ್ಳೆಯತನ– ಇತರರಿಗೆ ಹಿಂಸೆಮಾಡದಿರು ವುದು–ವಿಷ್ಣುವಿನ ಆರಾಧನೆ–ಗಣ್ಯರಲ್ಲಿ ಆದರಭಾವ–ನಿಷ್ಕಾಮಕರ್ಮ ಎಂದರೆ ತಿಳಿಮನದಿಂದ ಮಾಡುವ ಕೆಲಸಗಳು–ಇಂಥವರಿಗೆ ಮೋಸವಿಲ್ಲ, ಕೇಡಿಲ್ಲ–ಇವರು ಸದ್ಗತಿಯನ್ನು ಹೊಂದುವರು – ಮಹಾತ್ಮರ ಸಂದರ್ಶನವೇ ಪುಣ್ಯ–ಯಮನೂರು–ದಾರಿ ಪೆಡಸು –ದಾನಧರ್ಮ–ಭಗವನ್ನಾಮ ಸ್ಮರಣೆ–ಧರ್ಮ ಗ್ರಂಥ ಗಳ ಶ್ರವಣ – ಇಷ್ಟಾರ್ಥಸಾಧನ – ತೀವ್ರ ಧ್ಯಾನ ಉತ್ತಮ ಸುಖ ಕೊಡುತ್ತದೆ–ನಿದರ್ಶನಗಳು–ಪುರಾಣ ಶ್ರವಣದ ಫಲ, ಪಾಪವನ್ನು ತೊಡೆಯುವುದು–ಭಕ್ತಿ ಮತದ ತತ್ವ ತಿಳಿಯಬೇಕು, ಅದಕ್ಕನುಗುಣವಾಗಿ ನಡೆಯಬೇಕು ಕಾವ್ಯದ ಮುಕ್ತಾಯ ಕವಿ ವಿದ್ಯಾ ಗುರುವನ್ನು ಸ್ಮರಣಮಾಡುವುದು – ಉದಾತ್ತವಾದ ಮಂಗಳಾಚರಣೆ – ಪತಿವ್ರತೆಯರ ಮಹಿಮೆ ಆಚಂದ್ರಾರ್ಕವಾಗಿರಲಿ–ಎಲ್ಲರಿಗೂ ಒಳ್ಳೆಯದಾಗಲಿ –ದೇಶದ ಸುಭಿಕ್ಷ–ಶ್ರೀರಂಗಪಟ್ಟಣದ ಉನ್ನತಿಕೆ–ಪ್ರಭು ಚಿಕದೇವರಾಜರು ಧರ್ಮದಿಂದ ನಾಡನ್ನಾಳಲಿ – ಕನ್ನಡ ನಾಡು ಧರ್ಮದ ಸೀಮೆಯಾಗಲಿ – ಕನ್ನಡಿಗರು ಘನವಂತರಾಗಲಿ

# ಹದಿಬದೆಯ ಧರ್ಮ

## ಮೊದಲನೆಯ ಸಂಧಿ

ಶ್ರೀಮದಮಲಗುಣನಿಧಿಗೆ ನಿತ್ಯನಿಗೆ ನಿ
ಸ್ಸೀಮ ಕೃಪಾವಾರಿಧಿಗೆ
ರಾಮಣೀಯಕರಾಶಿಗೆ ಪಶ್ಚಿಮ ರಂಗ
ಧಾಮನಿಗಾನೆರಗುವೆನು ೧

ರಂಗಧಾಮನ ದಿವ್ಯಾಂಗ ಸಂಗತಿಯಿಂ
ಮಂಗಳದೇವತೆಯೆನಿಪಾ
ರಂಗಮಂದಿರ ಮಂಗಳವೈಜಯಂತಿಗೆ
ರಂಗನಾಯಕಿಗೆರಗುವೆನು ೨

ಆದಿನಾರಾಯಣನಾ ಶೇಷನೊಡಗೂಡಿ
ಯಾದರದಿಂದವತರಿಸೆ
ಯಾದವಕುಲವೇಳಿಗೆವೆತ್ತಿರ್ಪುದು
ಮೇದಿನಿಯೊಳು ಮೈಮೆವಡೆದು ೩

ಆ ಯಾದವರಿಗೆ ಕುಲದೇವರೆನಿಪ ನಾ
ರಾಯಣ[೧]ನಾದಿ[೧]ಕಾರಣನು
ಶ್ರೀಯೊಡಗೂಡಿ ಕರ್ಣಾಟಕದೇಶದೊ
ಳೀ ಯಾದವಾದ್ರಿಯೊಳಿಹನು ೪

ಬಲಕೃಷ್ಣರಿಂದೆ ಪಲವು ಪೂಜೆಗೊಂಡಿರ್ಪ
ಕುಲದೇವರ ಸೇವೆಗೆಂದು
ಪಲವು ಯಾದವರಾಯರಾ ದ್ವಾರಾವತಿಯಿಂ
ದೊಲಿದೈತಂದರೀ ನೆಲಕೆ ೫

ಶ್ರೀ ನಾರಾಯಣನಡಿಗಳಿಗೆರಗಿ ಮ
ಹಾನಂದರಸದ ಮೈಮೆಯೊಳು
ಆ ನೆಲೆಯನು ಬಿಟ್ಟಗಲಲಾರದೆ ತಾ
ವೀ ನಾಡೊಳು ನೆಲಸಿದರು ೬

ಈ ಶೈಲಕೆರಡು ಗಾವುದ ತೆಂಕಣ ರಮ್ಯ
ದೇಶವ ನೆಲೆವೀಡುಗೊಳಿಸಿ
ಈ ಶೂರರು ನೆಲಸಿದರದರಿಂದೆ ಮ
ಹೀಶೂರಪುರವೆನಿಸಿದುದು ೭

ಆ ದಿನ ಮೊದಲು ಮೈಸೂರನಾಳಿದರಾ
ಯಾದವಕುಲವರ್ಧನರು
ಶ್ರೀ ದೇವರಾಜಚಂದ್ರಮನವತರಿಸಿದ
ನಾ ದಿವ್ಯವಂಶವಾರ್ಧಿಯೊಳು ೮

೧. (ಖ) ನಖಿಲ.

ಭಾವಿಸೆ ಭೋಗಭಾಗ್ಯದೊಳೈಸಿರಿಯೊಳು
ದೇವೇಂದ್ರಗೆ ಮಿಗಿಲೆನಿಸಿ
ದೇವರಾಜನ ಬಸುರಿಂದೊಗೆದನು ದೊಡ್ಡ
ದೇವರಾಜೇಂದ್ರ ಭೂವರನು ೯

ಭೂವನಿತೆಯ ಪುಣ್ಯದ ಪುಂಜ ಮಾನುಷ
ಭಾವವ ಪಡೆದುದೆಂಬಂತೆ
ಈ ವಸುಧೀಶನಿಂದೊಗೆದೆಸೆದನು ಚಿಕ್ಕ
ದೇವರಾಜನು ತೇಜದೊಳು ೧೦

ಶ್ರೀರಂಗಪಟ್ಟಣದೊಳು ರತ್ನ ಸಿಂಹಾಸ
ನಾರೋಹಣವನಾಚರಿಸಿ
ಧಾರಿಣಿಯನು ಧರ್ಮದೊಳು ಪಾಲಿಸುತ ಮ
ಹಾರಾಜನೆನಿಸಿ ರಾಜಿಪನು ೧೧

ಶ್ರೀ ಯುವತೀಶನಖಿಲಗುಣನಿಧಿ ನಾ
ರಾಯಣನಾದಿಕಾರಣನು
ಆಯುರಾರೋಗ್ಯೈಶ್ವರ್ಯವ ಚಿಕದೇವ
ರಾಯನಿಗನುಗೊಳಿಸುವನು ೧೨

ಧರೆಯ ಪೊರೆವ ಧರ್ಮವ ಸಂಪಾದಿಪ
ಧುರವ ಗೆಲುವ ಗೈಮೆಯೊಳು
ನರಪತಿ ಚಿಕದೇವರಾಜೇಂದ್ರಗೆ ಶೌರಿ
ನೆರವಾಗಿಹನು ನೇಮದೊಳು ೧೩

ಚಿಕದೇವರಾಜಚಂದ್ರಮನ ಪಟ್ಟದ ರಾಣಿ
ಸಕಲಸದ್ಗುಣಸಂಪನ್ನೆ
ಅಕಲುಷೆಯೆಳವಂದೂರ ದೇವಮ್ಮನು
ಸಕಲ ಸಂಪದದೊಡನಿಹಳು ೧೪

ಇಷ್ಟಗುಣೆಯರೆಣ್ಬರು ಮತ್ತೆ ರಾಣಿಯ
ರಷ್ಟೈಶ್ವರ್ಯ ಲಕ್ಷ್ಮಿಯರೊ
ಅಷ್ಟ ದಿಗ್ವಿಜಯಲಕ್ಷ್ಮಿಯರೊ ತಾಮೆನೆ ಸಂ
ತುಷ್ಟಿಯೊಳೊಡವೆರೆದಿಹರು ೧೫

[೧]ಹಡಪ[೧] ಕಾಳಾಂಜಿ ಪೊಂಗಟ್ಟಿಗೆ ಕುಂಚ ಕ
ನ್ನಡಿ ಗಿಂಡಿ ಬಿಜ್ಜಣಿಗೆಗಳ
ಪಿಡಿದೂಳಿಗಗೈವ ಬಿಂಕಗಾತಿಯರಾ
ಪೊಡವಿಯಾಣ್ಮನ ಪೊದ್ದಿಹರು ೧೬

ಪಾಡುವ ಕುಣಿವ ಬಾಜಿಪ [೨][ಬಣ್ಣನೆ][೨] ವಾ
ತಾಡುವ ಪರಿಹಾಸಗೈವ
ಗಾಡಿಕಾತಿಯರು ಗಣನೆಯಿಲ್ಲದೆ ಜೋಡು
ಗೂಡಿರುವರು ಕೂರ್ಮೆಯೊಳು ೧೭

ನೋಂತು ಚತುಷ್ಷಷ್ಟಿ ಕಲೆಗಳು ಪೆಣ್ಬರಿ
ಜಾಂತು ಸೇರಿದುವೊ ಎಂಬಂತೆ
ಸಂತಸ ಮಿಗೆ ಸರ್ವ ಸರಸವಿದ್ಯಾಸಿ
ದ್ಧಾಂತವೇದಿನಿಯರೊಪ್ಪಿಹರು ೧೮

೧. (ಗ) ಅಡಪ. ೨. ಬನ್ನಣೆ (ಕ, ಖ, ಗ) [ಸರ್ವತ್ರ].

ಪಲರಾಣಿಯರೂಳಿಗದ ಪೆಣ್ಗಳುಮಿ
ಕ್ಕೆಲದೊಳು ೪ಪಂಕ್ತಿ೪ಗೊಂಡೆಸೆಯೆ
ನೆಲದಾಣ್ಮನೊಳವೋಲಗದೊಳೊಪ್ಪಿದನಾ
ಬಲವೈರಿಗೆ ಪಡಿಯೆನಿಸಿ ೧೯

ಓಲಗಗೊಳುತೊಂದು ದಿನವೆಡಬಲದ ಸು
ಶೀಲೆಯರೊಳು ಕಡೆಗಣ್ಣ
ಸಾಲುವಿಡಿದು ಸುಳಿಸುಳಿಸಿಯೆನ್ನೊಳು ಸತ್ಕೃ
ಪಾಲೋಕನವನೆಸಗಿದನು ೨೦

ಕರುಣಾಮೃತಾಬ್ಧಿಯ ಕಲ್ಲೋಲಗಳಂತೆ
ತರತರದೊಳು ಕವಿತರುವ
ಸರಸಕಟಾಕ್ಷವನೆಸಗಿಯೆನ್ನೊಳು ಮನ
ಗರಗಿ ಮನ್ನಿಸಲೆಳಸಿದನು ೨೧

ಎನ್ನ ಮನ್ನಿಪೆನೆಂದೆಣಿಸಿ ತನ್ನೆಡದೊಳು
ಪೊನ್ನ ಪುತ್ತಳಿಯಂತೆಸೆವ
ಮನ್ನಣೆವಡೆದ ಪಟ್ಟದ ರಾಣಿಯ ಮೊಗ
ಮನ್ನೋಡುತಿಂತು ನುಡಿದನು ೨೨

ಅರಸಿ ಕೇಳೀ ಹೊನ್ನಿ ಸರಸಸಾಹಿತ್ಯದ
ವರದೇವತೆ ತಾನೆಂದು
ಪರಮಾರ್ಥವಾದಿಯಳಸಿಂಗರಾರ್ಯನು
ಪರಿಪರಿಯೊಳು ಬಣ್ಣಿಪನು ೨೩

೪. (೧) ಹಂತಿ.

ಓದುಗಲಿಸುವರೊಲಿದು ಪೊಗಳಿದೊಡಾ
  ವೋದುಗಲಿವರೋದುಗಳು
ಮೇದಿನಿಯೊಳು ಮೇಲೆನಿಪುವೆಂಬುದು ಲೋಕ
  ವಾದವೈಸಲೆ ರಾಣಿ ಕೇಳು ೨೪

ಇವಳು ಕಾವ್ಯಾಲಂಕಾರನಾಟಕಗಳ
  ಪವಣಿಗೆಯಿರವ ಬಲ್ಲವಳು
ಇವಳ ಸಾಹಿತ್ಯದ ಸವಿಗೆಳಸುತ್ತೆನ್ನ
  ಕಿವಿಗಳು ಕದುಬುಗೊಂಡಿಹವು ೨೫

ಪವಣಿಗೆಯೊಪ್ಪೆ ಪುರುಳು ಪೊಗರೇರೆಯಂ
  ಗವಿಸೆಯಲಂಕಾರಗಳು
ಕವಿದು ಪರಿಯೆ ರಸದೊಳ್ಗಂಪು[೫][ಕ][೫]ಮ್ಮನೆ
  ಕವಿತೆಯೊಂದನು ಪೇಳಿಸಿಂದು ೨೬

ಎಂದ ರಾಯನ ನುಡಿಗಾನು ವಿನಯಗೂಡಿ
  ಪಿಂದೆಗೆದಿರೆ ಪಟ್ಟೆದರಸಿ
ಕಂದ ಬಾರೆನ್ನ ಕಟ್ಟಾಣಿ ಪೆಣ್ಮಣಿಯೆ ಬಾ
  ರೆಂದು ಮುಂದಕೆ ಬರಿಸಿದಳು ೨೭

[೬]ಹೊನ್ನಿ ಬಾ ಹೊನ್ನಕ್ಕ[೬] ಬಾರೆಂದು ಕರವಿಡಿ
  ದೆನ್ನ ತನ್ನೊತ್ತಿಗೆ ಬರಿಸಿ
ಎನ್ನೊಳು ನೆವಮಿನಿತಿಲ್ಲದೆರಕಗೂಡಿ
  ಮನ್ನಿಸಿ ನುಡಿದಳಿಂತೆಂದು ೨೮

೫. (ಖ) ಖಮ್ಮನೆ. ೬. (ಕ) ಕನ್ನಡ ಜಾಣೆ ನೀ.

ಕಲಿತ ಬಿಜ್ಜೆಯ ಬಲ್ಲರಿಗೆ ಕೇಳಿಪುದೈಸೆ
ಫಲವಿದನರಿತು ನೀನಿಂದು
ಆಲಸದೆ ನಾಣ್ಚದಂಜದೆಯಳುಕದೆ ಪೇಳು
ಪಲವಗೆ ಕಬ್ಬದೊಳ್ಪುಗಳ ೧೯

ಇಂತು ನುಡಿದ ರಾಣಿಯ ನುಡಿಗೇಳಿಯೋ
ರಂತೆ ಚಿತ್ತವ ಬಲಿವಿಡಿದು
ಸಂತಸ ಮಿಗೆ ಸಭೆಯೊಳು ರಾಯಗೆ ಮಾ
ರಾಂತು ಬಿನ್ನವಿಸಿದೆನಿಂತು ೨೦

ಅರಸ ಕೇಳೆನಗೆ ನಿನ್ನಡಿಯೂಳಿಗಮೊಂ
ದರಸಿಯರಡಿಯೊಲ್ಮೆಯೊಂದು
ಪರಿಕಿಪೊಡಖಿಳಾರ್ಥಸಾಧನಂಗಳಿಗಿವು
ನೆರವಾಗಿಹವು ನೇಮದೊಳು ೨೧

ನಿನ್ನಡಿಯೊಲವರಿತಿರ್ಪುದೆನಗೆ ಬಿಜ್ಜೆ
ನಿನ್ನೂಳಿಗವೆನ್ನ ಧರ್ಮ
ನಿನ್ನಾಣತಿಗೈವುದೆನ್ನ ಮನೋರಥ
ವೆನ್ನ ಭಾಗ್ಯಕೆ ಸರಿಯುಂಟೆ ೨೨

ಪಲವೋದುಗಳಿಂದ ಪಲವು [೭]ಗ್ಗೈಮೆ[೭]ಗಳಿಂದ
ಪಲ ಬಗೆವಾತುಗಳಿಂದ
ಬೆಳೆವಡೆದಿರ್ಪೆನೆಂದೆಣಿಸುವಳಲ್ಲ ನಿ
ನ್ನೊಲವೊಂದನೆ ನಂಬಿಹೆನು ೨೩

೭. (ಕ) ಬಿಜ್ಜೆ.

ನಿನ್ನ ಗುಣಂಗಳನೊಲಿದೋದುವುದೋದು
ನಿನ್ನಾಳ್ಗೈಮೆಯೊಳ್ಗೈಮೆ
ನಿನ್ನೊಲವರಿತು ನುಡಿವ ನುಡಿ ನಲ್ನುಡಿ
ಯಿನ್ನಿವಕೆಣೆ ಬೇರುಂಟೆ ೩೪

ನಿನ್ನ ಕೃಪಾರಸದಿಂದೈಸೆಯಾನು ಕ
ಬ್ಬೊನ್ನು ಚೆಂಬೊನ್ನಾದಂತೆ
ಸನ್ನುತಿವಡೆದೊಳ್ಪುವೆತ್ತು ಸಕಲ ಭಾ
ಗ್ಯೋನ್ನತಿಯೊಡಗೂಡಿಹೆನು. ೩೫

ನಿನ್ನಡಿ ಸೋಂಕಿನೊಳಖಿಲ ದುರಿತಗಳ
ಸನ್ನಾಹವ ಸದೆದಟ್ಟಿ
ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಿಯೆಂಬೇಳ್ಗೆವೆತ್ತಿಹೆನು ೩೬

ನಿನ್ನಾಣತಿಗೇಳಿ ನಿನ್ನ ಬಳಿಗೆ ಸಂದು
ನಿನ್ನೂಳಿಗಗಳನೆಸಗಿ
ನಿನ್ನವಳೆನಿಸಿ ನಿನ್ನೆಡೆವಿಡದಿರ್ಪೆನೀ
ಯುನ್ನತಿಗಿನ್ನೆಣೆಯುಂಟೆ ೩೭

ಆನಾವಳಿನ್ನ ಮುನ್ನಿರವಾವುದು ಮ
ತ್ತೀ ನಿನ್ನ ದಯವಾವುದಕಟ
ಏನೆಂಬೆನಿದಕೆ ಪೆಳವನೆಡೆಗಾ ಗಂಗೆ
ತಾನೈದೆ ಬಂದುದೆಂಬಂತೆ ೩೮

ಎನ್ನ ಜನ್ಮಕೆ ಸಾಫಲ್ಯಮಾದುದು ನಿನ್ನ
ಚೆನ್ನಡಿಯೂಳಿಗದಿಂದ
ಪಿನ್ನೇಳು ಮುನ್ನೇಳು ತರದವರನಿಬರು
ಮುನ್ನತಿವಡೆದರೆನ್ನಿಂದ ೩೯

ಆವ ಜನ್ಮದೊಳಾನಾವ ಸುಕೃತಗಳ
ನಾವ ಬಗೆಯೊಳೆಸಗಿದೆನು
ಈ ವಿಧದೇಳಿಗೆವಡೆದೀಯೊಡಲೊಳೆ
ದೇವರೂಳಿಗವೆಸಗುವೆನು ೪೦

ಒಲಿದು ತನ್ನೊಡವುಟ್ಟು ಸೊನೆ ಮಗಳೆಂದೆಂಬ
ಪಲರು ಮುನ್ನಿನ ಬಾಂಧವರು
ಕುಲದೇವತೆಯೆಂದು ಕೂರ್ತು ತಂತಮ್ಮಿಷ್ಟ
ಫಲವ ಪಡೆವರೆನ್ನಿಂದ ೪೧

ಸುತ್ತಣ ದೇಶದರಸಿಯರ ಬೈತಲೆ
ಗುತ್ತಮ ಭೂಷಣವೆನಿಪ
ಮುತ್ತಿನ ಸರವೆನ್ನ ರನ್ನವಾವುಗೆಗಳ
ಸುತ್ತ ಲಂಬಣವಾದುದಿಂದು ೪೨

ಏವೇಳುವೆನೆನ್ನ ಮನದಾನಂದವ
ನಾವ ಬಗೆಯೊಳರುಹುವೆನು
ಭಾವಿಸೆ ಸೊಗದ ಸುಗ್ಗಿಯ ತನಿಸೊಕ್ಕೆನ್ನ
ನಾವರಿಪುದು ಮತ್ತೇವೆ ೪೩

ಒಡೆಯನಿರಿಸಿದಂತಿರ್ಪುದಲ್ಲದೆ ಪೇ
ಳೊಡವೆಗೆ ಬೇರಿರವುಂಟೆ
ಕಡುಗೂರ್ಮೆಯಿಂದ ನಿನ್ನಡಿಯಾಣತಿಯನೆನ್ನ
ಮುಡಿಯೊಳಾಂತೆನು ಮತ್ತೇನು ೪೪

ಆದೊಡಮೆನ್ನ [೮]ಕವಿತೆ ಗ[೮]ಬ್ಬದ ಬಗೆ
ಈ ದಿವ್ಯ ಸಭೆಗೆ ಸಂಗತಮೆ
ಪಾದದೂಳಿಗದೊಳು ಬಳಿದ ಬಾಲಕಿಯೆಂ
ದಾದರದಿಂದಾಲಿಪುದು ೪೫

ಪದಿನೆಂಟು [ಬಣ್ಣನೆ]ಯೆಂದು ಬವಣಿಗೊಂಡು
ಪದಗೆಟ್ಟು ಬಯಲ ಬಣ್ಣಿಸದೆ
ಮುದದೊಡನಿಹಪರದೇಳ್ಗೆವಡೆಯೆ ಹದಿ
ಬದೆಯ ಧರ್ಮವ ಬಣ್ಣಿಪೆನು ೪೬

ಅರಸಿಯರನಿಬರುವಾದರದಿಂದೆನ್ನ
ಸರಸಕಾವ್ಯವ ಸವಿವಂತೆ
ಪರಮ ಪತಿವ್ರತೆಯರ ನಡತೆಯನಿಲ್ಲಿ
ಪುರುಳುಗೊಳಿಸಿ ಪೊಗಳುವೆನು ೪೭

ಧರ್ಮದ ತನಿಗಂಪು ತಲೆದೋರೆ ಕಾವ್ಯದ
ಪೆರ್ಮೆ ಬೇರ್ವರಿದು ಬಿತ್ತರಿಸೆ
ನಿರ್ಮಲ ಸತಿಯರ ಧರ್ಮವ ಕೃತಿಯಾಗಿ
ನಿರ್ಮಿಸಿ [೯]ನೆಗಳಿರ್ಪೆ[೯]ನಿಂದು ೪೮

೮. (ಕ) ಕವಿದೆಗೆ. ೯. (ಕ) ಕೇಳಿಪೆ.

ಬಲ್ಲರಿಂದಾನು ಕೇಳಿದುದಕೆ ಪೆರ್ಚು ಕುಂ
ದಿಲ್ಲದಂತೆಚ್ಚರುಗೂಡಿ
ಎಲ್ಲರುಮರಿವಂತೆಳವಾತುಗಳಿಂದ
ಸೊಲ್ಲಿಸುವೆನು ಸೊಗಸುವೊಲು ೪೯

ಎಂದ ನುಡಿಯ ರಾಯನುಮರಸಿಯರುಮಾ
ನಂದವಡೆದು ಬಗೆಗೊಳಿಸೆ
ಸಂದ ಸತೀಧರ್ಮವನು ಸಾಹಿತ್ಯದೊ
ಳೊಂದುಗೊಳಿಸಿ ಪೇಳಿದೆನು ೫೦

ಆದಿಕಾವ್ಯದೊಳೈದನೆಯ ವೇದದೊಳು ಮ
ನ್ವಾದಿಕ ಧರ್ಮಶಾಸ್ತ್ರದೊಳು
ಭೇದಿಸಿ ಪಿರಿಯರು ಪೇಳಿದುದನೆ ಕೃತಿ
ಗೈದಾನು ಕಿವಿಗೊಳಿಸಿದೆನು ೫೧

ಸತಿಯರೀ ಕೃತಿಯನಾಲಿಸಿದೊಡಂದಂದಿಗೆ
ಪತಿಭಕ್ತಿ ಬಣ್ಣವೇರುವುದು
ಮತಿ ಮಸುಳಿಸದೆ ಮರವೆದೋರದಿಹ ಪರ
ದತಿಶಯವನುಗೂಡುವುದು ೫೨

ಎಳವೆಣ್ಗಳೀ ಕೃತಿಗೇಳೆ ತಮ್ಮಿನಿಯರ
ನೆಳಮೆಯೊಳಳವುಗೆಡಿಸದೆ
ಬಳಿಸಂದು ಬಾಳುವರತ್ತೆ ಮಾವಂದಿರ
ನೊಳ್ಗಂ ವುಗ್ಗಂ ಗೈದೊಳ್ಪವಡೆವರು ೫೩

೧೧. (೩) ಗು.

ಮನೆವಾಳ್ತಿಯರಿಯದ ಮರುಳುವೆಣ್ಣೀ ಕೃತಿ
ಯನೆ ಮನವೊಲಿದೋದಿದೊಡೆ
ಜನರಿವಳನು ಪೋಲ್ವ ಜಾಣೆ ಜಗದೊಳಿ
ಲ್ಲೆನೆ ಚಾತುರ್ಯವಡೆವಳು ೫೪

ಮುನಿದು ಮೂದಲಿಸಿ ಮೋಡಿಯೊಳಿದ್ದು ಮೂರ್ಖಿಪ
ಮೊನೆಗಾತಿಯಿಾ ಕೃತಿಗೇಳೆ
ಇನಿಯನ ಮೊಗವ ನೋಡದ ಮುನ್ನ ಮೋಹಿಸಿ
ಮನಗರಗುವಳು ಮತ್ತೇನು ೫೫

ಕಡುನಾಣ್ಚಿಯಂಜಿ ಕಣ್ಮುಚ್ಚಿ ಕಂಪನಗೊಂಬ
೧೧ಬಡವೆಣ್ಗಳೀ೧೧ ಕೃತಿಗೇಳೆ
ಎಡಬಲದವರೇಳಿಸದಂತೆ ಮನದನ್ನ
ರೊಡನೆ ಬಾಳುವರಡಕದೊಳು ೫೬

ಬಗೆಯೆ ಮೈಲಿಗೆಯೆಂಜಲೆಂಬುದನರಿಯದ
ಮುಗುದೆಯರೀ ಕೃತಿಗೇಳೆ
ನಿಗಮದೊಳೊಗೆದ ನೇಮಂಗಳ ತಿಳಿದೀ
ಜಗಕೆ ಪಾವನೆಯರೆನಿಪರು ೫೭

ಅತ್ತೆನಾದಿನಿಯರೊಳಳುಕದೆ ಕಾದುವ
ನ್ಮತ್ತೆಯರೀ ಕೃತಿಗೇಳೆ
ಉತ್ತಮಗುಣಗಳಿಂದೊಳಗುಗೈದವರೊಳು
ಪತ್ತುಗೆವೆರಸಿ ಬಾಳುವರು ೫೮

೧೧. (ಕ) ಎಡವೆಣ್ಗಳೀ, (ಗ) ಹುಡದಿಯರೀ.

ಒರ್ವರೊರ್ವರೊಳು ಮಚ್ಚರಿಸುವ ಸವತಿಯ
ರಿರ್ವರುಮೀ ಕೃತಿಗೇಳೆ
ಬೇರ್ವರಿದಿರ್ಪ ವೈರದ ಬೇರ ಪರಿದಿ
ಟ್ಟಿರ್ವರೊಂದೆನಿಸಿಯೊಪ್ಪುವರು ೫೯

ಇದು ಪಾತಿವ್ರತ್ಯಧರ್ಮತತ್ವದ ಸಾರ
ವಿದೆ ಸಂಜೀವನ ಮಂತ್ರ
ಇದು ಪರಮಾರ್ಥ ಹಿತೋಪದೇಶದ ತಿರು
ಳಿದನು ಸತಿಯರೋದುವುದು ೬೦

ಇದನಾಲಿಪುದೊಳ್ಪೆಂಡಿರೀ ಧರ್ಮದ
ಹದನರಿತಾಚರಿಸುವುದು
ಇದನು ಕಲಿವುದಿದರೊಳಗರಿವುದು ಹದಿ
ಬದೆಯರೆನಿಸಿ ಬಾಳುವುದು ೬೧

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಗೆದುದು ಪೀಠಿಕಾಸಂಧಿ
ಸನ್ನುತಗುಣಸಂಬಂಧಿ ೬೨

## ಎರಡನೆಯ ಸಂಧಿ

ಮಂಗಳಗುಣಗಣನಿಧಿಗೆ ನಿರ್ಮಲನಿಗು
ತ್ತುಂಗ ಮಹಿಮಗೆ ಮಾಧವಗೆ
ಸಂಗತಜನಸರ್ವಫಲದಗೆ ಪಶ್ಚಿಮ
ರಂಗಧಾಮನಿಗೆರಗುವೆನು ೧

ಇಂಗೋಲನ ತಾಯಿಗಿಂಗದಿರನ ತಂಗಿ
ಗಿಂಗಡಲಣುಗಿಗಿಂದಿರೆಗೆ
ರಂಗಧಾಮನ ರಾಣಿಗೆ ರಾರಾಜಿಪ
ರಂಗನಾಯಕಿಗೆರಗುವೆನು ೨

ಪತಿಯೊಳು ಪರಭಕ್ತಿಗೈವುದು ಲಕ್ಷ್ಮೀ
ಪತಿಯಾಣತಿಯೆಂದು ಬಗೆದು
ಪತಿಯನೆ ಪರದೇವತೆಯೆಂದು ಭಜಿಸುವ
ಸತಿಯರ ಸನ್ನುತಿಸುವೆನು ೩

ಪತಿಭಕ್ತಿಯೊಂದು ಶ್ರೀಪತಿಭಕ್ತಿಯೊಂದಿದ
ರತಿಶಯಕಿನ್ನೆಣೆಯಿಲ್ಲ
ಮತಭೇದವುಂಟು ಮಾಧವಭಕ್ತಿಗಿದಕಾ
ಮತಭೇದವೂ [೧]ಮಗುಳಿ[೧]ಲ್ಲ ೪

೧. (ಖ) ಮರುಳಿ.

ಆದರದೊಡನಂತರಂಗದೊಳಾಣ್ಮನ
ಪಾದವ ಭಜಿಪ ಭಾವೆಯರ
ಪಾದಧೂಳಿಗಳಿಂದೆ ಪಾವನವಹುದೀ
ಮೇದಿನಿಯೆನೆ ಮಿಕ್ಕುದೇನು ೫

ಪತಿತರ ಪಾವನವೆನಿಸುವ ಬಲ್ಮೆಯೊ
ಳತಿಶಯವಡೆದ ತೀರ್ಥಗಳು
ಸತಿಯರ ಪಾದಸಂಸ್ಪರ್ಶದಿಂ ತಮ್ಮದು
ಷ್ಕೃತವ ಕಳೆಯಲೆಳಸುವುವು ೬

ತಡೆಯದೆಲ್ಲೆಡೆಯೊಳು ತಾನು ಬೀಸುವೆನೀ
ಯೆಡರನೇಳಿಪೆನೆಂದೆಲರು
ಸಡಗರದಿಂದ ಸಾಧ್ವಿಯರಡಿಸೋಂಕಿದ
ಪುಡಿಯ ಮುಡಿಯೊಳಾಸುವುದು ೭

ತೇಜಿಗಳೆಡಹದೆ ತೇರುಡಿಯದೆ ತ
ನ್ನೋಜೆಯುಡುಗದೆ ಭಾಸ್ಕರನು
ಈ ಜಾತಿ ಸಾಧ್ವಿಯರೆಸಕದೇಳಿಗೆಯಿಂದ
ತೇಜವಡೆದು ತಿರುಗುವನು ೮

ಮಳೆಗರೆವುದು ಬೆಳೆ ಪೆರ್ಚುವುದಿಳೆ ತಳ
ಕಿಳಿದು ಪೋಗದೆ ತಡೆದಿಹುದು
ಪಳಿವಿಲ್ಲದ ಪತಿವ್ರತೆಯರ ನಡತೆಯ
[೨]ಬಳದೊಳೆ[೨]ಂಬರು ಬಲ್ಲವರು ೯

೨. (ಕ, ಖ) ಬಳದಿಂದೆ.

ಪರಮ ಪತಿವ್ರತೆಯರ ಪಾದದರ್ಶನ
ದೊರೆಕೊಂಡುದೆ ಪುಣ್ಯದಿವಸ
ಪರಿದಿವರನು ಬಲವರೆ ಭೂಪ್ರದಕ್ಷಿಣ
ದಿರವನಿನ್ನೇವಣ್ಣಿಪೆನು ೧೦

ತನ್ನಿನಿಯನ ತಾಯ್ತಂದೆಯ ಕುಲಗಳ
ನುನ್ನತಿಗೈದೊಪ್ಪುವಡೆದು
ಮನ್ನಣೆವೆತ್ತ ಸಾಧ್ವಿಯರ ಮಹಿಮೆಗಳ
ಸನ್ನುತಿಸುವಡೆನ್ನಳವೆ ೧೧

ಈ ಸುಚರಿತ್ರೆಯರೆಸಗಿದನ್ನವನುಣ
ಲಾಸೆವಡುವರು ಪಿತೃಗಳು
ಆ ಸುಖ ದೊರೆಕೊಂಡೊಡವರಿಗಪ್ಪುದು ತೃಪ್ತಿ
ಸಾಸಿರ ಬರಿಸ ಪರ್ಯಂತ ೧೨

ಸತಿಯರ ಕೈ ಸೋಂಕಿದನ್ನವ ಸವಿವುದ
ರತಿಶಯವಾಡಲೆನ್ನಳವೆ
ಅತಿಕೃಚ್ಛ್ರ ಚಾಂದ್ರಾಯಣ ಸಾಂತಪನಾದಿ
ವ್ರತನಿಯಮದ ಪವಣಲ್ಲ ೧೩

ಇವರಿದ್ದೆಡೆ ಪುಣ್ಯತೀರ್ಥ ಪುಣ್ಯಕ್ಷೇತ್ರ
ವಿವರಿದ್ದ ಮನೆ ದೇವಭವನ
ಇವರೆ ಪ್ರತ್ಯಕ್ಷದೇವತೆಯರು ದಿಟವೆಂದು
ವಿವರಿಸುವರು ವೇದವಿದರು ೧೪

ಉದಯಕಾಲದೊಳೆದ್ದೊಲಿದಿಷ್ಟದೈವದ
ಪದಗಳ ಪಾಡುವಂದದೊಳು
ಹದಿಬದೆಯರ ಪೆಸರ್ಗೊಂಡು ಪೊಗಳ್ವುದು
ವಿದಿತವೈಸಲೆ ವೈದಿಕರಿಗೆ ೧೫

ಪತಿಯ ಪಾದಾಬ್ಜಭಕ್ತಿಯೆ ತಮಗಿಹಪರ
ಗತಿಯೆಂದು ಕಡುವಿಡಿದಿರ್ಪ
ಸತಿಯರಿರ್ಪೆಡೆಯೊಳು ಕೃತಯುಗವೊಂದಲ್ಲ
ದಿತರಯುಗಕ್ಕಿಂಬಿಲ್ಲ ೧೬

ಪರಮಪತಿವ್ರತೆಯಿದ್ದ ಬಳಿಯೊಳಾ
ಸಿರಿರಾಣಿ ಸೇರಿ ಬಂದಿಹಳು
ಸರಸತಿ ಸಾವಿತ್ರಿ ಗಾಯತ್ರಿಯರುಮಾ
ಪರಿಸರದೊಳು ಬಳಸಿಹರು ೧೭

ಪಲವು ಸುಕೃತಮಿಂತು ಪರಿಣತಿವೆತ್ತುದೊ
ಕುಲದೇಳ್ಗೆ ಗುಂಪುಗೂಡಿದುದೊ
ಸಲೆ ಪರಿಶುದ್ಧಿ ಸಾಕಾರವಾದುದೊ ಎನೆ
ಕುಲವಧು [೭]ಕುರುಹು[೭]ಗೊಂಡಿಹಳು ೧೮

ಪತಿಭಕ್ತಿರಸಮಿಂತು ಬಲಿದುದೊ। ಪರಿಶುದ್ಧ
ಮತಿಗಿಂತು ಮೈದೊರಕಿದುದೊ
ವ್ರತದೇಳ್ಗೆಯಿಂತು ಬಿತ್ತರವಡೆದುದೊ ಎನೆ
ಸತಿಯರು ಜಸವಡೆದಿಹರು ೧೯

೭. (ಖ) ಗುರುತು.

ಜಗದೊಳಪಾಂಸುಲೆಯರ ಚರಿತಕೆ ಸರಿ
ಮಿಗಿಲಿಲ್ಲ ಮಿಕ್ಕ ಧರ್ಮದೊಳು
ಬಗೆಯರಿತೆಸಗಬಲ್ಲವರಿಗೆಂದೆಂದಿಗೂ
ಮೊಗದೋರವು ಮೋಸಗಳು ೨೦

ಈ ಕಾಲವಾ ಕಾಲವೀ ದೇಶವಾ ದೇಶ
ವೀ ಕುಲವಾ ಕುಲವೆನದೆ
ಏಕರೀತಿಯೊಳೆಸಗುವ ಧರ್ಮಕಿದಕಿನ್ನು
ಲೋಕದೊಳೆಣೆ ಬೇರುಂಟೆ ೨೧

ಉಣದುಡದೊಡಲ ದಂಡಿಸುವಾಯಸವಿಲ್ಲ
ಪಣವ ವೆಚ್ಚಿಸುವ ಪಾಡಿಲ್ಲ
ಗುಣವಂತೆಯರೆಸಗುವ ಪತಿಶುಶ್ರೂಷೆ
ಗೆಣೆಯಹ ತಪ[೪]ವಿನ್ನೊ[೪]ಳವೆ ೨೨

ಪಲನಾಡಿಗೆ ಪರಿಪರಿದು ಬಳಲಿಯಲ್ಲಿ
ಪಲನೀರ ಮುಳುಗಿ ಮುಂಗೆಡದೆ
ನಲಿದೆಸಗುವ ನಲ್ವೆಂಡಿರ ನಡತೆಗೆ
ಪಲನೇಮಗಳು ಪಾಸಟಿಯೆ ೨೩

ಮನೆಯ ತೊರೆದು ಮನೆವಾಳ್ತೆಯನುಳಿದು ತ
ನ್ನನುಕೂಲದಾಸೆಯನಳಿದು
ಬನದೊಳು ಗೈವ ಬರಿಯ ತಪಗಳು ಕುಲ
ವನಿತೆಯರಿರವಿಗೆ ದೊರೆಯೆ ೨೪

೪. (ಖ) ಗಳಿನ್ನೊ.

ಮನೆಯೆ ಧರ್ಮಾಶ್ರಮ ಮನೆವಾಳ್ತಿಯೆ ಧರ್ಮ
ವಿನಿಯನೂಳಿಗ ದೇವಪೂಜೆ
ಮನನವಿವನ ನೆನೆವುದೆ ಸಾಧ್ವಿಯರಿಗೆ
ಮುನಿಸತಿಯರ ಮೋಡಿಯೇನು ೨೫

ಇನಿಯನ ಸೇವೆಯೊಳೆಣೆಯಿಲ್ಲದ ಧರ್ಮ
ಮನೆವಾಳ್ತಿಯೊಳರ್ಥಕಾಮ
ಮನದನ್ನನೊಳು ಮಾಧವನ ಭಾವಿಸೆ ಮೋಕ್ಷ
ವೆನೆ ಸತಿಯರಿಗರಿದೇನು ೨೬

ಪಲವು ಧರ್ಮಂಗಳ ಬಳೆಯಿಪುದಾಯಾಸ
ಫಲವ ಭೋಗಿಪುದಾನಂದ
ಕುಲಸತಿಧರ್ಮವ ಕೂರ್ತೆಸಗುವುದಾ
ಫಲಭೋಗಕೆ ಪಾಟಿಯಲ್ತೆ ೨೭

ಕಡುನೇಮವಿಡಿದು ಕರ್ಕಸಗೊಂಡು ಮುನಿವರ
ರೊಡರಿಸುವುಗ್ರತಪಗಳು
ಮಡದಿಯರಿನಿಯರ ಮನವರಿತೆಸಗುವ
ನಡತೆಗಳಿಗೆ ಪಡಿಯಲ್ಲ ೨೮

ಆ ರೂಢಿವೆತ್ತ ಮಹಾಭಾರತದೊಳ
ಗಾರಣ್ಯಕ ಪರ್ವದೊಳು
ನೂರತೊಂಬತ್ತೆಂಟನೆಯಧ್ಯಾಯದೊ
ಳಾರಯ್ಯೆ ಕಥೆಯೊಂದುಂಟು ೨೯

ಸಾಂಗ ವೇದವನೋದಿ ಸಕಲ ಧರ್ಮದ ತ
ತ್ವಂಗಳನರಿತಾಚರಿಸಿ
ತುಂಗ ಮಹಿಮೆವೆತ್ತು ದೋಷವಳಿದು ಮುನಿ
ಪುಂಗವನೊರ್ವನೆನೆಸಿದನು ೩೦

ಮನೆಯೊಳು ಮರುಕವನುಳಿದು ತಪವ ಗೈವ
ಮನದಿ ವನವನನುಸರಿಸಿ
ತನುವ ದಂಡಿಸಿ ಘೋರ ತಪವನೆಸಗುತಲ್ಲಿ
ಮುನಿಮುಖ್ಯನೆನಿಸಿ ಮೆರೆದನು ೩೧

ಒಂದು ದಿವಸ ವೇದವೋದುತ ಬೇಸಗೆ
ಯಿಂದ ಬಳೆದ ಬಿಸಿಲಿನೊಳು
ಬೆಂದುರೆ ಬೆಮರುತ್ತ ಬಿಸುಸುಯ್ಯುತ್ತಂದು
ನಿಂದನು ಮರದ ನೆಳಲೊಳು ೩೨

ಆ ಋಷಿವರನಂತಿರ್ಪ ವೇಳೆಯೊಳಾ
ಭೂರುಹದಗ್ರಶಾಖೆಯೊಳು
ಸೇರಿದ ಬಿಳುವಕ್ಕಿ ಚೀರುವ ದನಿ ಮಿಗೆ
ಕೂರಮಾಗಿರೆ ಕೊನರಿದುದು ೩೩

ಆ ಪರಿ ದನಿ ಯಾವ ಬಳಿಯೊಳು ಪೊಣ್ಮಿದು
ದಾ ಪರಿಸರವನಾರೈದು
ಕೋಪವೆರಸಿ ಕೂರ್ತು ನೋಡೆ ತಾಪಸನಂ
ದಾ ಪಕ್ಕಿಗಸುವಡಗಿದುದು ೩೪

ಹರಣವಳಿದು ಧರೆಗುರುಳಿದ ಪಕ್ಕಿಯ
ಪರಿಯ ನಿಟ್ಟಿಸಿ ಪರಿತಪಿಸಿ
ಇರದೆ ತಾನೆಸಗಿದ ತಪಗಳ ವೈಪರೀಗೆ
ಸರಿಯಿಲ್ಲೆಂದೆಣಿಸಿದನು ೩೫

ಬಳಿಕ ಪಸಿದು ಪಾರ್ವರ ಬೀದಿಯೊಳೊಂದು
ನಿಳಯವ ಪೊಕ್ಕು ನಿಂದಲ್ಲಿ
ಬಳಲಿದೆನೆನಗುಣಬಡಿಸೆಂದಲ್ಲಿರ್ದ
ಕುಲಪಾಲಿಕೆಗುಸುರಿದನು ೩೬

ಒಲಿದೇಕಪತ್ನಿಯೆಂಬೊಳ್ಪಿಸರೆಸೆವಾ
ಕುಲಸತಿಯಳ್ಕರುಗೂಡಿ
ನಲವಿನಿಂದವನಿಗನ್ನವನೀಯುವೆನೆಂದು
ಕೆಲದೊಳು ಕುಳ್ಳಿರಿಸಿದಳು ೩೭

ಅನಿತರೊಳಲ್ಲಿಗವಳ ಗಂಡನೈತರೆ
ಮನವೊಲಿದಿದಿರೆದ್ದು ನಡೆದು
ವಿನಯದಿಂದುಚಿತೋಪಚಾರವೆಸಗಿ ಮಿಗೆ
ಮನದನ್ನನ ಮನ್ನಿಸಿದಳು ೩೮

ಪತಿಸೇವೆಯೊಳಂತು ಪಸಿದ ಪಾರ್ವನ ಮರೆ
ದತಿ ವಿಳಂಬವನಾಚರಿಸೆ
ಸತಿಯರ ಧರ್ಮದ ಸಾರವನರಿಯದೆ
ಖತಿಗೊಂಡು ಮುನಿ ಗಳಪಿದನು ೩೯

ಅತಿ ಘೋರ ತಪವೆಮ್ಮದದನು ನೀನರಿಯದೆ
ಮತಿಗೆಟ್ಟು ಮರುಳಾಗದಿರು
ಪತಿಶುಶ್ರೂಷೆಯ ಬಲ್ಮೆ ಫಲಿಸದಿಲ್ಲಿ
ಯತಿಧರ್ಮದಿರವಿದು ಬೇರೆ ೪೦

ಎಂದು ಗರ್ವದ ಸೊಕ್ಕೇರಿ ನುಡಿದ ಮುನಿ
ಯಂದಮನಾರೈದೊಡನೆ
ಅಂದು ತನ್ನಾಣ್ಮನೊಳನುಮತಿವಡೆದೈ
ತಂದು ನುಡಿದಳಿಂತೆಂದು ೪೧

ಬಳಲಿದೆ ಸಾಕಿನ್ನು ಬಡಿಸಿದನ್ನವನುಂಡು
ತಳುವದೆ ತಪವನಾಚರಿಸು
ಬಿಳುವಕ್ಕಿಯ ಬೀಳಗೆಡಹಿದ ಬಿಂಕವೀ
ಬಳಿಯೊಳು ಬಣ್ಣವಡೆಯದು ೪೨

ಮರುಳೆ ನೀನೀ ಮಾತ ಮರೆ ಧರ್ಮಸೂಕ್ಷ್ಮದೊಂ
ದಿರವ ನೀನರಿತವನಲ್ಲ
ಪರಮ ಪತಿವ್ರತೆಯರ ಬಗೆ ಬೇರಿದು
ಹರಿಹರಾದ್ಯರ ಹವಣಲ್ಲ ೪೩

ಇತರ ಚಿಂತೆಯನುಳಿದೇಕಚಿತ್ತದೊಳಾತ್ಮ
ಪತಿಪಾದ ಭಕ್ತಿಯೊಳೆಸೆವ
ಸತಿಯರೊಲಿದು ಪರಸಿದುದೆಯನುಗ್ರಹ
ಖತಿಗೊಂಡು ನುಡಿದುದೆ ಶಾಪ ೪೪

ವ್ರತಿ ವಾನಪ್ರಸ್ಥ ಯತಿಗಳಿರದೆ ಗೃ
ಹತಿಘೋರ ತಪದಾಚರಣೆ
ಸತಿಯರ ಧರ್ಮಕೆ ಸರಿಯಿಲ್ಲೆಂದು ಗೀ
ಷ್ಪತಿಯಗಸ್ತ್ಯನೊಳಾಡಿದನು ೪೫

ಆ ತ್ರಿಮೂರ್ತಿಗಳಾಮಂತ್ರಿತ ಜಲಸೇಕ
ಮಾತ್ರದೆ ಮೈಮೆ ಮೈದೆಗೆದು
ಅತ್ರಿಯ ಸತಿಗನಸೂಯಾದೇವಿಗೆ
ಪುತ್ರರಾದರು ಪೂರ್ವದೊಳು ೪೬

ಪಾತಿವ್ರತ್ಯದೇಳ್ಗೆಯ ಪರಿಕಿಪೆನೆಂ
ದೋತು ರಾಘವನುಸಿರ್ದೊಡನೆ
ಸೀತೆ ಬೆಂಕಿಯ ಪುಗೆ ಶೀತಳವಾದುದು
ಮಾತಾವುದು ಮತ್ತೆ ಬೇರೆ ೪೭

ಹರನ ಸಾಹಸಕಂಜದೆ ಪಲವಗಲು ಮು
ಪ್ಪುರ ಪಡಿಬರಿಸಿ ಪೋರಿದುದು
ಪುರದೊಳಗಿರ್ಪ ಪುಣ್ಯಾಂಗನೆಯರ ಸ
ಚ್ಚರಿತದ ಸಲಿಗೆಯಿಂದೈಸೆ ೪೮

ಧರ್ಮಗತಿಯ ತಾರತಮ್ಯವ ತಿಳಿವೊಡೆ
ಪೆರ್ಮೆಯ ಬಿಟ್ಟು ಬೇಸರದೆ
ನಿರ್ಮಲಮತಿಯಾಗಿ ನೀ ನಡೆ ಮಿಥಿಲೆಗೆ
ಧರ್ಮವ್ಯಾಧನ ಬಳಿಗೆ ೪೯

ಎಂದೇಕಪತ್ನಿ ನುಡಿಯೆ ಕೇಳಿ ಮುನಿ ಮನ
ದಂದವಳಡಿಗಳಿಗೆರಗಿ
ಅಂದಿನ ಗರ್ವವಳಿದು ಮಿಥಿಲೆಯ ಬಳಿ
ಸಂದನು ಸಂತೋಷದೊಳು ೫೦

ಈ ಪಾತಿವ್ರತ್ಯದೇಳ್ಗೆಯನಾಲಿಸೆ
ಪಾಪಗಳಿದ್ದು ಪಾರುವುವು
ಶ್ರೀಪತಿಯಿವರೆನ್ನ ಸೇವಕರೆಂದುರೆ
ಕಾಪಿಡುವನು ಕರುಣದೊಳು ೫೧

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಮನ್ನಣೆವಡೆದುದೊಂದರ ಮುಂದಣ ಸಂಧಿ
ಸನ್ನುತ ಗುಣಸಂಬಂಧಿ ೫೨

## ಮೂರನೆಯ ಸಂಧಿ

ಶ್ರೀ ಭೂಮಿ ನೀಳಾನಾಥನಿಗನುಪಮ
ವೈಭವ ವೈಕುಂಠಪತಿಗೆ
ಸ್ವಾಭಾವಿಕ ಶುಭಗುಣನಿಧಿಗಂಬುಜ
ನಾಭನಿಗಾನೆರಗುವೆನು ೧

ದೇವ ಮಾನವ ಮೃಗ ನಗರೂಪದ ವಾಸು
ದೇವನ ವಿಭವಂಗಳನು
ಆ ವಿಧದೊಡಲವೆತ್ತನುಸರಿಸುವ ಲ
ಕ್ಷ್ಮೀವಧುವನು ವಂದಿಪೆನು ೨

ಪತಿಪಾದಭಕ್ತೆಯರೆನಿಸಿ [ಬಣ್ಣನೆ]ವೆತ್ತ
ಸತಿಯರೊಲಿದು ಸಮನಿಸುವ
ಪತಿಶುಶ್ರೂಷೆಯ ಬಗೆಯನರಿತು ಸಂ
ಗತಿಗೈದದನು ಬಣ್ಣಿಪೆನು ೩

ಪತಿಯೆ ಪರಮಗುರು ಪತಿಯೇ ದೇವತೆ
ಪತಿಯೇ ಸದ್ಗತಿಯೆಂದು
ಪತಿಯ ಪಾದಾಂಬುಜದೊಳು ಭಕ್ತಿಗೈವುದು
ಸತಿಯರ ಧರ್ಮದ ಸಾರ ೪

ಪತಿಯೊಲವರಿತು ಪತಿಯ ೧ಸೇರುವೆ೧ಯೊಳಿದ್ದು
ಪತಿಯೂಳಿಗಗಳನೆಸಗಿ
ಪತಿಯಾಣತಿಯ ಬಂದಿಯೊಳಡಗಿರ್ಪುದು
ಸತಿಯ ಧರ್ಮದ ಸರ್ವಸ್ವ ೫

ವ್ರತ ಹೋಮ ನಿಯಮೋಪವಾಸ ದಾನಂಗಳಿಂ
ದತಿಶಯವಡೆದ ಧರ್ಮಗಳು
ಪತಿಶುಶ್ರೂಷೆಗೆ ಪಡಿಯಲ್ಲೆಂದಿದ
ರತಿಶಯವರಿತಾಚರಿಪುದು ೬

ಪ್ರತಿಮೆಯ ರೂಪದ ಪಂಕಜನಾಭಗೆ
ನತಿಗೈದು ನಲವೇರುವಂತೆ
ಪತಿಯ ರೂಪದೆ ತನ್ನ ಪಾಲಿಗೆ ಬಂದ ಶ್ರೀ
ಪತಿಯ ಪಾದವ ಭಜಿಸುವುದು ೭

ಪಗಲಿರುಳೆನ್ನದೆ ಪತಿಯಾಣತಿಯೊಳು
ಮೊಗದಿರುಹದೆ ಮೊನೆಗೊಳದೆ
ಬಗೆದೆಗೆಯದೆ ತನ್ನ ಭಾಗ್ಯದ ಫಲವೆಂದು
ಬಗೆದು ಭಕ್ತಿಯೊಳೆಸಗುವುದು ೮

ಮಾಯವನನುಗೊಳಿಸದೆ ಮೈಮರಸದೆ
ಕಾಯ ಮನೋವಚನಗಳ
ಆಯಸದಿಂದಳವಳಿಯದೆ ಪತಿಯನು
ಪಾಯದಿಂದುಪಚರಿಸುವುದು ೯

೧. (ಗ) ಸೇವೆ.

ಒಲಿದು ಪತಿಯ ಮನದೊಲವನಾರೈದು ತಾ
ನಲಸಿಕೆಗೊಳದನುಸರಿಸಿ
ಕುಲಸತಿಯರ ಧರ್ಮ ಕೊನರಿಡೆ ನೇಹವ
ನೆಲೆಗಾಣಿಸಿ ನೆಗಳುವುದು ೧೦

ಇದೊ ನಿನ್ನ ಪತಿಬಂದನೆಂಬ ನಲ್ನುಡಿ ಕೇಳಿ
ಮುದವೇರಿ ಮೊಗಸಿರಿವಡೆದು
ಕದುಬಿಯುವನ ಸೇವೆಗನುವಪ್ಪ ವಸ್ತುವ
ನೊದವಿಪುದುರ್ವುಗೊಂಡೊಡನೆ ೧೧

ಇಂತು ನೋಡುವೆನಿಂತು ನುಡಿವೆನಿಂತೆಸಗುವೆ
ನಿಂತು ಸೇರುವೆನಿಂತಿರುವೆ
ಇಂತು ಮನ್ನಿಪೆನಿಂತು ಮನಗರಗಿಪೆನೆಂದು
ಚಿಂತಿಪುದೇಕಚಿತ್ತದೊಳು ೧೨

ಮನೆವಾಳ್ತೆ ಮೆಯ್ಯಲಸಿಕೆ ಮಕ್ಕಳ ಮುದ್ದು
ಬಿನದಂಗಳನು ಬಿಟ್ಟಿದ್ದು
ದನಿಗೇಳದ ಮುನ್ನ ತಾನಿದಿರ್ಗೊಂಡವ
ನನುವರಿತನುಸರಿಸುವುದು ೧೩

ಸೋಗೆ ಮುಗಿಲ ಕಂಡು ಸೊರ್ಕುವಂದದೊಳನು
ರಾಗರಸದ ಲಹರಿಯೊಳು
ಬಾಗಿಲಿನೊಳವೊಕ್ಕು ಬಂದನೆಂಬುದುಮತಿ
ವೇಗದೊಳಿದಿರುಗೊಳುವುದು ೧೪

ತಳುವದಚ್ಯುತನಿಗರ್ಚನೆಗೈವಂತಡಿ
ದೊಳೆದು ತೊಡೆದು ದುಗುಲದೊಳು
ಬಳಿಕ ನಡೆದುಬಂದ ಬಳಲಿಕೆಗಳೆವಂ
ತೊಳುವಾತುಗಳನೊಡರಿಪುದು ೧೫

ಪಸಿವಲಸಿಕೆಗಳ ಪರಿದು ಕೆಲದೆ ನಿಂದು
ನಸುನಾಣ್ಚುತ ನಲವಿನೊಳು
ಒಸೆದೊಲವರಿತೊಯ್ಯನುಚಿತೋಪಚಾರವ
ನೆಸಗುವುದೇಕಚಿತ್ತದೊಳು ೧೬

ಆವ ಪರಿಯ ದೇಸಿಯಾಣ್ಮಗೆ ಬಗೆವರ್ಪು
ದಾ ವಿಧಗಳನಾರೈದು
ಭಾವಿಸಿ ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ
ಭಾವವ ಬಂದಿಗೊಳುವುದು ೧೭

ಇಷ್ಟದೇವತೆಯಿವನೆಂದು ಪತಿಯೊಳು ವಿ
ಶಿಷ್ಟ ಭಾವವ ಬಗೆಗೊಳಿಸಿ
ಕಷ್ಟ ಕಾರ್ಪಣ್ಯವ ಕಾಣಿಸಿ ಕನಲದೆ
ತುಷ್ಟಿವಡಿಪುದೊಲವರಿತು ೧೮

ಹಿತವಿದು ಶಾಸ್ತ್ರವಿಹಿತವಿದು ಮನಕೆ ಸ
ಮ್ಮತವಿದೆಂದೆಂಬ ಮರ್ಮವನು
ಮತಿಯೊಳೆಣಿಸಿ ಮನದನ್ನನ ಸೇವೆಗು
ಚಿತ ವಸ್ತುಗಳನೆ ಚಿಂತಿಪುದು ೧೯

ಮನೆವಾಳ್ತೆಯೆಸಗುವ ಮರ್ಯಾದೆಯನು ತ
ನ್ನಿನಿಯನಿಗಿಂತೆಂದರುಹಿ
ಮನದೊಲವರಿತೊಡಬಟ್ಟುದನೊಡರಿಸಿ
ಮನಬಾರದುದನು ಮರೆವುದು ೨೦

ಗ್ರಾಸ ವಸನ ಪರಿಕರಮಿಲ್ಲದಿರೆ ಕ
ಟ್ಟಾಸುರದೊಳು ಗಾಳುಗೆಡದೆ
ಓಸರಿಸುತ್ತೊಯ್ಯನೇಕಾಂತದೊಳೊಮ್ಮೆ
ಬೇಸರಿಸದೆ ಬಿನ್ನವಿಪುದು ೨೧

ಗನ್ನಗದುಕುಗಳ ಕಳೆದು ಗರ್ವವ ಬಿಟ್ಟು
ಹನ್ನಸಗಳನು ಹಬ್ಬಿಸದೆ
ತನ್ನ ಬಾಳಿಕೆ ಬಡತನದ ಬಗೆಯನೆಲ್ಲ
ಬಿನ್ನವಿಪುದು ವಿನಯದೊಳು ೨೨

ಮುನಿದಿನಿಯನ ಕಡುಮೊನೆವಾತಿಗೆ ನೊಂದು
ಕನಲದೆ ಗಾರುವಡೆಯದೆ
ತನುಮನಗಳ ತನ್ನ ಬಸಗೈದು ದೈನ್ಯವ
ಕೊನರಿಸಿ ತಂಪುಗೊಳಿಪುದು ೨೩

ಪವಣಿಲ್ಲದೆ ಪಲವಗೆ ಮಾತನಾಡದೆ
ಕವೆ ಕೋಡುಗಳನು ಕಾಣಿಸದೆ
ನೆವವಿಲ್ಲದೆ ನೆಗ್ಗಿ ನೆಲಕಿಳಿದೊರಲದೆ
ಸವನಿಸುವುದು ಸಂತಸವನು ೨೪

ಆರಿ ಬೊಬ್ಬಿರಿ[೨] ದಾರಭಟಿ[೨] ಯನಾಚರಿಸದೆ
ಪಾರದೆ ಪರಸಹಾಯವನು
ಪೋರದೆ ಪುರ್ಬುಗಂಟಿಕ್ಕದೆ ಪುಸಿಯದೆ
ಸೇರಿ ಸೇವೆಯನೆಸಗುವುದು ೨೫

ನೋಯಿಸಿ ನುಡಿಸದೆ ನೋಡದುಚಿತಗಳ
ಬೀಯವೆಸಗಿ ಬೇಸರಿಸದೆ
ಆಯವರಿತು ತರಲರಿಯದ ಪತಿಯೊಳ
ಸೂಯೆಗೊಳದೆ ಸುಖಿಸುವುದು ೨೬

ಪೆರತೊಂದು ನೆವದೊಳು ಬಿಸುಪೇರಿದ ಕೋಪ
ದುರುಬಿನಿಂದೊದರುವ ಪತಿಗೆ
ತರಿಸಂದು ತಾನಿದಿರುತ್ತರವೀಯದೆ
ಪೆರದೆಗೆವುದು ಭೀತಿವಡೆದು ೨೭

ಪತಿಯ ಬುದ್ಧಿಗೆ ಮೋಸ ಬಂದೊಡಮದರಿಂದ
ಖತಿಗೊಂಡು ಗಲಗುವಡಿಸದೆ
ಇತರರರಿಯದಂತೇಕಾಂತ ಸಮಯದೊ
ಳತಿಭಕ್ತಿಯಿಂದರುಹುವುದು ೨೮

ಅನುಚಿತ ಕಾರ್ಯಮನವನೊಡರಿಸೆ ಕಂಡು
ನಿನಗಿದು ನೀತವಲ್ಲೆಂದು
ನೆನೆಯಿಪೆನಲ್ಲದೆ ನೇಮಿಪುದಿಲ್ಲೆಂದು
ವಿನಯವೆರಸಿ ಬಿನ್ನವಿಪುದು ೨೯

೨. (ಗ) ಆರ್ಭಟೆ.

ಅತಿ ಭೀತಿಯಿಂದಸುಗೆಟ್ಟು ಪಿಂತೆಗೆಯದೆ
ಮಿತಿ ಮೀರಿ ಮೇಲುವರಿಯದೆ
ಇತರ ಜನರು ತನ್ನನೇಳಿಸಿ ನಗದಂತೆ
ಪತಿಸೇವೆ ಗೈದು ಬಾಳುವುದು ೩೦

ಪಿರಿಯರ ಮಗಳೆಂದು ಬಿಜ್ಜೆ[೧]ಗಲಿತೆ[೧]ನೆಂದು
ವರರೂಪವತಿ ತಾನೆಂದು
ಪರಮ ಪಾವನೆಯೆಂದು ಬರಿದೆ ಬೆರೆಯದನು
ಸರಿಸುವುದಾತ್ಮವಲ್ಲಭನ ೩೧

ವ್ರತವೆಸಗುವೆನೆಂದು ಮಿಂದು ಬಂದಿಹೆನೆಂ
ದತಿಶಯದಿಂದನುಗೆಡದೆ
ಪತಿಯ ಪಡಿಗ ಪಾವುಗೆಗಳ ಪಿಡಿದು
ನ್ನತಿವಡೆವುದು ನಾರಿಯರು ೩೨

ಗರತಿಗೆಲಸವೆಂದು ಗೆಲ್ಲಗೊಂಡುರ್ಬದೆ
ಪರಿಚಾರವೆಂದು ಪಳಿಯದೆ
ಪಿರಿದು ಕಿರಿದುಗಳ ಭೇದವನೆಣಿಸದೆ
ನಿರವಿಸಿದುದನೆಸಗುವುದು ೩೩

ಮುಡಿಯೊಳು ಪೊತ್ತು ಮುದ್ದಿಸಿದೊಡೇನಡಿಗಳಿಂ
ಪೊಡವಿಗಿಟ್ಟೊರಸಿದೊಡೇನು
ಒಡೆಯನಿಟ್ಟಂತಿರ್ಪುದೊಡವೆಗುಚಿತಮೆಂದು
ನಡೆವುದು ನಲ್ವೆಂಡಿರೊಲಿದು ೩೪

೧. (ಕ, ಗ) ಗಲಿವೆ.

ತನ್ನ ತವರುಮನೆಗೆಲ್ಲ ತಾನೊಡತಿಯೆಂ
ಬುನ್ನತಿವಡೆವುದರಿಂದ
ತನ್ನಿನಿಯನಿಗೊಳಿಗದವಳಪ್ಪುದು ಸಂ
ಪನ್ನತೆಯೆಂದು ಬಗೆವುದು ೩೫

ಆರಯ್ಯೆ ತಂದೆತಾಯಾದೊಡಮೇನುಪ
ಕಾರಿಗಳಾದೊಡಮೇನು
ಆರಾದೊಡಮಾತ್ಮಪತಿಗಾಗದವರನು
ದೂರಮೆನಿಸಿ ತೊರೆದಿಹುದು ೩೬

ಛಲವಿಡಿದೊಂದನೆಳಸಿ ಚಾರಿವರಿಯದೆ
ನೆಲೆವಿಡಿದೊಂದರೊಳಿರದೆ
ನೆಲೆನಿಂದ ನೀರ ತೆಪ್ಪದವೋಲು ತೆಗೆದೆಡೆ
ಗಲೆಗೊಳದನುಸರಿಸುವುದು ೩೭

ಕೊನಬಾದೊಡಮೇನು ಕೂರ್ಮೆಯಾದೊಡಮೇನು
ಬಿನದವಾದೊಡಮೇನು ಬೇರೆ
ಇನಿಯನೇಕಾಂತದೊಳೆಸಗಿದುದನು ತನ್ನ
ಮನದೊಳೆ ಮರೆಮಾಜುವುದು ೩೮

ಸೆಜ್ಜೆವನೆಯ ಸೇವೆಯೊಂದನುಳಿದು ಮಿ
ಕ್ಕುಜ್ಜುಗ ಗೈವ ವೇಳೆಯೊಳು
ಸಜ್ಜಾತಿ ಸತಿಯರಿನಿಯರ ಸನ್ನಿಧಿಯೊಳು
ಲಜ್ಜೆವೆರಸಿ ರಂಜಿಪುದು ೩೯

ಪರದೇವತೆಯೆಂದು ಭಕ್ತಿಗೈವುದು ಬಲು
　ದೊರೆಯೆಂದುಪಚರಿಸುವುದು
ಗುರುವೆಂದು ವಿನಯಗೂಡಿರ್ಪುದಿನಿಯನೊಳು
　ನೆರವೆಂದು ನೆರೆ ನಂಬುವುದು　೪೦

ಮುಳಿದಲ್ಲಿ ಮುಳಿದೆಳಸಿದುದನೆಳಸಿಯಲ್ಲ
　ಗಳಿದುದೆಲ್ಲವನಲ್ಲಗಳಿದು
ಬಳಿವಿಡಿದಿನಿಯನ ಪಾದಾರವಿಂದದ
　ನೆಳಲಂತೆ ನೇಮದೊಳಿಹುದು　೪೧

ಕೆಳೆಗೊಳುವುದು ಸೇವೆಗೈವುದು ನಲ್ಲನ
　ಬಳಿ ಸಲುವುದು ಭಜಿಸುವುದು
ಒಳಗುವೇಳುವುದೊಡನಾಡುವುದೊಲಿದೊಲ್ಮೆ
　ಗೆಳಸುವುದೇಕವೆನಿಪುದು　೪೨

ಗಣಿಸುವುದವನರಿವೆಯ [೪]ಕೌಶಲಗಳ[೪]
　ಗುಣಿಸುವುದವನ ಗುಣಗಳ
ಎಣಿಸುವುದವನೊಲಿದೆಸಗುವ ನಲ್ಮೆಯ
　ತಣಿಸುವುದಿಂತು ಚಿತ್ತವನು　೪೩

ಕೇಳುವುದವನ ಕೀರ್ತಿಯನಾಲಿಪರಿಗೆ
　ಪೇಳುವುದವನ ಪೆರ್ಮೆಯನು
ಮೇಳಗೊಳುವುದವನೊಳು ಸೇರೆ ಮೀರದೆ
　ಬಾಳುವುದಿಂತು ಭಾವೆಯರು　೪೪

೪. (ಗ) ಮಿಗೆ ಲೀಲೆಯ.

ಈ ತೆರದೊಳು ನಡೆದಿನಿಯನ ಮನಕೆ ಸಂ
ಪ್ರೀತಿದೋರಿಸುವ ಪೆಂಡಿರಿಗೆ
ಪಾತಿವ್ರತ್ಯದ ಬಗೆ ಬಣ್ಣವೇರಿ ವಿ
ಖ್ಯಾತಿ ಬೆಳೆದು ಬಿತ್ತರಿಪುದು ೪೫

ತಳುವದಡವಿಯೊಳು ತನ್ನ ತಪ್ಪಿಸಿ ಪೋದ
ನಳನೊಳು ನಲ್ಮೆಯನೆಸಗಿ
ಇಳೆಯ ಪೆಂಡಿರೊಳೆಣೆಯಿಲ್ಲದ ಕೀರ್ತಿಯ
ತಳೆದೆಸೆದಳು ದಮಯಂತಿ ೪೬

ಕಾನನದೊಳು ಕಡುಕಷ್ಟವಡೆದು ನೋವು
ಬೇನೆಗಳಿಗೆ ಬೇಸರದೆ
ಸಾನುರಾಗದೊಳನುಸರಿಸಿ ತನ್ನಿನಿಯನ
ಜಾನಕಿ ಜಸವ ಪಡೆದಳು ೪೭

ದ್ಯೂತಕೇಳಿಯೊಳಜ್ಞಾತವಾಸದೊಳಂದು
ಧಾತುಗುಂದದೆ ಪಾಂಚಾಲಿ
ಓತು ಪಾಂಡವರನೊಲಿಸಿ ಹದಿಬದೆಯರ
ಚೈತಲೆವಣಿಯೆನಿಸಿದಳು ೪೮

ಇಂತು ವಸಿಷ್ಠನೊಳಿರ್ದಳರುಂಧತಿ
ಇಂತತ್ರಿಯೊಳನಸೂಯೆ
ಇಂತಗಸ್ತ್ಯನೊಳು ಲೋಪಾಮುದ್ರೆ ಪೆರತೇ
ನಿಂತಿರ್ದರೆಲ್ಲ ಸಾಧ್ವಿಯರು ೪೯

ಇಂತು ನಡೆದು ಪತಿಗಂತರಂಗೆಯರಪ್ಪ
ಕಾಂತೆಯರಿಗೆ ಕಯ್ಯೊಡನೆ
ಸಂತಾನ ಸೌಭಾಗ್ಯ ಸಂಪತ್ತುಗಳನು ಶ್ರೀ
ಕಾಂತನು ಕೈಸೇರಿಸುವನು ೫೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಮನ್ನಣೆವಡೆದೆಸೆದುದು ಮೂರನೆಯ ಸಂಧಿ
ಸನ್ನುತ ಗುಣಸಂಬಂಧಿ ೫೧

# ನಾಲ್ಕನೆಯ ಸಂಧಿ

ನಂದನ ಮೋಹದ ನಂದನ ಸನಕಸ
ನಂದನವಂದಿತ ಚರಣ
ಮಂದರಧರ ಮಾಧವ ಗೋವಿಂದ ಮು
ಕುಂದ ದೇವನೆ ಸಲಹೆನ್ನ ೧

ಎಂದೆಂದುಮಿನಿಯನೊಳಿರೆ ಹೊರೆಯಿಲ್ಲದ
ಚಂದದಿಂದೆರ್ದೆಯೊಳು ನಿಂದ
ಇಂದುಸೋದರಿಗಿಂದೀವರ ಮಂದಿರೆ
ಗಿಂದಿರೆಗಿಂದು ವಂದಿಪೆನು ೨

ಅತ್ತೆ ಮಾವನು ಮೊದಲಾದ ಪೂಜ್ಯರೊಳನು
ವೃತ್ತಿಗೈದಾತ್ಮವಲ್ಲಭನ
ಚಿತ್ತವರಿತು ಸೇವೆಯೆಸಗುವ ಸತಿಯರ
ವೃತ್ತವ ಬಿತ್ತರಿಸುವೆನು ೩

ತನ್ನ ಪೆತ್ತವರು ಮಿಗಿಲು ತನ್ನವರೊಳು
ತನ್ನ ಪೆತ್ತವರಿಗೆ ಮಿಗಿಲು
ತನ್ನಿನಿಯನ ಪೆತ್ತವರೆಂದವರನು
ಮನ್ನಿಸುವುದು ಮರುಕದೊಳು ೪

ಗಂಡನ ಬಲ್ಮೆಯೊಳತ್ತೆಮಾವಂದಿರ
ಗಂಡನನವರ ಬಲ್ಮೆಯೊಳು
ಅಂಡಲೆಯದೆಯನಿಬರನನುಸರಿಸುವ
ಪೆಂಡಿರ ಜಸ ಪೆರ್ಚುವುದು ೫

ಅತ್ತೆಮಾವಂದಿರೊಳಡಕಮೆನಿಸಿ ಪತಿ
ಚಿತ್ತದಿರವ ಸೆರೆಗೊಂಡು
ಪೆತ್ತ ತಾಯನು ಪೆಸರೆನಿಸುವುದಿಳೆಯೊಳ
ಗುತ್ತಮನಾರಿಯರೊಲಿದು ೬

ಎಂತು ಕಾಪಿಟ್ಟೊಡಮೇನ ಬೆಸಸಿದೊಡ
ಮಂತರಂಗದೊಳನುಗೆಡದೆ
ಚಿಂತಿಸಿಯಳಲದೆ ಸಿಡಿಮಿಡಿಗೊಳದತಿ
ಸಂತೋಷದೊಳು ಸಮ್ಮತಿಪುದು ೭

ಪೊತ್ತು ಪೊತ್ತಿಗೆ ಪೋಗಿ ಪೊಡಮಟ್ಟು ನಸು ತಲೆ
ಗುತ್ತಿ ನಾಣ್ಚುತ ನಲವಿನೊಳು
ಒತ್ತಿನೊಳುಪಚರಿಸುತ್ತಿರ್ದವರೊಲಿ
ದಿತ್ತುದರಿಂದ ತಣಿವುದು ೮

ಉತ್ತರಕುತ್ತರವಿತ್ತಿದಿರಾಡದೆ
ಒತ್ತಿ ನುಡಿಯದೊತ್ತರಿಸದೆ
ಮತ್ತವರಿತ್ತಾಣತಿಯ ಮಸ್ತಕದೊಳು
ಪೊತ್ತು ಪೂಜಿಸುತೆಸಗುವುದು ೯

ಅತ್ತಿತ್ತ ನೋಡದೆ ಅವಮತಿಗೈಯದೆ
ಮತ್ತೆಯಾಗದೆ ಮರೆತಿರದೆ
ಅತ್ತೆಮಾವಂದಿರಾಣತಿಯನಾಲಿಪುದೇಕ
ಚಿತ್ತದೊಳೇಕಪತ್ನಿಯರು ೧೦

ಕೂಗಿ ನುಡಿಯದೆ ಕೊಬ್ಬದೆ ಕೋಪವೆಸಗದೆ
ಮೂಗುವಡದೆ ಮೋಡಿಗೊಳದೆ
ಲೋಗರುಚಿತಮೆನಲೊಯ್ಯನೊಯ್ಯನೆಯನು
ವಾಗಿ ನುಡಿವುದವರೊಡನೆ ೧೧

ಮುದುಪರರಿಯರೆಂದು ಮುಂದುಗೆಟ್ಟಾಡದೆ
ಚದುರರಲ್ಲೆಂದು ಜರೆಯದೆ
ಇದು ಹಿತವೆಂದವರಿತ್ತುಪದೇಶವ
ನೆದೆಗೊಳಿಸುವುದೆಸಗುವುದು ೧೨

ಪಾಡುವಡಿಪರೆಂದು ಪರಿಹರಿಸದೆ ಚುನ್ನ
ವಾಡದೆ ಮನೆವಾಳ್ತೆಯನು
ಮಾಡುವುದವರ ಸಮ್ಮತದಿಂದ ಸತಿಯರೊ
ಳೀಡುಜೋಡಿಲ್ಲೆನಿಸುವುದು ೧೩

ಮಾನಗೊಳದೆ ಮೈಲಿಗೆಯೆಂಜಲೆಂದನು
ಮಾನಗಯ್ಯದೆ ಮನವೊಲಿದು
ಬೇನೆಬಿದ್ದಿರೆ ಪೇಸದೆ ಬೇಸರದೆ ಸ
ನ್ಮಾನದೊಳುಪಚರಿಸುವುದು ೧೪

ಹಮ್ಮುಗೊಳದೆ ಹದವಳಿಯದೆ ಮಾವನ
ಸಮ್ಮುಖದೊಳು [1]ಮಂಡಿಸದೆ[1]
ಹೆಮ್ಮೆವಾತಾಡದೆ ಹೆಕ್ಕಳಿಸದೆ ಚಿತ್ತ
ಸಮ್ಮತಿಯರಿತೆಸಗುವುದು ೧೫

ಆವ ವೇಳೆಯೊಳಾವುದ[2]ನುಗೊಳ[2]ಲೆಳಸಿದ
ರಾ ವೇಳೆಯೊಳವನೆಲ್ಲ
ಸಾವಧಾನದೊಳು ಸಂಗತಿಗೊಳಿಸುವುದಿಷ್ಟ
ದೇವತೆಯೆಂದೆಣಿಸುವುದು ೧೬

ಒತ್ತಿನೊಳಿದ್ದೊಲವರಿತಡಿಗಳನೊಯ್ಯ
ನೊತ್ತುವುದೊಂದುವೆರೆವುದು
ಸುತ್ತುಗೆಲಸವ ಸೊಲ್ಲಿಸದೆಸಗುವುದಿಂ
ತತ್ತೆಯನನುವರ್ತಿಸುವುದು ೧೭

ಬೀಸುವುದೊಮ್ಮೆ ಪಿಡಿದು ಬಿಜ್ಜಣಿಗೆಯ
ಪಾಸುವುದೊಮ್ಮೆ ಪಾಸಿಗೆಯ
ಸೂಸುವುದೊಮ್ಮೆ ಪನ್ನೀರ ಸುಗಂಧವ
ಪೂಸುವುದೊಮ್ಮೆ ಪೂಜುವುದು ೧೮

ತಾನೆ ನೀರೆರೆದು ಮಿಾಯಿಸುವುದು ಮತ್ತೊಮ್ಮೆ
ತಾನೆ ತೊಡಿಗೆ ತೊಡಿಸುವುದು
ಏನೆಸಗುವೆನೆಂದಿದಿರೊಳಿದ್ದೆಲ್ಲವ
ಸಾನಂದದೊಳು ಸಮನಿಪುದು ೧೯

೧. (ಗ) ವಾದಿಸದೆ. ೨. (ಕ) ನುಣ.

ಉಡುಗೆ ತೊಡಿಗೆಯೂಟ ಮಾಹದೊಳತಿಶಯ
ವಡುವೆನೆಂದೊಡಲು ಮರೆಯದೆ
ಪಡಿಯಹೆನೆಂದು ಬಗೆಯದವರಿಗೆ ತಾನು
ಕಡಮೆಯೆನಿಸಿ ಕಾಣಿಸುವುದು ೨೦

ಕುತ್ತವೆಣಿಸಿ ಕೋಪಗೊಳದೆ ಕೂರ್ತವರೆಮ್ಮ
ತೆತ್ತಿಗರೆಂದೆರ್ದೆಗೊಳಿಸಿ
ಅತ್ತಿಗೆ ನಾದಿನಿಯರೊಳಂತರಂಗವ
ಪತ್ತುಗೆಗೊಳಿಸಿ ಬಾಳುವುದು ೨೧

ಅಂದಂದಿಗಿನಿಯನ ಮೆಯ್ಯಾರೈಕೆಯ
[೧]ನೆಂದೆಂದಿಗು[೧] ಬೇಸರದೆ
ಒಂದೆ ನಾವೆಯೊಳೇರಿದವರಂತೆ ಸವತಿಯ
ರೊಂದೆನಿಸಿರ್ಪುದೊಪ್ಪದೊಳು ೨೨

ಪೋರದೆ ಪುರುಡಿಸದೊರ್ವರೊರ್ವರೊಳನು
ಸಾರಮೆನಿಸಿ ಸಮ್ಮತದೊಳು
ಓರಗೆಗೆಳದಿಯರೊಂದುವೆರಸುವಂ
ತೋರಗಿತ್ತಿಯರೊಂದಿಹುದು ೨೩

ತಂದೆ ತಾಯನು ಬಿಟ್ಟು ತನ್ನ ಕೈಗೆಡೆಯಾಗಿ
ಬಂದ ಸೊಸೆಯರ ಬಾಧಿಸದೆ
ಅಂದಂದಿಗುಡಿಗೆ ತೊಡಿಗೆಯೂಟ ಮಾಹಗ
ಳಿಂದ ಸಂತಸಗೊಳಿಸುವುದು ೨೪

೧. (ಖ) ಪಿಂದೆಗೆಯದೆ.

ಬಸವಳಿಸದೆ ಪಳಿಯದೆ ಭಂಗವಡಿಸದೆ
ಹಸಗೆಡಿಸದೆ ಹದುಗಿಸದೆ
[೪]ಬಸಿರೊಳು[೪] ಬಂದ ಪೆಣ್ಮಕ್ಕಳ ಮರುಕವ
ಸೊಸೆಯರಿಡೆಯೊಳಿಸಗುವುದು ೨೫

ಬಸಿರನಿಟ್ಟಸಿಯುಣಬಡಿಸುವುದೊಳುಮುಡಿ
ಯೆಸಕವರಿತು ಮಿಾಯಿಸುವುದು
ಒಸೆದು ಸಿಂಗರಿಸುವುದೊಲಿದು ನೋಡುವುದಿಂತು
ಸೊಸೆಯರ ಸುಖಬಡಿಸುವುದು ೨೬

ಒಲಿದು [೫]ಬಸಿರಿ[೫]ಯಾವಾವುದ ಬಯಸುವ
ಳಲಸದೆಯವನೆಲ್ಲವನು
ಪಲವಗೆಯೊಳು ಪವಣಿಸಿಯವಳಿಚ್ಛೆಯ
ಸಲಿಸಿ ಸಂತಸಗೊಳಿಸುವುದು ೨೭

[೬]ಅಲೆಗೈವ ಬಗೆಯನರುಹಿ ತಂದೆ ತಾಯನು
ಪಲಬಗೆಯೊಳು ಬಳಲಿಸದೆ
ನಲವಿನೊಳಿನಿಯನ ನಲ್ಮೆಯನೊರೆವುದು
ಕುಲದೊಳೊಗೆದ ಕುವರಿಯರು[೬] ೨೮

ಅಕ್ಕತಂಗಿಯರಣ್ಣತಮ್ಮಂದಿರು [೭]ತಮ್ಮ[೭]
ಮಕ್ಕಳು ಮೊಮ್ಮಕ್ಕಳೊಳು
ಕಕ್ಕಸಗೊಂಡು ಕನಲಿ ಕಾದದೆ ಮಿಗೆ
ಯಕ್ಕರನನುಗೊಳಿಸುವುದು ೨೯

೪. (ಖ) ಬಸುರೊಳು. ೫. (ಖ) ಬಸುರಿ. ೬. (ಗ) ಪ್ರತಿಯಲ್ಲಿ ಈ ಪದ್ಯ ಇಲ್ಲ. ೭. (ಖ) ತನ್ನ.

ತಾಯ ತಂದೆಯ ದೆಸೆ ಗಂಡನ ದೆಸೆಯಿಂ
ಬೀಯೆರಡಿರವಿನೊಳೆಸೆವ
ಕಾಯ ಬಾಂಧವರ ಕಣ್ಣೆರಡೆಂದು ಕಾಂಬುದ
ಸೂಯೆಗೊಳದೆ ಸುಖಿಸುವುದು ೩೦

ಬುದ್ಧಿಗಲಿಯಲರಿಯದ ಪಸುಮಕ್ಕಳ
ಮುದ್ದಿಸಿ ಮುದವೇರುವುದು
ಬುದ್ಧಿಗಲಿವ ಕಾಲದೊಳು ಪೊಯ್ದು ಬಯ್ದು ನ
ಲ್ಬುದ್ಧಿಗಳನೆ ಬೋಧಿಸುವುದು ೩೧

ಓದುಗಲಿವ ಮಕ್ಕಳಿಗೂಟ ಮಾಹವ
ನಾದರದಿಂದನುಗೊಳಿಸಿ
ಓದಿಸುವರು ಕೊಂಡು ಬಯ್ದೊಡಮವರನು
ಮೂದಲಿಸದೆ ಸಮ್ಮತಿಪುದು ೩೨

ಬಸಿರೊಳು ಬಂದ ಕುವರನಾದೊಡಮೇನು
ಪೊಸವರೆಯದ ಪುರುಷನನು
ಒಸೆದು ನಿಟ್ಟಿಸಿಯೊಡಲೋಜೆಯೊಳ್ಪುಗಳ ಬ
ಣ್ಣಿಸಲಾಗದು ಭಾವೆಯರು ೩೩

ಗುರು ಪಿರಿಯನು ತಂದೆ ಸೋದರನಣುಗನು
ಪೊರೆವರಸಾದೊಡಮೇನು
ಬರಿಸ ಪನ್ನೆರಡಾದ ಬಳಿಕಾರೊಳವೊಂದು
ವೆರಸದೆ ಪೆರದೆಗೆದಿಹುದು ೩೪

ಪಸಿದು ಬಳಲಿ ಪರದೇಸಿ [೮]ಬಾಯ್ವಿಡೆ[೮] ಕಂ
ಡಸಮಯವೆಂದಬ್ಬರಿಸದೆ
ಬಿಸುವಾತಿನೊಳು ಬೇಯಿಸದಿದ್ದ ಮಾತ್ರವ
ನೊಸೆದೀವುದೊಳ್ವಾತಿನೊಳು ೨೫

ನೆರೆಮನೆ ಮುಮ್ಮನೆ ಗರತಿಯರೊಲಿದೊಮ್ಮೆ
ಬರೆ ತನ್ನ ಮನೆಯ ಬಾಗಿಲಿಗೆ
ಕರೆದಾದರಿಸಿ ಕೈಲಾಪ ತೆರದಿ ಸ
ತ್ಕರಿಸಿ ಭರದೆ ಕಳುಪುವುದು ೨೬

ಮೊನೆಗಾತಿ ಮುಗುದೆ ಮುಸುಂಡಿಯಾಗಲಿ ನೆರೆ
ವನೆ ಗರತಿಯ ನೀಕರಿಸದೆ
ಮನೆಗೆ ಬಂದೆಡೆಯೊಳು ಮನ್ನಿಸಿ ಮನಮೊಲಿ
ದನುವರಿತಾದರಿಸುವುದು ೨೭

ತನ್ನ ಮನೆಯ ಮದುವೆಯೊಳು ಮಂಗಲದೊಳು
ತನ್ನ ಬಾಂಧವರೆಲ್ಲರನು
ಅನ್ನಪಾನಂಗಳಿಂದಾದರಿಪುದು ಮತ್ತೆ
ಪೊನ್ನುಡೆಯಿತ್ತು ಪೂಜುವುದು ೨೮

ಅರಿಯದೂಳಿಗವೆಣ್ಗಳು ತಪ್ಪುಗೈದಡಿ
ಗೆರಗಿದೊಡನೆ ಮನಗರಗಿ
ಮರೆತದನೆಲ್ಲವ ಮಕ್ಕಳೊಳೆಸಗುವ
ಮರುಕವೆರಸಿ ಮನ್ನಿಪುದು ೨೯

೮. (ಕ, ಖ) ಬಾಯಿಡೆ.

ಮುಳಿದವರೊಳು ಮೊಗವಂಟ ಮುಗ್ಗದೆಯಾಡಿ
ಪಳಿವವರೊಳು ಪೋರುಗೊಳದೆ
ಮುಳುಗಿಯೆಚ್ಚವರೊಳು ಮೂದಲೆಯೆಸಗದೆ
ಒಳುವೆಂಡಿರೊಳ್ಪುವಡೆವುದು ೪೦

ಕಂಡ ಕಂಡವರೊಳು ಕಡುದೈನ್ಯವಡೆಯದು
ದ್ದಂಡೆಯೆನಿಸಿ ತಾನಿರದೆ
ಗಂಡನ ಘನತೆಯೆಂತಂತು ಪೆರ್ಮೆಯ ಕೈ
ಕೊಂಡೆಸೆವುದು ಕೋವಿದೆಯರು ೪೧

ಕೇಣಗೊಂಡವರೆಂತು ಕೆಣಕಿ ನೋಡಲಿ ಮತ್ತೆ
ಮಾಣಲಿ ಮಮತೆಯುಳ್ಳವರು
ಊಣೆಯವಿಲ್ಲದಂತೊಳ್ನಡತೆಯೊಳಿರ್ದು
ಕಾಣಿಸುವುದು ಘನತೆಯನು ೪೨

ಬಸವಿಯರೊಳು ಪಾತಕಿನಿಯರೊಳು ಮ
ತ್ತ ಸತಿಯರೊಳು ಕೆಳೆಗೊಳದೆ
ಪೊಸತಿಲ ಪೊರಗಡಿಯಿಡದೊಳ್ವೆಂಡಿರ
ಜಸವಳ್ಳಿ ಜಗವ ಪರ್ಬುವುದು ೪೩

ಮಾಲೆಗಾತಿಯ ಮಡಿವಳತಿಯ ಕಣಿತಿಯ
ಸೂಲಗಿತ್ತಿಯ ಸೂಳೆಯನು
ಆಲೋಚನೆಗಂತರಂಗಕೆ ಬರಿಸದೆ
ಮೇಲರಿತಿಹುದು ಮೇರೆಯೊಳು ೪೪

ಬಸಿರಿಯ ಬಾಣಂತಿಯ ಬೇನೆವಡೆದರ
ಹಸುಮಕ್ಕಳ ಹಯನುಗಳ
ಬಸವಳಿಸದೆ ಬಳಲಿಸದೆ ಬಯ್ಯದೆ ಬಗೆ
ಯೊಸೆದುಚಿತದೊಳೋವುವುದು ೪೫

ನೀತಿ ವರ್ತನಗಳ ನಿಯಮಿಪ ಪಿರಿಯರ
ಮಾತುಗಳನು ಮನಗೊಳಿಸಿ
ಆ ತೆರದೊಳು ನಡೆದವನಿಯೊಳಧಿಕ ವಿ
ಖ್ಯಾತಿವಡೆವುದು ಕಾಂತೆಯರು ೪೬

ತಡೆಯದೆಳಮೆಯೊಳು ತಂದೆತಾಯಿಗಳಿಗೆ
ನಡುವರೆಯದೊಳು ನಲ್ಲನಿಗೆ
ಕಡುಮುದುಪಾದ ಕಾಲದೊಳು ತನ್ನಣುಗರಿ
ಗಡಕಮೆನಿಪುದಬಲೆಯರು ೪೭

ಈ ರೀತಿಯೊಳಿರ್ಪುದೇಕಪತ್ನಿಯರಿಗೆ
ನಾರಾಯಣನಾಜ್ಞೆಯೆಂದು
ಆರೈದು ತಿಳಿದಾಚರಿಪುದೊಡನೆ ಕೈ
ಸೇರುವುವಿಷ್ಟಸಿದ್ಧಿಗಳು ೪೮

ಅರಿತಾಚರಿಸಿಯಖಿಲ ಶಾಸ್ತ್ರತತ್ವವ
ನರಿಯದವರಿಗರಿಯಿಸುತ
ಮೆರೆವ ಸದ್ಗುರುಗಳ ಮೆಲ್ಲಡಿದಾವರೆ
ಗೆರಗಿ ಭಕ್ತಿಯನೆಸಗುವುದು ೪೯

ಕೀಳು ದೇವತೆಗೆರಗದೆ ಕಿರಿಯರ ಮಾತ
ಕೇಳದೆ ಕೀಳಿಗಿಳಿಯದೆ
ಏಳು ಲೋಕವ ಪೊಡೆಯೆಡೆಯೊಳಿಟ್ಟೋವುವ
ನಾಳುತನವನಾದರಿಪುದು ೫೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಗೆದುದು ನಾಲ್ಕನೆಯ ಸಂಧಿ
ಸನ್ನುತ ಗುಣಸಂಬಂಧಿ ೫೧

# ಐದನೆಯ ಸಂಧಿ

ಅಮರ್ದುಗಡೆವ ಸಮಯದೊಳಲ್ಲಿ ನೆರೆದಿ
ರ್ದಮರರಂರತಚ್ಚರಿವಡೆಯೆ
ಕಮಲೆಗೆದೆಯನಿಂಬುಗೊಳಿಸಿದ ಪುರುಷೋ
ತ್ತಮನಡಿಗಾನೆರಗುವೆನು ೧

ಕಡೆವುದನುಳಿದು ಕಾದಿಹ ಬಿಡುಗಣ್ಣರ
ಗಡಣಂಗಳ ಕಡೆಗಣಿಸಿ
ಒಡನೆ ನಾರಾಯಣನುರವ ಸೇರಿದ ಸಿರಿ
ಮಡದಿಯಡಿಗೆ ವಂದಿಪೆನು ೨

ತಂದೆ ತಾಯಿಗಳೊಡವುಟ್ಟಿದರತ್ತೆ ಮಾ
ವಂದಿರು ಸಕಲ ಬಾಂಧವರು
ಕುಂದದೆ ನಲ್ವೆಂಡಿರ ಕೂರ್ತುಪಚರಿ
ಪಂದವನನುವದಿಸುವೆನು ೩

ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ
ಪೆಣ್ಣ ಪೆತ್ತವರು ಪೆರ್ಚುವರು
ಪೆಣ್ಣ ಪೆತ್ತುದರಿಂದೆ ಪೆಸರೆನಿಸಿತು ಮಿಗೆ
ಬಣ್ಣವೇರಿತು ಪಾಲ್ಗಡಲು ೪

ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಗು ಪೆರ್ಚಿದನು
ಪೆಣ್ಣಿಂದ ಜನಕರಾಯನು ಜಸವಡೆದನು
ಪೆಣ್ಣ ನಿಂದಿಸಲೇಕೆ ಪೆರರು ೫

ಸಿರಿರಾಣಿಯ ಸೀತೆಯ ರುಕ್ಮಿಣಿಯ ಶ್ರೀ
ಹರಿಯೊಡನೊಂದೆ ಹಂತಿಯೊಳು
ಇರಿಸಿ ಪೂಜೆಯನೊಡರಿಸುವರು ಪಿರಿಯರು
ಪರಿಕಿಪೊಡವರು ಪೆಣ್ಣೈಸೆ ೬

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ೭

ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು
ಇವರಿರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರಸೌಖ್ಯ ೮

ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳ್ಗುವರನಿಗಿತ್ತ ಮಾತ್ರಕೆ
ಕುಲಕೋಟಿಯನುದ್ಧರಿಪಳು ೯

ಬಸುರೊಳೊಗೆದು ಬಳೆದೇಕ ರೀತಿಯೊಳೆಲ್ಲ
ಸಿಸುಗಳಿರ್ದೊಡಮೇನು ಬಳಿಕ
ಒಸೆದಿತ್ತುದನೊಡಬಡುವಳು ಪೆಣ್ ಗಂಡು
ಪಸುಗೆಗೊಂಬನು ಬಲ್ಮೆಯೊಳು ೧೦

ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ
ದಿಟ್ಟ ಗಂಡುಗಳಂತಿರಲಿ
ಕೊಟ್ಟುದರಿಂದ ತಣಿವ ಕುವರಿಗೆ ಮನ
ಮುಟ್ಟಿ ಕೊಡುವುದು ಕೋವಿದರು ೧೧

ಎನ್ನ ಪೆತ್ತವರಿವರೀ ಮನೆಯೊಡವೆಗ
ಳೆನ್ನವೆಂದೆರವಿಲ್ಲದಿರ್ಪ
ಕನ್ನೆಯನನ್ಯರಿಗೀವನ್ನೆವರಮುರೆ
ಮನ್ನಿಸುವುದು ಮಮತೆಯೊಳು ೧೨

ಅರಿತು ನಿಟ್ಟಿಸೆ ಗಂಡುಮಕ್ಕಳಿಂದತಿಶಯ
ದೆರಕದೊಳೆಸೆವ ಪೆಣ್ಗಳನು
ಪೊರನೋಟದಿಂದ ನೋಡದೆ ಪೋಲೆನಿಸದೆ
ಮರುಕವೆರಸಿ ಮನ್ನಿಪುದು ೧೩

ಪದುಳಗೊಳಿಸಿ ಪಲಬಗೆ ಪಸದನಗಳ
ಪುದುಗಿಸಿ ಪೊಂದೊಡಿಗೆಗಳ
ಮದುವೆಗೆ ನೆರೆದ ಪೆಣ್ಮಕ್ಕಳ ನಿಟ್ಟಿಪ
ರೆದೆಗೊಳಿಪಂತೆಸಗುವುದು ೧೪

ಸುಗುಣನಾವನು ಸುಚರಿತ್ರನಾವನು ಕಣ್ಗೆ
ಸೊಗಸುವ ಸೊಬಗನಾರೆಂದು
ಬಗೆದು ಭಾವಿಸಿ ಪೆಣ್ಣನೀವುದು ವಂಶದೊ
ಳೊಗೆದೊಳ್ಗವರನಿಗೊಲಿದು ೧೫

ಅಲೆಗೆಯ್ಯದವಮತಿಯೆಸಗದ ವೈರವ
ಬಲಿಸದ ಬರಿದೆ ಪಳಿಯದ
ಕೊಲೆ ಬೈಗಳಿಂದ ಕೋಟಲೆಗೊಳಿಸದ ಸ
ತ್ಕುಲಕೀವುದು ಕುವರಿಯನು ೧೬

ಪಣದಾಸೆ ನಂಟುತನದ ಪತ್ತುಗೆ ನೇಹ
ದೆಣಿಕೆಗಳಿಂದೆದೆಗರಗಿ
ಗುಣ ಜವ್ವನ ಕುಲ ರೂಪುಗುಂದಿದ ನಡೆ
ವೆಣಕೀಯಲಾಗದು ಪೆಣ್ಣ ೧೭

ಜಡನಿಗೆ ಜಾತಿಹೀನನಿಗೆ ಚಂಚಲನಿಗೆ
ಕಡು ಮೂರ್ಖನಿಗೆ ಗಾಂಪನಿಗೆ
ಬಡತನದೊಳು ಬಲು ಬವಣೆಗೊಂಬವನಿಗೆ
ಕೊಡಲಾಗದು ಕುವರಿಯನು ೧೮

ಬಾಳಿ ಬದುಕಿ ತಣಿವಿಲ್ಲದ ತಮ್ಮಂತೆ
ಬಾಳಲೆಳಸುವ ಬಾಲಕಿಯ
ಬೀಳುಗುವರನಿಗೆ ಬೆಲೆಗೈದರೆಂಬುದ
ಕೇಳಿ ಕಿವಿಯ ಮುಚ್ಚುವುದು ೧೯

ತನ್ನ ಮನೆಯೊಳುಂಡು ತವರುಮನೆಯ ಸಂ
ಪನ್ನವಕ್ಕೆಂಬ ಪೆಣ್ಗಳಿಗೆ
ಪೊನ್ನ ತೊಡಿಗೆ ಪೊಸದುಗುಲಂಗಳನಿತ್ತು
ಮನ್ನಿಸುವುದು ಮನವರಿತು ೨೦

ಬಡವರಾವೆಮಗೆಲ್ಲಿ ಬರ್ಪುದೊಡವೆಯೆಂದು
ಕಡುದೈನ್ಯವಾಡಿ ಕಳೆಯದೆ
ಉಡದೆ ತೊಡದೆ ತಾವುಳಿದು ತನುಜೆಯರಿ
ಗುಡುತೊಡುವೊಡವೆ ಕೊಡುವುದು ೨೧

ತನ್ನ ತವರುಮನೆಯವರಿತ್ತ ಪಿತ್ತಳೆ
ಪೊನ್ನೆಂದು ಬಗೆದು ಪೂಜಿಸುವ
ಕನ್ನೆಯರೊಳು ಕಡುಗೂರ್ಮೆಯನೊಡರಿಸಿ
ಪೊನ್ನು ರನ್ನದೊಳು ಪೂಜುವುದು ೨೨

ಪುಟ್ಟಿದಂದದಿ ಬಂದು ಪೊಕ್ಕಳಿಂದಣುಗಿಯ
ನೆಟ್ಟನೆ ನಿಂದಿಸದಂತೆ
ಕಿಟ್ಟಿದ ಪಲಕೆಲವೊಡವೆಗಳನು ಕೈ
ಬಿಟ್ಟು ಕೊಡುವುದು ಬೇಸರದೆ ೨೩

ಬೇಡಿ ಬೇಡಿದ ವಸ್ತುವ ಪೆಣ್ಮಗುವಿಗೆ
ನೀಡುವ ನೇಮಗಾರರಿಗೆ
ಷೋಡಶದಾನದ ಫಲ ಸುಲಭದೊಳು ಕೈ
ಗೂಡುವುದೆಂಬರುತ್ತಮರು ೨೪

ಅನ್ನಪಾನದೊಳಾಭರಣ ವಸನದೊಳು
ಮನ್ನಣೆಯೊಳು ಮನವೊಲಿದು
ಕನ್ನೆರನ್ನೆಯರು ಪರಕೆಗೈಯಲಾ ಮನೆ
ಯುನ್ನತಿವಡೆದೊಪ್ಪುವುದು ೨೫

ಆದರಿಂದ ಪೆಣ್ಮಕ್ಕಳನಾದರಿಪುದು
ಮುದವೇರಿಪುದು ಮುದ್ದಿಪುದು
ಮದುವೆ ಮಂಗಲದೊಳು ಮನವೊಲಿದವರಿಗೆಂ
ದೊದವಿಪುದುಚಿತ ವಸ್ತುವನು ೨೬

ಸಣ್ಣ ಬಣ್ಣದ ಸೀರೆಯ ಪೂಸರವ ಇಂ
ಬಣ್ಣ ಪಲವು ಭಕ್ಷ್ಯಗಳ
ಕಣ್ಣುವಿಡಿದುದನು ಕಳುಹಿಸುವುದು ತನ್ನ
ಪೆಣ್ಣಿದ್ದ ಮನೆಗೆ ಬೇಸರದೆ ೨೭

ಅಂದಂದಿಗೆ ನೆನೆ ನೆನೆದು ನೇಹದೊಳೆನ್ನ
ಕಂದನೆಂತಿರ್ದಪಳೆಂದು
ಬಂದ ಬಂದವರ ಬಣ್ಣಿಸಿ ಕೇಳುವುದು ಮನ
ದಂದು ಮಾನಿಸರನಟ್ಟುವುದು ೨೮

ಬರಿಸುವುದೊಂದೂರೊಳಿರ್ಪಳನುಪಚಾರ
ವೆರಸಿ ಪಾರಣೆ ಪರ್ವಗಳಿಗೆ
ನೆರೆಯೂರೊಳು ಬಾಳುವ ನಿಜ ತನುಜೆಯ
ಕರೆಯಿಸುವುದು ಕಾಲವರಿತು ೨೯

ತಂದೆಯ ಮನೆಯಿಂದ ತಂದೆನೀ ವಸ್ತುವ
ನೆಂದೇಳ್ಗಿಯ ಕೊಳುವಂತೆ
ಬಂದ ಬಂದಾಗ ಬರಿದೆ ಕಳುಪದೆ ಪೆಣ್ಣಿ
ಗೊಂದರೆಯೊಡವೆಗೊಡುವುದು ೩೦

ಮಂದಿವಾಳದೊಳಾಣ್ಮನ ಮೇಗಣ ದೂರ
ತಂದ ತನ್ನಣುಗಿಯನೊಡನೆ
ಹಿಂದುಮುಂದೆಣಿಸದೆ ಹೀಯಾಳಿಸಿ ಮಿಗೆ
ನಿಂದಿಸಿ ನೀಕರಿಸುವುದು ೩೧

ಅವಿವೇಕದೊಳು ತನ್ನಾಣ್ಮನ ನುಡಿಗೇಳ
ದವಮತಿಗಳನಾಚರಿಪ
ಕುವರಿಗೆ ಸಲಿಗೆಯ ಕೊಟ್ಟು ಕೊಬ್ಬಿಪ ತವ
ರವರ್ಕೈಸೆ ಪೆಣ್ಗಾಗದವರು ೩೨

ಮುಳಿವ ಮೋಡಿಯೊಳಿರ್ಪ ಮೊನೆವಾತಾಡುವ
ಪಳಿವ ಪಲವು ಪಾಡುಗಳಿಗೆ
ಅಳಲುವ ಮನವನಡಗಿಸಿಯಣುಗಿಗಾಗಿ
ಅಳಿಯನಿಗಳುಕಿ ನಡೆವುದು ೩೩

ಪೆತ್ತ ಪೆಣ್ಮಗಳ ಪೆರ್ಚಿಸಿ ಪ್ಮೈಮರೆದು
ನ್ಮತ್ತಿಯಪ್ಪಂತೆ ಮನ್ನಿಸದೆ
ಸುತ್ತು ಕೆಲಸವ ಕಲಿಸಿ ಗೈಸುವುದೊಡ
ನೊತ್ತಿ ನುಡಿವುದುಚಿತವನು ೩೪

ಕಂದ ಕೇಳಿನಿಯನು ಕನಲಿ [೧]ಕಾಡಿ[೧]ದೊಡದ
ರಿಂದ ನೀನಳವಳಿಯದಿರು
ಒಂದಡಿಯಿಂದೊದೆದೊಡಮದನುಳಿದು ಮ
ತ್ತೊಂದಡಿವಿಡಿದೊಡಬಡಿಸು ೩೫

ಇನಿಯನೊಲಿದು ನಿನ್ನಿಚ್ಛೆಯರಿತು ಮಿಗೆ
ಸನುಮಾನಗೈದು ಸಂತವಿಸೆ
ಎನಗೊಳಗಾದನೆಂದೆಣಿಸಿ ಮೈಮರೆಯದೆ
ಅನುನಯದಿಂದನುಸರಿಸು ೩೬

ಕುಲಕೆ ಪೊರಗು ಕೊಟ್ಟ ಪೆಣ್ಣೆಂಬುದನರಿ
ತೆಲಗೆ ನೀನೆಮ್ಮ ಬಯಸದೆ
ಅಲೆಗೈವ ನಲ್ಲನೊಳಡಕವಾಗಿರ್ದೆಮ್ಮ
ಕುಲದೇಳ್ಗೆಯ ಕೊನರಿಡಿಸು ೩೭

ಮುಳಿಸು ಬೇಸರು ಮೋಡಿಯಲಸಿಕೆ ಮೊನೆ ಮನ
ದಳಲಂಜಿಕೆ [೨]ದುಗುಡ[೨]ದೊಳು
ತಿಳಿತಿಳಿದಿನಿಯನಿಂಗಿತ ಭೇದಂಗಳ
ನಳುಕಿಯಳುಕಿ ಅನುಸರಿಸು ೩೮

ಕನಸಿನೊಳಾದೊಡಮಿದಿರುವಾತಾಡದೆ
ಕನಲದೆ ಕಲಹವೆಸಗದೆ
ಮನೆಯೊಳಗಿರುವೆಮ್ಮ ಮಂದಿಗೆ ಬರಿಸದೆ
ಮನದನ್ನನ ಮನವೊಲಿಸು ೩೯

೧. (ಗ) ಕಾದಿ. ೨. (ಕ, ಗ) ಮರುಕ.

ಅತ್ತೆವಾವಂದಿರಿಗಳುಕಿಯಕ್ಕರುಗೂಡಿ
ಚಿತ್ತವರಿತು ಸೇವೆಯೆಸಗು
ಅತ್ತಿಗೆ ನಾದಿನಿಯರನನುವರ್ತಿಸು
ಪೆತ್ತವರನು ಪೆರ್ಮೆಗೊಳಿಸು ೪೦

ಸವತಿಯರೊಳು ಸಂಗಾತಿವೆಂಗಳವೊಲು
ನೆವಮಿಲ್ಲದ ನೇಹ[೩]ವೆರಸು[೩]
ಅವರಿವರಂತಿಂತು ನುಡಿದ ಚಾಡಿಗಳಿಗೆ
ಕಿವಿಗಳನಿತ್ತು ಕೇಳದಿರು ೪೧

ಮಗಳೆ ನಿನ್ನಿನಿಯನ ಮನೆಯವರೆಮ್ಮೊಳು
ಪಗೆ ಸಾಧಿಸಿ ಬಯ್ದೊಡದಕೆ
ಬಗೆಯೊಳು ತಾಳುಮೆಯನು ಬಲಿದವರೊಳು
ಮೊಗವಂಟದೆ ಮೋನವೆಸಗು ೪೨

ಪೇರ್ಸೆಸಿರಿಯಿಂದ ಪಿಗ್ಗಿ ಬೆರೆತು ನಿನ್ನ
ಮೇರೆ ತಾರೆಯ ಮೀರದಿರು
ಸೇರಿಯೂಳಿಗವೆಸಗುವ ಸೇವಕರನು
ಸ್ಯೆರಣೆಗೊಂಡು ಸಂತವಿಸು ೪೩

ಎಂತು ನಡೆದೊಡಿನಿಯನಿ[೪]ಗಿಂಪು[೪]ದೋರುವು
ದೆಂತು ನಡೆದೊಡೇಳ್ಗೆಯಹುದು
ಎಂತು ನಡೆದೊಡೆಲ್ಲರುಮಿದು ಲೇಸೆಂಬ
ರಂತಿರು ಸಂತೋಷದೊಳು ೪೪

(ಗ) ವೆಸಗು. ೪. (ಗ) ಗಿಂಬು

ಇಂತು ಪೆಣ್ಮಕ್ಕಳಿಗೆದೆಯೊಳು ನೆಲೆಗೊಳು
ವಂತೆ ಬುದ್ಧಿಯನು ಪೇಳುವುದು
ಪಿಂತಣ ನಲ್ವೆಂಡಿರ ಪೆರ್ಮೆಗಳನೋ
ರಂತೆ ಬಣ್ಣಿಸಿ ಪೊಗಳುವುದು ೪೫

ಅಣ್ಣತಮ್ಮಂದಿರನಿಬರೊಡವುಟ್ಟಿದ
ಪೆಣ್ಣನು ಪೆರ್ಮೆಗೊಳಿಸಿ
ಬಣ್ಣಬಂಗಾರವ ಬಗೆಬಗೆಯಿಂದಿತ್ತು
ತಣ್ಣನೆ ತಣಿಸಿ ಬಾಳುವುದು ೪೬

ಸೋದರ ಮಾವಂದಿರು ಸೊಸೆಯರ್ಗೆ ಬೇ
ಕಾದ ವಸ್ತುವ ಕೈಯೊಡನೆ
ಆದರದಿಂದಳವಡಿಪುವಲಸದೆ ಸಂ
ಪಾದಿಪುದಿಹಪರಗಳನು ೪೭

ತಂದೆಯೊಡನೆ ತಾಯೊಡನೆ ತನ್ನೊಡನೆಯು
ಮೊಂದು ಬಸುರೊ[೫]ಳೊಗೆ[೫]ದವರು
ಕುಂದದೆ ಬಾಳುವ ಕುವರಿಗೆ ಕುರುಪುಗೊಂ
ಡೊಂದರೆಯೊಡವೆಗೊಡುವುದು ೪೮

ಕುವರಿಯನಿಂತು ಕೂರ್ಮೆಯೊಳು ಸಲಹಿ ಮ
ತ್ತವಳನಿತ್ತೊಳ್ಗು ವರನಿಗೆ
ಸವೆಯದ ಧರ್ಮವ ಸಂಪಾದಿಸಿ ಮಾ
ಧವನ ಮನವ ಬರಿಸುವುದು ೪೯

೫. (ಖ) ಛಾ.

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಪ್ಪಿದುದೈದನೆಯ ಸಂಧಿ
ಸನ್ನುತ ಗುಣಸಂಬಂಧಿ ೫೦

## ಆರನೆಯ ಸಂಧಿ

ಆವನಿಗಿಳೆಯುಮಾಗಸಮುಮಳತೆಗೊಳು
  ವಾ ವೇಳೆಯೊಳಡಿಗಳಿಗೆ
ಪಾವುಗೆಯಂತಳವಟ್ಟು ತೋರಿದುವಾ
  ದೇವನಿಗಾನು ವಂದಿಪೆನು ೧

ಕಡಲೆಡೆಯೊಳು ಮಲಗಿದನಾವಳಿಗಾಗಿ
  ಕಡಲ ಕಡೆದು ಬಳಲಿದನು
ಕಡಲೊಳು ದಾರಿಗೈದನು ಶೌರಿಯಾ ಸಿರಿ
  ಮಡದಿಯಡಿಗೆ ವಂದಿಪೆನು ೨

ಎಳೆ ಜವ್ವನದೊಳೆಡೆ ಜವ್ವನದೊಳು ಮು
  ತ್ತಿಳಿವ ಜವ್ವನದೊಳಿನಿಯಳ
ಒಳಗರಿತುಪಚರಿಸುವ ನಲ್ಲನಿಗವ
  ಳೊಳಗಪ್ಪ ಬಗೆಯ ಬಣ್ಣಿಪೆನು ೩

ಎರವೆಳ್ಳನಿತಿಲ್ಲದೊರ್ವರೊರ್ವರೊಳೊಡ
  ವೆರೆದಿರ್ಪ ಸತಿಪತಿಗಳಿಗೆ
ದೊರೆಕೊಂಬುದು ಸಂಸಾರ ಸುಖದ ಸುಗ್ಗಿ
  ಪರದೊಳಾನಂದ ಪರ್ಬುವುದು ೪

ಸತಿ ಪತಿಯರ ಸೌಹೃದದಿಂದ ಸಂಸಾರ
ವತಿಶಯವಡೆದು ತೋರುವುದು
ಇತರೇತರ ವೈರದಿಂದಿರ್ವರಿಗೆ ದು
ರ್ಗತಿಯಂತೆ ಕಂಗೊಳಿಸುವುದು ೫

ಒಳತೋಟಿಯೊಡರಿಪ ಗಂಡ ಪೆಂಡಿರ ಮನೆ
ನೆಳಲ ಸೇರರು ನೀತಿವಿದರು
ಬಳಿಕ ಮಾತೇನಿನ್ನು ಬಸುರೊಳು ಬಂದ ಮ
ಕ್ಕಳುಮಲ್ಲಗಳೆದು ನಡೆವರು ೬

ತೋಟಿಗೊಳುವ ದುಷ್ಟದಂಪತಿಗಳು ಬೂ
ತಾಟಗಳಿಂದನುಗೆಟ್ಟು
ಊಟ ನಿದ್ದೆಗಳೊಂದರೊಳು ಸುಖಮಿಲ್ಲದೆ
ಕೋಟಲೆಗೊಂಡು ಕುಗ್ಗುವರು ೭

ದಂಪತಿಗಳ ಪಗೆತನದಿಂದಿರ್ವರ
ಪೆಂಪಿನ ಬೇರು ಪರಿವುದು
ಸೊಂಪುಗೆಡುವುದು ಸೊಬಗು ಸಂಸಾರವ
ಜಂಪು ಸಡಿಲಿ ಜಾರುವುದು ೮

ಕಡುಮೂರ್ಖತನದೊಳು ಕಡೆಗಣಿಸುವ
ಬಿಡುನುಡಿಗಳ ಬಿತ್ತರಿಸುವ
ಬಿಡದೆ ಕಾದುವ ಗಂಡಪೆಂಡಿರನೇತಕೆ
ಪಡೆದನಕಟ ಪದ್ಮಭವನು ೯

ಒರ್ವರೊರ್ವರನೊಡಬಡದೊಡಬಡಿಸದ
ಗರ್ವಿತ ದಂಪತಿಗಳನು
ಇರ್ವರನಿಳೆ ಸುಂಗದೆ ಪೊರುವುದರಿಂದ
ಸರ್ವಂಸಹೆಯೆನಿಸುವುದು ೧೦

ತಿಳಿದದರಿಂದಿನಿಯರು ದಿಟ್ಟವೆಂದಿರ
ಬಳಿಸಂದೊಡಬಡಿಸುವುದು
ತಿಳಿಪುವುದೆದೆಗೊಳಿಸುವುದಿಂಪುದೋಱುವು
ದೊಳಗು ಗೈದೊಂದುವೆರೆವುದು ೧೧

ಒಲುಮೆಯನೊಳಕೊಂಡು ನಾಣ್ಚಿಯೊಲಿಯದಂತೆ
ಚಲಪೋಱುವೆಣಜವ್ವನದ
ಕುಲಸತಿಯೊಳು ಕೋಪಿಸದೆ ಕೋಟಲೆಗೊಳ
ದಲಸದೆಯನುಸರಿಸುವುದು ೧೨

ಏನೆಂದರಿಯದೆಳವೆಯೊಳಿನಿಯಳಭಿ
ಮಾನಗೊಂಡಿರೆ ಮುಚ್ಚರಿಸದೆ
ಮೋನದೊಳಿರವೆ ಮೋಡಿಯ ಕಾಣಿಸದೆ ಸ
ನ್ಮಾನದಿ ಮನಗರಗಿಪುದು ೧೩

ನಲ್ಲನಿಗೊಲಿದು ನಾಣ್ಚುವ ಮುದ್ದುವೆಣ್ಣಿನ
ಮೆಲ್ಲೆರ್ದೆ ಕಲ್ಲೆರ್ದೆಯೆನಿಸೆ
ಬಲ್ಲವನವಳ ಬಲುಮೆ ಗೈದು ಬಳಲದೆ
ಚಲ್ಲವಾಡುವುದು ಜಾಣ್ಮೆಯೊಳು ೧೪

ನಿಟ್ಟಿಸೆ ತಲೆವಾಗುವ ನೇಹದೊಳು ಮನ
ಮುಟ್ಟಿ ಮರಳಿ ನಿಟ್ಟಿಸುವ
ದಿಟ್ಟಿದಿಟ್ಟಿಗಳೊಡವೆರೆಯೆ ನಾಣ್ಚುವರೊಳ
ಗುಟ್ಟರಿತುಪಚರಿಸುವುದು ೧೫

ವಿೂರಲೆಳಸಿ ಮೇಲುವರಿವ ಮನದ ಮಿತಿ
ಮಿೂರಲಂಜಿಕೆಗೊಂಬ ಮೆಯ್ಯ
ಏರುವ ಪುರ್ಬಿನೆರಗುವ್ವೊಳ್ಮೊಗದಳೆ
ನೀರೆಯ ನೆಲೆಯ ತಿಳಿವುದು ೧೬

ಪೆರತೊಂದು ಪೆಂಪೇರುವೆರ್ದೆಯ ಮಿರುಪ ಮೆಯ್ಯ
ನಿರಿಗೊಂಬ ನಿಡುವುರ್ಬುಗಳ
ಕುರಿತು ನೋಡುವ ನೋಟದ ಕೊಮರಿಯ ಬಗೆ
ಯರಿತೆರಕದೂಳೆರಗಿಪುದು ೧೭

ಕೊಂಕುಗಲಿವ ನೋಟ ಕುಣಿಯಲೆಳಸುವ ಪು
ರ್ಬಂಕೆಗೆ ನಿಲದಭಿಲಾಷೆ
ಬಿಂಕವಡೆವ ನಡೆವೆತ್ತೆಳೆವೆಂಡಿರ
ಸೋಂಕುವುದವರೊಲವರಿತು ೧೮

ಪೊದೆಯಲೆಳಸುವೆರ್ದೆ ಪುಸಿಯೆನಿಸುವ ನಡು
ಮದವೇರುವ ಮನದಿರವು
ಪದುಳಗೊಳುವ ನಡೆ ಬಗೆಗೊಂಬ ಬಾಲೆಯ
ಬೆದರಿಸದೊಡ[೧]ಒಡಿಸು[೧]ವುದು ೧೯

೧. (ಖ) ವೆರಸು.

ಸಣ್ಣನೆನಿಪ ನಡು ಸನ್ನಾಹವಡುವೆರ್ದೆ
ಬಣ್ಣವೇರುವ ಬಡಬಾಸೆ
ಬಣ್ಣಿಗೆಗೊಳುವ ಬಗೆಯ ಪೊಸವರೆಯದ
ಪೆಣ್ಣಿನೊಲುಮೆಯ ಪೆರ್ಚಿಪುದು ೨೦

ಗಾಡಿಗಲಿವ ನಡೆ ಗನ್ನವೇರುವ ನುಡಿ
ಮೋಡಿದೋರುವ ಮುದ್ದು ನೋಟ
ಮೂಡುವ ಲಜ್ಜೆಯೆಸೆವ ಮುದ್ದುವೆಣ್ಗಳ
ನೀಡುಗೊಳುವುದಿರವರಿತು ೨೧

ಇಂಗಿತಗಳನಿದಿರಿಡಲೆಳಸುವ ನೋಟ
ವಂಗಹಾರದೊಳೆಸೆವಂಗ
ವ್ಯಂಗ್ಯವ ಕಲಿವ ಒಳ್ನುಡಿ ಬಗೆಗೊಳೆ ಕೋಮ
ಲಾಂಗಿಯ ಕೂರ್ತೆರಗಿಪುದು ೨೨

ಗಲಗೆಸಗದೆ ಗಾಬರಿಗೊಳಿಸದೆ ಮಿಗೆ
ಕಲಹವ ಗಂಟುವಡಿಸದೆ
ಬಲುಮೆಗೈಯದೆ ಬಾಲೆಯ ಬಣ್ಣವಾತಿನಿಂ
ದೊಲಿಸಿಯೊತ್ತಿಗೆ ಬರಿಸುವುದು ೨೩

ನಸುನಾಣ್ಚುವೆಳೆವೆಂಡಿರ ನಲವೇರಿಸಿ
ಬಸಗೈಯದೆ ಬಲ್ಮೆದೋರೆ
ಪೊಸಪೂವ ಸರಗೈದು ಮುಡಿಯದೆ ನಲುಗಿಸಿ
ರಸದೆಗೆವೆಸಕವೆನಿಪುದು ೨೪

ಬೆದರುವ ಮುದ್ದುವೆಣ್ಣಿಗೆ ಭೀತಿಗಳೆವಂತೆ
ಪದುಳಗೈಯದೆ ಬಲ್ಮೆದೋರೆ
ಸೊದೆಯುಂಡು ಸೊಕ್ಕುವ ಜೊನ್ನವಕ್ಕಿಗೆ ಬಿಸು
ಗದಿರನೂಡುವ ಗೈಮೆಯಂತೆ ೨೫

ಅರಿಯದ ಪೆಣ್ಣನಾದರಿಸಿ ಅಂಜಿಕೆಗಳ
ಪರಿವುಗೈಯದೆ ಬಲ್ಮೆದೋರೆ
ತರಿಸಂದು ಮಳೆಗೆ ಬಾಯ್ದೆರೆವ ಚಾದಗೆಯೊಳು
ಬರಸಿಡಿಲೆರಗಿತೆಂಬಂತೆ ೨೬

ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ
ಪಗೆ ಸಾಧಿಸಿ ಬಲ್ಮೆದೋರೆ
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ ೨೭

ಎರಗಿ ಎರಗದೆಳೆವೆಣ್ಣನೆರಗಿಸದೆ
ಒರಿದೆ ಮುನಿದು ಬಲ್ಮೆದೋರೆ
ಎರೆವ ತಣ್ಣೀರನೆಳಸುವೆಳೆವಳ್ಳಿಗೆ
[೨]ತರಿಳ[೨]ಗೆಂಡವ ತಳೆವಂತೆ ೨೮

ತರತಮ ಭಾವವರಿತು ತರುಣಿಯೊಳೊಡ
ವೆರಸಿ ಬಿನದವೆಸಗುವುದು
ತರವರಿಯದೆ ತಲೆಯೊಳು ಪೊತ್ತು ಲಾಲಿಸೆ
ಪರಿಭವ ಗೈದು ಪಳಿವಳು ೨೯

೨. (ಗ) ಕ್ಷ.

ತಿಳಿಯದಿನಿಯಳನುವನು ತೀವರವ
ಟ್ಟೆಳವಳಿ[೩]ದಾಲಿ[೩]ಪರಿಯದೆ
ಒಳಗರಿತೊಯ್ಯನೊಯ್ಯನೆ ಸೇರುವಿನಿಯನ
ಬಳಿಸಲುವರು ಬಾಲೆಯರು ೩೦

ಎರವಿನಿತಿಲ್ಲದಂತೆಳೆವರೆಯದ ಪೆಣ್ಣ
ಸರಿಗೊಂಡು ಸರಸವಾಡುವುದು
ಸರಿಯಲ್ಲೆಂದುಳಿದಿರ ಮರವಡುವಳು
ಮರದ ಬೊಂಬೆಯ ಮಾಟದೊಳು ೩೧

ಒತ್ತಿಗೆ ಬರಿಸುವುದೊಮ್ಮೊಮ್ಮೆ ಬಿನದವಾ
ಡುತ್ತ ಭೀತಿಯ ಬಿಡಿಸುವುದು
ಮತ್ತೆ ಮೆಯ್ವಳಿಯೊಳು ಮನ್ನಿಸುವುದು ಚಿತ್ತ
ವೃತ್ತಿಯ ಸೆರಯ ಪಿಡಿವುದು ೩೨

ಬಿನದವಾತನು ಬೆಸಗೊಳೆ ಪೆರಸಾರದೆ
ಮುನಿಯದೆ ಮೋಡಿಯೊಳಿರದೆ
ಇನಿಸು ನಾಚಿಕೆಗೊಂಡೆರಗಿದ ನುಣ್ಮೊಗ
ದಿನಿಯಳನೆದೆಗರಗಿಪುದು ೩೩

ಮುಂಜೆರಗನು ಪಿಡಿದೊಡನೆ ಬಾಗಿದ ಮುಖ
ಕಂಜದ ಪದುಗುವೊಡಲಿನ
ಅಂಜುವ ಮನದೆಳವರೆಯದ ನೀರೆಯ
ನಂಜಿಸದನುಸರಿಸುವುದು ೩೪

೩. (ಗ) ದಾರಿ.

ಸರಸವೆಸಗಿ ಕೈಸಾರ್ಚಿದೊಡನೆ ಮಿಗೆ
ಮೊರೆದೇಳುವ ಮೈನವಿರ
ಮುರಿಗೊಳುವಂಗದ ಮೊಳೆವ ಬೆಮರ [೪]ವರ[೪]
ತರುಣಿಯನೆದೆಗರಗಿಪುದು ೩೫

ಒದವಿ ಕೈಸೋಂಕಿದೊಡನೆ ಹದುಗುವ ಮೆಯ್ಯ
ಕದುಬುವ ಸಕಲ ಕರಣದ
ಬೆದರುವ ಕಣ್ಣ ಬೆಚ್ಚುವ ಮನದೆಳೆಯಳ
ಎದೆಗರಗಿಪುದಿಚ್ಚೆಯರಿತು ೩೬

ಪಿಡಿಯೆ ಮುಂಗೈಯ ಜಡಿದು ಮುರಿದಲಸುವ
ಕುಡುವುರ್ಬುಗಳ ಗುಡಿಗೊಳಿಪ
ಬಿಡು ಬಿಡೆಂದೊಮ್ಮೊಮ್ಮೆ ಬೆಚ್ಚಿ ಬಿನ್ನವಿಪೆಳೆ
ವಡದಿಯನೊಡಬಡಿಸುವುದು ೩೭

ಜಡೆಯ ತುಡುಕಿ ಪಿಡಿದೊಡನೆ ಘರಿಕ್ಕನೆ
ಮಡಮುರಿದೆಸೆವೊಳ್ಮೊಗದ
ಅಡವಾಯುವ ಕೂರ್ನೋಟದ ಕೊಮರಿಯ
ನೊಡಬಡಿಸುವುದೊಲಿಸುವುದು ೩೮

ಸೋಂಕಲೆಳಸೆ ಸುಕ್ಕುವ ಪೊಂಜೆಳೆ ಮೆಯ್ಯ
ಕೊಂಕಿದ ಕುಡುವುರ್ಬುಗಳ
ಭೋಂಕನೇಳುವ ನವಿರುಗಳೆಳವರೆಯದ
ಬಿಂಕಗಾತಿಯ ಬೆರಸುವುದು ೩೯

೪. (ಕ, ಗ) ಕುಲ.

ಕನಲಿ ಕಲ್ಲಿರ್ದೆಯವಳೆಂದಲ್ಲಗಳೆಯದೆ
ಮನಮುರಿಯದೆ ಮಚ್ಚರಿಸದೆ
ಅನುನಯ ವಚನದಿಂದನುಗೊಳಿಸುವನಿಗೆ
ಮನವೀವರೆಳೆವಡದಿಯರು ೪೦

ನೆರೆ ಜವ್ವನದ ನೀರೆಯೊಳೆರವೆಣಿಸದೆ
ಮರೆಮಾಜಿ ಮನಮುರಿಯಿಸದೆ
ಎರಕವೆರಸಿ ಮನೆವಾಳ್ತೆಯ ಭಾರವ
ಪೊರಿಸಿ ಪುದುಗುವಡಿಸುವುದು ೪೧

ಆಯಿತಾಯಿತು ಎಂದಲ್ಲಗಳೆಯದೆ ತ
ನ್ನಾಯವನವಳಿಗರುಹದೆ
ಆಯ ಬೀಯವನವಳೊಡನಾಳೋಚಿಸಿ
ಕೈಯಡಕದೊಳಿರಿಸುವುದು ೪೨

ಎನ್ನವಳೆಂದೆರಕದೊಳೀವುದು ಪೊನ್ನ
ರನ್ನವ ಪೊಸದುಗುಲಗಳ
ತನ್ನ ಶಕ್ತಿಯ ವಂಚಿಸದೆ ಮನದನ್ನಳ
ನುನ್ನತಿವಡಿಸುವುದೊಲಿದು ೪೩

ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಂಡುರೆ
ತನ್ನ ಕುಂದಿನೊಳು ಕುಂದುವಳ
ತನ್ನ ಮೆಯ್ಯೊಳಗರೆ ಮೆಯ್ಯೆನಿಸುವ ಮನ
ದನ್ನಳ ಮನ್ನಿಪುದೊಲಿದು ೪೪

ಉಡದಿರೆ ಮಡಿಯುಡಮುಣದಿರೆ ಸವಿಯುಣ
ದೊಡವೆಯ ತೊಡದಿರೆ ತೊಡದೆ
ಎಡೆವಿಡದಿನಿಯನಡಿಯ ನೆಳಲನು ಪಡಿ
ವಿಡಿವ ಮಡದಿಯ ಮನ್ನಿಪುದು ೪೫

ನಿನ್ನದೆನ್ನದು ನೀನಾನು ನಿನ್ನವರಿವ
ರನ್ನವರಿವರುಗಳೆಂದು
ತನ್ನಿನಿಯಳ ತನ್ನೊಡವೆ ಮೈ ಬಳಗವ
ಭಿನ್ನಗೈಯದೆ ಬೆರಸುವುದು ೪೬

ಮನದೊಳು ಮನ ನೆನಹಿನೊಳು ನೆನಹು ಮತ್ತೆ
ತನು ತನುವಿನೊಳೊಡವೆರಸಿ
ಅನುಗೊಳೆ ಪಾಲುನೀರುಗಳಂತಿನಿಯನು
ಮಿನಿಯಳುಮೇಕವೆನಿಪುದು ೪೭

ಎಳೆ ಜವ್ವನ ಮೊದಲಿಂದುವರೆಗಮೆನ್ನ
ಬಳಿಸಂದು ಬಾಳಿದಳೆಂದು
ಇಳಿವ ಜವ್ವನದೊಳಗೆರವುದೋರದೆಯೆಂದಿ
ನೊಳು ನೇಹವನೊಡರಿಪುದು ೪೮

ಪಣಿಕೆ ಗೈವೊಡೆ ರೂಪು ಜವ್ವನಮಿದ್ದೇನು
ಗುಣಮಿಲ್ಲದ ಕುಲಸತಿಗೆ
ಗುಣಕರುಗೊಂಡಿರೆ ಕೂರ್ತೆಂದೆಂದಿಗು
ಮೆಣೆ ಬಿಚ್ಚದೇಕವೆನಿಪುದು ೪೯

ಎರವಿಲ್ಲದೇಕವೆನಿಸಿ ಧರ್ಮದೊಳು ಸಂ
ಸರಿಸುವ ಸತಿಪತಿಗಳಿಗೆ
ಪುರುಷೋತ್ತಮನಡಿಗಳ ಪೂಜೆಯಿಂದಿಹ
ಪರಸುಖ ಪದುಳಗೊಳುವುದು ೫೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಪ್ಪಿದುದಾರನೆಯ ಸಂಧಿ
ಸನ್ನುತ ಗುಣಸಂಬಂಧಿ ೫೧

## ಏಳನೆಯ ಸಂಧಿ

ವಂದಾರು ಜನಕೆ ವಾಂಛಿತ ಫಲಗಳನೀವ
ಮಂದಾರ ತರುಗೆ ಮಾಧವಗೆ
ಕುಂದುಗಳಿಲ್ಲದೆ ಗುಣಕರುಗೊಂಡ ಮು
ಕುಂದನಿಗಾನು ವಂದಿಪೆನು ೧

ಪುರುಷೋತ್ತಮನೆದೆಯೊಳು ಪುದುಗಿರ್ದವ
ನಿರವರಿತೆಲ್ಲ ಲೋಗರೊಳು
ಕರುಣಾಮೃತವ ಕರೆಗಣ್ಮಿಸಿ ಪರಿಸುವ
ಸಿರಿರಾಣಿಯಡಿಯ ಸೇವಿಪೆನು ೨

ನೆರೆಯೂರಿಗೆ ಪೋಗಿ ನಲ್ಲನೈತರದಿರೆ
ಬರವ ಬಯಸಿ ಬಸವಳಿವ
ವಿರಹಿಣಿಯರ ನಡತೆಯ ಬಿತ್ತರಗಳ
ನೊರೆವೆನುಚಿತವೆಂಬಂತೆ ೪

ಸೋಗೆ ಮುಗಿಲ ಸೂರ್ಯನ ಸರಸೀರುಹ
ಸಾಗರ ವೇಲೆ ಚಂದ್ರಮನ
ಕೋಗಿಲೆ ಸುಗ್ಗಿಯ ಕೂರ್ಪಂತೆ ಸತಿಯಸು
ರಾಗದಿನಿಯನ ಜಾನಿಪಳು ೪

ನೆನೆವಳವನ ನೆರೆ ಸೊಗಸೊಳುವಗೆಗಳ
ನೆನೆವಳವನ ಮೈಸಿರಿಯ
ನೆನವಳವನ ನೇಹದೆಸಕದಿರವನಿಂತು
ನೆನೆನೆನೆದಿಂಪುಗೊಳುವಳು ೫

ದೇವರಿಲ್ಲದ ದೇಗುಲದ ಬಿತ್ತರದಂತೆ
ಭೂವರನಿಲ್ಲದೂರಂತೆ
ಜೀವಿತೇಶ್ವರನ ವಿರಹದೊಳು ಸೆಜ್ಜೆಯ
ಭಾವಿಸಿ ಬಣ್ಣಗುಂದುವಳು ೬

ಕೆಲದೊಳು ಕೆಳದಿಯರಿರೆ ಸೈರಿಸದೊಂದು
ಕೆಲಸದ ನೆವದಿಂದ ಕಳುಪಿ
ಒಲಿದೋಪನೊಳ್ಗೈತದೊಪ್ಪವ ನೆನೆನೆನೆ
ದಲಸಿ ಮೈಮುರಿದೊರಲುವಳು ೭

ತಲೆವಾಗಿಲೊಳು ದಾರಿಗರ ನೋಡಲೆಳಸದೆ
ನೆಲೆವಾಡವೇರಿ ನಿಟ್ಟಿಸದೆ
ಒಲಿದಿನಿಯನ ನಲ್ಬಗೆಯ ನೆನಹಿನೊಳು
ನೆಲೆನಿಂದು ನೇಮುಗೊಳುವಳು ೮

ಪರಿಪರಿಯುಡೆ ತೊಡವುಗಳ ಪೂಸರಗಳ
ಪರಿಮಳದಣ್ಪ ಬಯಸದೆ
ಗರತಿಯರಿದನುಳಿದಿರಲಾಗದೆಂಬಲಂ
ಕರಣ ಮಾತ್ರವ ಧರಿಸಿಹಳು ೯

ಮಂಗಳಕರ ಮಾತ್ರವನಲ್ಲದೆ ಮಿಕ್ಕ
ಸಿಂಗರಗಳನು ಚಿಂತಿಸದೆ
ಸಂಗಾತಿವೆಂಗಳ ಸರಸಭಾಷಣವ ಮ
ನಂಗೊಳಿಸದೆ ಮರುಗುವಳು ೧೦

ಪಾಯಸ ಪರಮಾನ್ನವ ಪಲಬಗೆಯ ಕ
ಜ್ಜಾಯವ ಕಾಯಿಪಣ್ಣುಗಳ
ಬಾಯ ಸವಿಗೆ ಬಯಸದೆ ಅನ್ನಪಾನದಿ
ಕಾಯಧಾರಣೆಯೆಸಗುವಳು ೧೧

ಮನೆಮಕ್ಕಳು ಮನೆವಾಳ್ತೆಯೊಳು ತನ್ನ
ಧನ ಧಾನ್ಯದಾಯ ಬೀಯದೊಳು
ತನುವಿನಾರೈಕೆಗಳೊಳು ತಾನೆರಗದ
ಮನದಿಂದ ಮರುಳೆನಿಸುವಳು ೧೨

ಎನ್ನತನ್ನವರೆಂದವರಿವರನು ಮಿಗೆ
ಮನ್ನಿಸಿ ಮನೆಗೆ ಬರಿಸದೆ
ಮನ್ನಿಸಿ ಕರೆವರ ಮನೆಗೆ ಪೋಗದೆ ಮನ
ದನ್ನನ ನೆನಹಿನೊಳಿಹಳು ೧೩

ಎಡಬಲದವರಂತಿಂತು ನುಡಿವರೆಂದು
ತಡೆದು ತನ್ನಿಚ್ಛೆಯೊಳಿರದೆ
ಎಡೆವಿಡದಿನಿಯನ ನೆನೆದು ನೇಮದೊಳಿರ್ಪ
ಮಡದಿಗೆ ಮತ್ತೆಣೆಯುಂಟೆ ೧೪

ನಗುವರು ನಗಲಿ ನಾಚುವರು ನಾಚಲಿ ಮಿಗೆ
ಮೊಗದಿರುಹುವರು ತಿರುಹಲಿ
ಬಗೆಯದದನು ಭಾವಿಪಳು ತನ್ನಿನಿಯನ
ನಗೆನೋಟ ನಡೆನುಡಿಗಳನು ೧೫

ನಿರಿಗೊಂಡ ಪುರ್ಬಿನ ನೆಲೆನಿಂದ ನಿಡುಗಣ್ಣ
ಅರಿಕೆಗುಂದಿದ ಕರಣಗಳ
ಒರೆವ ಕಣ್ಣೀರೊಪ್ಪದಿಂದೊಳ್ಗೆಳದಿಗೆ
ಮರುಕನ ಮನಗೊಳಿಸುವಳು ೧೬

ಕೆಂದಳಿರ್ಗೈದಳದೊಳಗಿಟ್ಟ ಗಲ್ಲದ
ಕಂದಿದ ಮೊಗದಾವರಯ
ಸಂದಣಿಸುವ ನಿಟ್ಟುಸುರ ನೆಲೆಯೊಳಿ
ದ್ದಂದಗೆಡಿಪಳಾಳಿಯನು ೧೭

ಕವಿವ ಕುರುಳ ಕಟ್ಟು ಸಡಿಲಿದ ಚೊಲ್ಲಿಹ
ದೆವೆಯಿಕ್ಕದೆಸಳು ಕಣ್ಣುಗಳ
ಸವೆಯದ ನೆನಹಿನ ಸೈಪಿಂದ ಕೆಳದಿಗೆ
ಸವನಿಸುವಳು ಸಂಕಟವನು ೧೮

ಪಡಿಮೊಗದೊಳು ನಿಂದು ಬಾಯಿಟ್ಟು ಕರೆದೊಡ
ಮೊಡಲನಲುಗಿದೊಡಮದಕೆ
ಒಡನೆಚ್ಚರದೋಜೆಯಿಂದ ಕೆಳದಿಯರ
ಗಡಣವ ಕೈಗೆಡಿಸುವಳು ೧೯

ಎಲೆಯಕ್ಕ ನೀನೇತಕಿಂತು ಚಿಂತಿಪೆಯೆಂ
ಬುಲಿಗೇಳಿದೊಡನುರವಣಿಸಿ
ಕೆಲದಲ್ಲಿ ನಿಂದವರೊಳು ಕೇಣವೆಸಗುತ
ನೆಲೆಗೆಡಿಸುವಳು ನೇಹಿಗರ ೨೦

ಎನ್ನಿನಿಯನ ಪಾದಸೇವೆಯಿಲ್ಲದೆ ನಾ
ನೆನ್ನೆಗವಿಂತಿರ್ಪೆನೆಂದು
ತನ್ನೊಳು ತಾನೆ ತವಕಗೊಂಬ ಸತಿಯ ಮ
ಹೋನ್ನತಿಗಿನ್ನೆಣೆಯುಂಟೆ ೨೧

ಒಲಿದ ನಲ್ಲನ ವಿರಹದೊಳೊರಲುವ ಕುಲ
ಲಲನೆಯ ವಿರಹವೇದನೆಗೆ
ಪಲಬಗೆಯುಗ್ರ ತಪಂಗಳೀಡಲ್ಲೆಂ
ದುಲಿವುವು ಮುನ್ನಿನೋದುಗಳು ೨೨

ಇರದೆಸಗುವ ದಾನ ಹೋಮ ನಿಯಮದಿಂದ
ಪರಿಹರಿಸದ ಪಾಪಗಳು
ವಿರಹದ ತನಿ ಬೆಂಕಿಯಿಂದ ಬೆಂದಳಿವುದೆಂ
ದೊರೆವರಖಿಲವೇದವಿದರು ೨೩

ಈ ದೇಹದಂಡನವೈಸೆ ಪ್ರಾಯಶ್ಚಿತ್ತ
ವೇದವಿಹಿತ ಮಾರ್ಗದೊಳು
ಆ ದಾರಿಯೊಳಾಣ್ಮನಗಲೆ ಸಂಕಟಗೊಂಬ
ವೇದನೆಗೆಣೆಯಾವುದಿನ್ನು ೨೪

ಬಸವಳಿದೊಡಲ ಪಾಸಿನೊಳೀಡಾಡುವ
ಳುಸುರುಸುರೆಂದೊರಲುವಳು
ಮುಸುಕಿಡುವಳು ಮುದುಡುವಳು ಕೈಕಾಲ್ಗಳ
ಬಿಸುಸುಯ್ದು ಬೆಚ್ಚುತೇಳುವಳು ೨೫

ಅರಿಯದೆ [1]ತನಿಗೆಂಡ[1]ವ ಮೆಟ್ಟಿ ನಿಂದಂತೆ
ತುರುಚನ ಗಿಡು ಸೋಂಕಿದಂತೆ
ಬಿರುಬುಗೊಂಬಳು ಬೆದರುವಳಳಲುವಳು ಬೇ
ಸರುವಳು ಬೇನೆವಡೆವಳು ೨೬

ಒಂದರೆಗಳಿಗೆಯನೊಂದು ಬರಿಸದಂ
ತೊಂದು ಜಾವವ ಯುಗದಂತೆ
ಒಂದಿರುಳನು ಕಲ್ಪಕಾಲದಂತೆಣಿಪಳು
ಮುಂದುಗೆಡುವಳು ಮೋಹಿಪಳು ೨೭

ಬನದೊಳು ದೆಸೆಗೆಟ್ಟು ಪರಿವಂತೆ [2]ಕತ್ತಲೆ[2]
ಮನೆಯೊಳು ಕಣ್ಟೆರೆವಂತೆ
ಇನಿಯನನಗಲಿ ತಾನಿರವುಗಾಣದೆ ಮಿಗೆ
ಯನುಗೆಡುತಳವುಗುಂದುವಳು ೨೮

ಎಂದಿಗೆನ್ನಿನಿಯನನಿದಿರುಗೊಳುವೆನಿ
ನ್ನೆಂದಿಗೆ ಹತ್ತೆ ಸಾರುವೆನು
ಎಂದಿಗವನ ಪಡಿಮೊಗದೊಳು ಸಂದಪೆ
ನೆಂದೆಡೆವಿಡದೆ ಜಾನಿಪಳು ೨೯

೧. (ಖ) ತರಿಗೆಂಡ. ೨. (ಕ) ಕಟ್ಟಲೆ, (ಗ) ಕಳ್ತಲೆ.

ಎಂದಿಗವನ ನುಡಿಗಳ ಸವಿಸವಿದಾ
ನಂದದೊಳಳ್ದು ತೇಲುವೆನು
ಎಂದಿಗೆನ್ನಿರವನವನಿಗಾನರುಹುವೆ
ನೆಂದು ಬಯಸಿ ಬಳಲುವಳು ೩೦

ಎಂದಿಗೆನ್ನೆದೆ ತಣಿವಂತೆಲ್ಲ ಸೇವೆಯ
ನೊಂದನುಳಿಯದೊಡರಿಪೆನು
ಎಂದಿಗವನೊಳೊಡವೆರೆದೊಂದೆನಿಸುವೆ
ನೆಂದೆರಕದೊಳಿಣಿಸುವಳು ೩೧

ಇಂದಿನೊಳೀಗಲೆನ್ನಿನಿಯನೈತರಬೇ
ಕೆಂದು ಕದುಬಿ ಕಾತರಿಸಿ
ಮಿಂದು ಮಡಿಯನುಟ್ಟು ಮನೆಯ ದೇವರ ಬಲ
ವಂದು ನೋಂಪಿಯ ನೋನುವಳು ೩೨

ಅತ್ತಣ ದೆಸೆಯಿಂದ ಬೀಸುವೆಲರನೆಲ
ರೊತ್ತಿನೊಳೆಸೆವ ಸೌಸವನ
ಸುತ್ತಿ ಸೌಸವವ ತುತ್ತುವ ತುಂಬಿಯ ಬೆಂ
ಬತ್ತಿ ಕೇಳುವಳವನಿರವ ೩೩

ಬೆಸಗೊಂಬಳಿನಿಯನಾವೆಡೆಯೊಳಿರುವನಾ
ದೆಸೆಯಿಂದ ಬಂದ ಬಂದವರ
ಬೆಸಗೊಂಬಳು ಜೋಯಿಸರ ಜೋಗಿಪುರುಷರ
ಬೆಸಗೊಂಬಳು ಬಿಜ್ಜೆವಳರ ೩೪

ಬೆಸಗೊಂಬಳಿನ್ನ ವಲ್ಲಭನೆಲ್ಲಿದನೆಂದು
ಬೆಸಗೊಂಬಳೆಂತಿರ್ಪನೆಂದು
ಬೆಸಗೊಂಬಳೆಂದಿಗೆ ಬಂದಪನೆಂದಿಂತು
ಬೆಸಗೊಂಬಳು ಬೇಸರದೆ ೩೫

ಇಂದಿಗೀ ಪಗಲಿಗೀ ಜಾವಕೀ ಘಳಿಗೆಗೆ
ಬಂದಪನೆಂದವರುಸಿರೆ
ಮಂದಹಸಿತ ಮುಖದಿಂದ ಮನದೊಳಾ
ನಂದದಿ ನಲವೇರುವಳು ೩೬

ಉಕ್ಕಿ ಸುರಿವ ಸೊಗದಾಲಿ ನೀರ್ವೊನಲಿಂದ
ಮಿಕ್ಕು ಮೀರುವ ನವಿರಿಂದ
ಸೊಕ್ಕುವ ಮನದಿಂದ ಸುತ್ತುಗೆಳದಿಯರ
ಬೆಕ್ಕಸ ಬೆರಗುವಡಿಪಳು ೩೭

ಈಗಲೆ ಬರ್ಪನೆಂಬುದನಾಲಿಸಿ ತಲೆ
ವಾಗಿಲ ತೆರೆಯಲೆಳಸುತ
ಬೇಗದೊಳವನ ಸೇವೆಗೆ ಬೇಕಾದುದ
ನಾಗಳೆಯನುಗೊಳಿಸುವಳು ೩೮

ಮೊದಲೊಳು ಮುಂದುವರಿವ ನೋಟದಿಂದೊಡ
ನೊದಗುವ ಹರ್ಷಾಶ್ರುವಿಂದ
ಮುದದೊಳು ಮುರಿದೇಳುವ ನವಿರಿಂದೊಡ
ನಿದಿರುಗೊಳುವಳಿನಿಯನನು ೩೯

೩೦, (ಗ) ಸರದಿ.

ಬಾಗಿಲ ಬಳಿಗೆ ಬಂದಪನೆಂಬುದುಮನು
ರಾಗರಸದ ಲಹರಿಯೊಳು
ಏಗೈವೆನೆಂಬುದನರಿಯುದವನಿಗಿದಿ
ರಾಗಿ ನಿಟ್ಟಿಸಿ ನಿಂದಿಹಳು ೪೦

ಪುಟ್ಟಿದಂದಿಂದ ಪುರುಳುಗಾಣದವರು
ನೆಟ್ಟನೆ ನಿಧಿಯ ಕಂಡಂತೆ
ಕಟ್ಟಿರಕದೊಳಿನಿಯನ ಕಾಣುತ ಮರ
ವಟ್ಟು ಮೈಮರೆತು ನಿಟ್ಟಿಪಳು ೪೧

ಯೋಗದಶಾ ಪರಿಣತಿಯೊಳು ತನಗಿದಿ
ರಾಗಿ ನಿಂದಿರ್ದ ದೇವತೆಯ
ಯೋಗಿಗಳಿರ್ದೆಗೊಳಿಪಂತಿನಿಯನೊಳನು
ರಾಗವೆರಸಿ ನಿಟ್ಟಿಪಳು ೪೨

ಕಾಣದೆ ಪಲವಗಲಿಂದ ಕಣ್ಮರೆಯಾದ
ಮಾಣಿಕ ಮೈದೋರಿದಂತೆ
ಪ್ರಾಣವಲ್ಲಭನ ಪಾದಾರವಿಂದಂಗಳ
ಕಾಣುತ ಕವಿದು ನಿಟ್ಟಿಪಳು ೪೩

ಪುಳಕದ ನೆವದಿಂದ ಪೊಣ್ಮುವ ಹರ್ಷದ
ಬೆಳೆಗೈಗೆ ನೀರೆರೆವಂತೆ
ತುಳುಕುವ ಸೊಗದಾಲಿ ನೀರ್ದೊರೆಯನು ತಂ
ದಿಳುಪುತವನ ನಿಟ್ಟಿಪಳು ೪೪

ಬಳಿಕ ಮನವ ಬಲಿವಿಡಿದಿನಿಯನ ಪಾದ
ನಳಿನಂಗಳಿಗೆ ನತಿಗೈದು
ಘಳಲನುಗುವ ಹರ್ಷಾಶ್ರುವಿಂದುಂಗುಟ
ಗಳನು ತೊಳೆದು [೪]ಪೂಜುವಳು ೪೫

ಕೆಲದೊಳಿರ್ಪಳು ಗೆಲ್ಲಗೊಂಬಳು ನೇಹವ
ಬಲಿವಳು ಬಣ್ಣವೇರುವಳು
ಒಲಿದು ನಿಟ್ಟಿಪಳೊಡನೊಡಲು ಮರೆತು ನಲಿ
ನಲಿವಳು ನಲವೇರುವಳು ೪೬

ಪೊರಮಟ್ಟು ಪೋದಂದು ಮೊದಲಿಂದು ವರೆಗೆ ತ
ನ್ನೆರೆಯನಿರ್ದಿರವೆಲ್ಲವನು
ಎರಕವೆರಸಿ ಕೇಳುವಳೆಡೆಯೆಡೆಯೊಳು
ಮರುಗುತ ಮನಗೊಳಿಸುವಳು ೪೭

ಎರವಿನಿತಿಲ್ಲದೆಂದಿನ ನೇಹದೊಳೊಡ
ವೆರಸುವಳೆದೆಗರಗುವಳು
ಪರಿಪರಿಯೂಳಿಗವನು ಪಣ್ಣಿ ತಣಿವಳು
ಪರಮಾನಂದವಡುವಳು ೪೮

ಜಾನಿಸುತಿನಿಯನ ಚರಿತವ ವಿರಹದೊ
ಳೀ ನೇಮವ ನೆಲೆಗೊಂಡ
ಮಾನಿನಿಗಿಹಪರದೊಳು ಮನದೊಲವರಿ
ತಾನಂದವೀವನಚ್ಯುತನು ೪೯

೪. । (ಗ) ಪೂಜಿಪಳು.

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಮನ್ನಣೆವಡೆದೊಪ್ಪಿದುದೇಳನೆಯ ಸಂಧಿ
ಸನ್ನುತ ಗುಣಸಂಬಂಧಿ ೫೦

## ಎಂಟನೆಯ ಸಂಧಿ

ಆವನಿಚ್ಛೆಯೊಳವತರಿಸಿದುದಾದಿಯೊ
ಳಾವನಿಂದೊಳ್ಪುವಡೆದುದು
ಆವನೊಳಡಗುವುದಖಿಳ ಚರಾಚರ
ವಾ ವಿಷ್ಣುಗಾನೆರಗುವನು ೧

ಶ್ರೀ ವಿಷ್ಣುವಲ್ಲಭೆಯೆನಿಸಿ ಸಕಲ ವೇ
ದಾವಳಿಯೊಳು ಜಸವಡೆದ
ಪಾವನಚರಿತೆಯ ಪದ್ಮಸದ್ಮೆಯ ಲ
ಕ್ಷ್ಮೀವನಿತೆಯ ವಂದಿಪೆನು ೨

ಲೋಕಶಾಸ್ತ್ರವನಾಲೋಚಿಸಿ ತಿಳಿದದ
ರೈಕಮತ್ಯವನಳವಡಿಸಿ
ಏಕಪತ್ನಿಯರೆಸಗುವ ದಿನಚರ್ಯೆಯ
ಜೋಕೆ ತಪ್ಪದೆ ಸೊಲ್ಲಿಸುವೆನು ೩

ಅರುಣೋದಯದ ಸಮಯದೊಳೆದ್ದು ಶ್ರೀ ಹರಿ
ಗುರುಚರಣಕೆ ಕೂರ್ತೆರಗಿ
ಪರಮಭಕ್ತಿಯೊ[೧]ಳೊಲಿದಿನಿಯನೆಚ್ಚರುವನ್ನ
ಮರುಕವೆರೆದು ಕಾದಿಹುದು[೧] ೪

೧. (ಖ) ಳಾತ್ಮಪತಿಯ ಪಾದವ ತನ್ನ ಶಿರಮೊಳು ಶೇಖರಿಸುವುದು.

ಸಡಿಲಿದ ಮುಡಿಯ ಸೈಪಿಡುತೊಂದರೊಳೊಂದು
ತೊಡಕಿದ ರನ್ನಸರಗಳ
ಬಿಡಿಸುತೆಚ್ಚರುವನ್ನೆವರಮಿನಿಯನ ಕೆಲ
ಗಡೆಯೊಳೊಲಿದು ಕಾದಿಹುದು ೫

ಎದ್ದು ನಿಟ್ಟಿಸುವಿನಿಯನ ನೋಟಕೆ ತನ್ನ
ಮುದ್ದು ಮೊಗವ ಮುಂಗೊಳಿಸಿ
ನಿದ್ದೆಯೊಳೆಸಗಿದ ನಿಖಿಲಾಪಚಾರವ
ತಿದ್ದುವುದಿನಿವಾತಿನೊಳು ೬

ಅಡಿಗಳಿಗೆರಗಿಯಾಣತಿಗೊಂಡು ಪೊಡಮ
ಟ್ಟೊಡನೂಳಿಗದ ಪೆಣ್ಗಳಿಗೆ
ಬಿಡುಗೆಲಸಂಗಳ ಬೆಸಸಿ[೨]ಯಾಪಂ[೨]ತೆ ತಾ
ನೊಡರಿಪುದೊಳ್ಗಜ್ಜವನು ೭

ಕರುತುರುಗಳ ಕಾಪಿಡುವ ಕರೆವ ಪಾ
ಲ್ಗರೆವ ಕಾಸುವ ಕೌಶಲವ
ಅರಿಯದ ಸೊಸೆ ಪೆಣ್ಮಕ್ಕಳಿಗಾ ಬಗೆ
ಯರಿವಂತನುಗೊಳಿಸುವುದು ೮

ದೇವಪೂಜೆಯ ದೇವರಿಗೆರಗುವುದತ್ತೆ
ಮಾವಂದಿರಡಿಗೆ ಮಣಿವುದು
ಭಾವಂದಿರಡಿಗೆ ವಂದನೆಗೈವುದು ತನ್ನ
ಭಾವಶುದ್ಧಿಯ ಬಳೆಯಿಪುದು ೯

೨. (ಗ) ಯಪ್ಪಂ.

ಮನಮೊಲಿದುಡಿಸಿ ತೊಡಿಸಿ ತಿಲಕಂಗಳ
ನನುಗೈದಾದರವೆರಸಿ
ಮನೆಯೊಳಿರುವ ಮಕ್ಕಳನೆಲ್ಲರನೊ
ಯ್ದನಿಬರಡಿಯೊಳೆರಗಿಪುದು ೧೦

ಕಳವು ಕಪಟಗಳ ಕಲಿಯದಂದದಿ ಮ
ಕ್ಕಳನಡಿಗಡಿಗಳುಕಿಪುದು
ಎಳಮೆಯೊಳೆದೆಗೊಂಡ ಸುಗುಣ ದುರ್ಗುಣಗಳ
ಕಳೆವುದರಿದು ಕಡೆಕಡೆಗೆ ೧೧

ಆರೈದು ತನ್ನಿನಿಯನ ಸಿರಿ ಬಡತನ
ವೀ ರೀತಿಯೆಂದೆದೆಗೊಳಿಸಿ
ಬಾರದ ವಸ್ತುವ ಬಯಸಿ ಬಾಧಿಸದೆ ಕೈ
ಸಾರಿದುದಕೆ ಸಮ್ಮತಿಪುದು ೧೨

ಹಸಗೆಡದಂತೆ ಹಕ್ಕಿಗಳು ಕುಟುಕದಂತೆ
ಪಸುಗಳು ಬಾಯಿಡದಂತೆ
ಕಸ ಪುಗದಂತೆ ಕಾಪಿಡುವುದು ಧಾನ್ಯವ
ಜಸವಡೆವುದು ಜಾಣ್ಮೆಯೊಳು ೧೩

ಸಾವಧಾನದೊಳು ಸಂಪಾದಿಸಿ ಮನೆಯೊಳು
ತೀವಿದ ದಿವ್ಯ ವಸ್ತುಗಳ
ದೇವರಾರೋಗಣೆಗೆಂದೆಲ್ಲವ ಭಕ್ತಿ
ಭಾವದಿ ಪರಿಶೋಧಿಪುದು ೧೪

ಪಳದಾಗದ ಮುನ್ನ ಬಣ್ಣಗೆಡದ ಮುನ್ನ
ಮೊಳೆದೋರಿ ಮುಗ್ಗದ ಮುನ್ನ
ಕಳೆಯಳಿಯದ ಮುನ್ನ ಕಂದಿ ಕುಂದದ ಮುನ್ನ
ಬಳಸುವುದಖಿಳ ವಸ್ತುವನು ೧೫

ಮಿಾಸಲಳಿಯದಂತೆ ಮಿದಿವರೆವುದುರ್ದುವ
ಬೀಸುವರನು ಬೆಸಸುವುದು
ಈ ಸುವಸ್ತುವನಿಂತನುಗೊಳಿಸುವ ಬಗೆ
ಲೇಸೆಂಬವೊಲೆಸಗುವುದು ೧೬

ಕೆಲಗಂದು ಬೇರು ಗೆಣಸು ದಂಟು ಕುಡಿ ಕಾ
ಯೆಲೆ ಮಿಡಿಗಾಯಿಗಳೆಂಬ
ಪಲವಗೆ ಶಾಕದೊಳುಚಿತಾನುಚಿತವ
ನೆಲೆಯರಿವುದು ನೇಮದೊಳು ೭೧

ಕೊಳೆತ ಕಂದಿದ ಇಲಿ ತಿಂದುಳಿದ ಮಿಾಸ
ಲಳಿದಲ್ಲದವರು ತಂದಿತ್ತ
ಪುಳಿತ ಪೊಲ್ಲದ ನೆಲದೊಳು ಪುಟ್ಟಿದ ಶಾಕಂ
ಗಳನು ಕಳೆದು ಬಿಸುಡುವುದು ೧೮

ಆಚಾರದಿಂದನುಪಮಧರ್ಮದೇಳಿಗೆ
ಆಚಾರದಿಂದಾಯುಷ್ಯ
ಆಚಾರದಿಂದಿಹಪರವದರಿಂದ ಸ
ದಾಚಾರವತಿಯೆನಿಸುವುದು ೧೯

ಆದಿಯೆನಿಪುದಾಚಾರಂಗಳಿಗೆ ಮಿಾಹ
ವಾದ ಬಗೆಯೊಳದನರಿತು
ಆದರವೆರಸಿ ಮಿಾವುದು ಮೊದಲೊಳು ಮಿಕ್ಕ
ವೇದವಿಧಿಯನೆಸಗುವುದು ೨೦

ಇಳಿದು ನೀರೊಳು ಮಿಾವುದಿದಕಾರದವರು ಮೈ
ದೊಳೆವುದು ಮಂಡೆಯನುಳಿದು
ಚಳಿಯ ಸೈರಿಸಲಾರದ ಸತಿಯರು ಬಿಸಿ
ಯೊಳು ಮಿಾವುದು ಮೈದೊಳೆವುದು ೨೧

ಬಳಿದ ಬೇನೆಯ ಬಡಮೆಯ್ಯ ಭಾವೆಯರೆದ್ದು
ತೊಳೆದು ಕೈಕಾಲು ಮೊಗಗಳ
ಉಳಿದಂಗವನು ನನೆದುಡೆಯೊಳು ತೊಡೆವುದು
ಕಳೆವುದು ಪಾಪಕರ್ಮವನು ೨೨

ನೀರೊಳು ಮೆಯ್ಯ ನೇಮದೊಳು 'ಕರಣಗಳ'
ಭೂರಿಸತ್ವದೊಳು ಬುದ್ಧಿಯನು
ನಾರಾಯಣನಾಳುತನದೊಳಾತ್ಮನ ತೊಳೆ
ದೋರಂತೆ ಒಳ್ಪುವಡೆವುದು ೨೩

ಸಲೆ ಚಿನ್ನ ಬೆಳ್ಳಿ ಹಿತ್ತಳೆ ಕಂಚು ತಾಮ್ರದ
ಪಲಬಗೆ ಪಾತ್ರಂಗಳನು
ಕಿಲುಬಿನ ಕರೆ ತೋರದಂತಾದರದಿಂ
ದಲಸದೆ ತೊಳೆವುದಂದಂದು ೨೪

(ಖ) ಇಂದ್ರಿಯಗಳ

ಅಡಿಗೆ ಮನೆಗೆ ದೇವತಾರ್ಚನೆಯೆಡೆಗೆ ತಾ
ವಡಿದೊಳೆವುದಕೆಂದು ಬೇರೆ
ಮಡಗಿಸುವುದು ಮರ್ಯಾದೆಯರಿತು ನೀರ
ಕೊಡಗಳ ಕುಲಪಾಲಕಿಯರು ೧೫

ರಚನೆಯ ಬಗೆ ರಯ್ಯಮಾಗೆಯುಪಸ್ಕರ
ಉಚಿತಮೆನಿಸಿಯೊಪ್ಪುವಡೆಯೆ
ಶುಚಿ ರುಚಿಯಪ್ಪಂತೆ ಸುಯಿಧಾನದೊಳೈದೆ
ಪಚನಗೈವುದು ಭಾವೆಯರು ೧೬

ಬೆಂದು ಬೇಯದೆ ಗಬ್ಬದೊಳು ಪಸಿಯಾದುದ
ಬೆಂದುರೆ ತಳ ಪೊತ್ತಿದುದನು
ಅಂದವಳಿದುದನಚ್ಯುತನಾರೋಗಣೆ
ಗೆಂದು ಮುಂದಿಡದೆ ಕಳೆವುದು ೧೭

ಮೈದೊಳೆಯದ ಮಡಿಯುಡದ ಮೈಲಿಗೆಯೆಂಜ
ಲಾದ ನಾರಿಯರನುಗೈದ
ಈ ದೇವರಾ ದೇವರಿಗೆಂದುದನು ನಿ
ವೇದಿಸಲಾಗದಚ್ಯುತಗೆ ೧೮

ದೇವರಿಗೆರಗಿ ದೇವರ ಮನೆವೊಕ್ಕಲ್ಲಿ
ತೀವಿರುವುಪಕರಣಗಳ
ಸಾವಧಾನದಿ ಸಜ್ಜುಗೈವುದು ಜನ್ಮವ
ಪಾವನವೆನಿಸಿ ಬಾಳುವುದು ೧೯

ಸಾರಿಸಿ ರಂಗವಲ್ಲಿಯ ಸರಗೊಳಿಸಿ ದೀ
ಪಾರೋಪಣವನಾಚರಿಸಿ
ಹಾರುತ ಮನದನ್ನನ ಬರವನೆ ಮನ
ವಾರೆ ಕಾದಿಹುದು ಕಾಂತೆಯರು ೩೦

ಒಡನೆ ತನ್ನಿಷ್ಟದೇವತೆಗಾರೋಗಣೆ
ವಡಿಸಿ ತಂದಮೃತಾನ್ನವನು
ತಡೆಯದಿನಿಯನನುಮತಿವಡೆದದನುಣ
ಬಡಿಸುವುದುಪಚರಿಸುವುದು ೩೧

ಅತಿಥಿಗಳಭ್ಯಾಗತರೊಡನಧವರ
ಯತಿ ಯಾಚಕರೆಲ್ಲರನು
ಪತಿಕರಿಸುವುದು ಬಳಿಕ ಸಂತಸದೊಳು
ಸತಿಯರು ಸವಿವುದನ್ನವನು ೩೨

ತಿಳಿವಂತೆ ಪೇಳುವ ದೇಶಿಕೋತ್ತಮನಂಘ್ರಿ
ನಳಿನಂಗಳಿಗೆ ನತಿಗೈದು
ಬಳಿಕ ಭಾರತ ಭಾಗವತ ರಾಮಾಯಣ
ದೊಳುಗತೆಗಳನು ಕೇಳುವುದು ೩೩

ತಿಳಿದದರೊಳು ತತ್ವದಿರವ ಮಾಧವನಂಘ್ರಿ
ಯೊಳು ಭಕ್ತಿಭಾವವ ಬಲಿಸಿ
ಕಳೆವುದು ಸಕಲ ಕರಣ ಕಲ್ಮಷಗಳ
ತೊಳೆವುದು ಮನದ ದೂಳುಗಳ ೩೪

ಏರು ಜವ್ವನದ ನೀರೆಯರಿನಿತನಿತಕ್ಕೆ
ಮೋರೆಗಾಣಿಸಿ ಮುಂಬರಿಯದೆ
ಮಾರಬಾರದ ಕಜ್ಜದೊಳು ಮೇರೆಯರಿತು ಮೈ
ದೋರಿ ನಡೆವುದುಚಿತದೊಳು ೩೫

ಸಜ್ಜುವಡೆಯೆ ಸೌಮ್ಯತೆ ಸರ್ವಾಂಗದೊ
ಳುಜ್ಜುಗಗೊಳೆಯೊಳ್ನಡತೆ
ಲಜ್ಜೆ ಬಿಂಬಿಸೆ ಲಾವಣ್ಯದೊಳೊಯ್ಯನೆ
ಪಜ್ಜೆಯಿಡುವುದು ಭಾವೆಯರು ೩೬

ನೆಲನ ನಿಟ್ಟಿಸೆ ದಿಟ್ಟ ನೇಮದೊಳಿರೆ ಮನ
ತಲೆ ನಸುಮಣಿದಂದವಡೆಯೆ
ಒಲೆಯದೆ ಮೆಯ್ಯೊಪ್ಪದೊಳಿರೆ ಒಯ್ಯನೆ
ಕುಲವಧು ಪಜ್ಜೆಗೊಳುವುದು ೩೭

ತನ್ನೊಡಲಿಗೆ ತನ್ನ ಮನವ ಕಾಪಿಡುವುದು
ತನ್ನ ಮನಕೆ ತನ್ನ ಮತಿಯ
ತನ್ನ ಮತಿಗೆ ತನ್ನ ಸಾತ್ವಿಕ ಧೈರ್ಯವ
ನುನ್ನತಿವಡೆದೊಪ್ಪುವುದು ೩೮

ತನ್ನ ಮನೆಯ ಬಡತನಗಳ ಧನಗಳ
ತನ್ನಿನಿಯನ ತಪ್ಪುಗಳ
ತನ್ನ ಮರವೆ ಮೋಸಗಳನವರಿವರೊಳು
ಬಿನ್ನವಿಸದೆ ಮರಸುವುದು ೩೯

ಪಲವೇಳೆಯೊಳು ಪರಿಯದೆ ತಾಯ್ಮನೆಗಲ್ಲಿ
ಪಲವಗಲಿದ್ದು ನೆಲಸದೆ
ಪಲಬಗೆಯೊಳು ಪತಿಪದವನಗಲಿದೊಂದು
ಕಲೆಯ ಕಲ್ಪದ ವೋಲೆಣಿಪುದು ೪೦

•ಪೆರರ ಮರ್ಮವ ಪೆರರಾಲೋಚನೆಗಳ
ಪೆರರೇಕಾಂತದೆಸಕವ
ಪೆರತೊರ್ವರಿಗೆ ಪೇಳುವ ಬೆಸನವ ಬಿಟ್ಟು
ನೆರೆ ನೇಮದೊಳು ನೆಲಸುವುದು• ೪೧

ನೆರೆಮನೆ ಮನೆವಾರ್ತೆಯನಿಂತಂತೆಂದು
ಪರಿಹಾಸ ಗೈದು ಪಳಿಯದೆ
ಪರರೊಳು ಪರಿವಾದವ ಬಣ್ಣಿಸುವರೊಡ
ವೆರಸದೆ ಬೇರೆನಿಸುವುದು ೪೨

ಪರಿದೂರ ಬೀದಿ ಬೀದಿಯ ಪಲವನೆಯೊಳು
ತಿರುಗುವ ದಿಟ್ಟವೆಣ್ಗಳನು
ಕರೆದು ಮನ್ನಿಸದೇಕಾಂತವನಾಡದೆ
ಪರಿಹರಿಪುದು ಪದುಳದೊಳು ೪೩

ಬಂಡು ಬೂತಾಟದ [ಬಣ್ಣನೆ]ಯನು ಕಿವಿ
ಗೊಂಡು ಕೇಳದೆ ಕುರುಪಿಡದೆ
ಚಂಡಿ ಚಪಲೆ ಚಾಡಿಕಾತಿಯೆನಿಸದೆ ನ
ಲ್ವೆಂಡಿರಿರ್ಪುದು ನಲ್ಮೆಯೊಳು ೪೪

೪. ಈ ಪದ್ಯ (ಖ) ಪ್ರತಿಯಲ್ಲಿಲ್ಲ.

ಕೆಟ್ಟರಳಿದರೆಂಬ ಕೀರ್ತಿಗಂಜದ ೫[ಚ]೫ಳಿ
ಬಿಟ್ಟ ಕೆಳದಿ ಪೆಣ್ಗಳೊಳು
ನೆಟ್ಟನೆ ಬಳೆದಿರ್ದ ನೇಹವ ನೆನೆಯದೆ
ಪೊಟ್ಟು ಕಳೆದು ಪೊರಡಿಪುದು ೪೫

ತೊಂಡುವೆಣ್ಗಳ ನೇಹದೊಡಕಿಗೆ ಸಿಲುಕದೆ
ಲಂಡವೆಣ್ಗಳ ಲಾಲಿಸದೆ
ಪುಂಡವೆಣ್ಗಳೊಳು ಪೊರ್ದುಗೆವಡೆಯದೆ ನ
ಲ್ವೆಂಡಿರೊಡನೆ ಬೆರಸುವುದು ೪೬

ಕಂಡ ಕಡೆಗೆ ನಡೆನಡೆದಳುಕದೆ ಕಾಲು
ಗಂಡ ಕರಾಳಿವೆಣ್ಣುಗಳ
ಅಂಡಲೆದವರೊಳು ಬಳೆದೊಳ್ನೇಹವ
ಬೆಂಡುಗಳೆದು ಬಿಡಿಸುವುದು ೪೭

ಮರುಳಾಗಿ ಮತ್ತೆ ಮಬ್ಬಿನೊಳಿದದಿಲ್ಲೆಂ
ದೊರೆದಿನಿಯನನೇಳಿಸದೆ
ಇರುಳಿಗೆಂದಿಳಿವೊತ್ತಿನೊಳೆಲ್ಲ ವಸ್ತುವ
ತರಿಸುವುದನುವಡಿಸುವುದು ೪೮

ನೆನೆದೊಂದೊಂದನೆಡೆಯೊಳಿದ್ದಾಣ್ಮನ
ಮನವ ನೋಯಿಸಿ ಮರುಗಿಸದೆ
ಮನೆಗೆಲಸವನೆಲ್ಲವನಾರೈದು ಮ
ತ್ತಿನಿಯನ ಶಯ್ಯೆಗೇರುವುದು ೪೯

ಪಗಲಿರುಳೀ ಪರಿಯೊಳು ನಡೆದಿನಿಯನ
ಬಗೆಯ ತಿಳಿದು ಬಂದಿಗೊಂಬ
ಸುಗುಣೆಯರಿಹಪರದೊಳು ಸೂರೆಗೊಂಬರು
ಸೊಗದ ಸುಗ್ಗಿಯ ಸುಲಭದೊಳು ೫೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಪ್ಪಿದುದೆಂಟನೆಯ ಸಂಧಿ
ಸನ್ನುತ ಗುಣಸಂಬಂಧಿ ೫೧

## ಒಂಬತ್ತನೆಯ ಸಂಧಿ

ಆವನಾಣತಿಯೊಳಗ ಕರ್ಮಯೋಗ ಮ
  ತ್ತಾವನ ನೆನಹು ವಿಜ್ಞಾನ
ಆವನೊಳಿರಕ ಭಕುತಿಯಾ ಪರವಾಸು
  ದೇವನಿಗಾನೆರಗುವೆನು ೧

ಜ್ಞಾನ ವೈರಾಗ್ಯ ಶ್ರೀಹರಿಭಕ್ತಿ ಸತ್ಕರ್ಮ
  ಹೀನರನೆಮ್ಮನಾರೈದು
ಆ ನಾರಾಯಣನಡಿಗೆರಗಿಪ ಸಿರಿ
  ಗಾನತಿಗೈದು ಬಾಳುವೆನು ೨

ಪತಿಪಾದಭಕ್ತೆಯರೆನಿಪ ಸತಿಯರು ತಾ
  ವತಿಶಯ ಗತಿಗೆಳಸಿದೊಡೆ
ಇತರ ಚಿಂತೆಯನುಳಿದೇಕಚಿತ್ತದೊಳು ಶ್ರೀ
  ಪತಿ ಪಾದವನೆ ಭಜಿಸುವುದು ೩

ಆವ ದೇವರನಾವರು ಭಜಿಸುವರಾ
  ದೇವರನವರು ಸೇರುವರು
ಆವ ಭೋಗದೊಳಾ ದೇವರಿರ್ಪರು ತಾ
  ವಾ ವಿಧದೊಳು ಬಾಳುವರು ೪

ಶ್ರೀವರನಡಿಯ ಸೇರಿದರನುಳಿದು ಮಿಕ್ಕ
ದೇವಲೋಕವನೇರಿದವರು
ದೇವರೊಡನೆ ತಾವುಮಳಿವರೆಂಬುದನು ಗೀ
ತಾ ವಚನದೊಳು ತಿಳಿವುದು ೫

ಅದೆಂತೆನೆ

ಶ್ಲೋ॥ ಆಬ್ರಹ್ಮಭುವನಾಲ್ಲೋಕಾಃ
ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ
ಪುನರ್ಜನ್ಮ ನ ವಿದ್ಯತೇ ॥

ಭಗವದ್ಗೀತಾ ಅಧ್ಯಾಯ ೮, ಶ್ಲೋಕ ೧೬

ಪರಹಿಂಸೆಯೆಸಗದೆ ಪರಧನಕಳುಪದೆ
ಪರಪುರುಷಂಗಾಸೆವಡದೆ
ಸಿರಿಯರಸನ ಪಾದಸೇವೆ ಗೈದವರಾ
ಪರಮಪದವನು ಸೇರುವರು ೬

ಚಾಡಿವೇಳದೆ ಚಂಡಿತನವೆಸಗದೆ ಚುನ್ನ
ವಾಡದೆ ಜರೆದು ನುಡಿಯದೆ
ಕೇಡೆಣಿಸದೆ ಕೆಲರಿಗೆ ಹರಿಪದಸೇವೆ
ಗೀಡಾಗಿ ಗತಿಯ ಪಡೆವುದು ೭

ಸೇರುವುದಿಹಪರಗತಿ ನಾರಾಯಣ
ನಾರಾಧನೆಯೊಳೆಲ್ಲರಿಗೆ
ಆರಯ್ಯೆ ಸಕಲ ಸತ್ಕರ್ಮಂಗಳಚ್ಯುತ
ನಾರಾಧನೆಯೆನಿಸುವುವು ೮

ಇದನಾಚರಿಸುವುದಿದ[1]ನುಳಿ[1]ದಿರ್ಪುದೆಂ
ಬುದನಾರೈದು ಶಾಸ್ತ್ರದೊಳು
ಎದೆಗೊಳುವಂತೆ ಪೇಳುವ ಪಿರಿಯರ ದಿವ್ಯ
ಪದಸೇವೆ ಗೈದು ಬಾಳುವುದು ೯

ಇದನಾಚರಿಸಿದೊಡೀ ಫಲವಪ್ಪುದೆಂ
ಬುದು ಕಾಮ್ಯಕರ್ಮವೆನಿಪುದು
ಮುದದಿಂದ ಮುಕ್ತಿಯನೆಳಸುವ ಕೋವಿದ
ರಿದರ ಹಂಬಲನು ಬಿಟ್ಟೈಹುದು ೧೦

ಆವುದನೆಸಗದಿರ್ದೊಡೆ ಪಾಪವಾ ಕರ್ಮ
ಭಾವಿಸೆ ನಿತ್ಯವೆನಿಪುದು
ಆವ ವಿಧದೊಳಾದೊಡಮಾ ಕರ್ಮವ
ನಾವಗಮಾಚರಿಸುವುದು ೧೧

ಈ ನಿಮಿತ್ತದೊಳಿದನೆಸಗುವುದೆಂಬುದು
ತಾನೈಸೆ ನೈಮಿತ್ತ ಕರ್ಮ
ಆ ನಿಮಿತ್ತದೊಳಾಚರಿಸುವುದೆಲ್ಲರು
ಮಾ ನೈಮಿತ್ತ ಕರ್ಮವನು ೧೨

ಇಂತು ಮುಕ್ತಿಯನೆಳಸುವರು ಕಾಮ್ಯವನುಳಿ
ದಂತರಂಗದ ಶುದ್ಧಿಯೊಳು
ಚಿಂತೆಗೊಳದೆ ನಿತ್ಯ ನೈಮಿತ್ತ ಕರ್ಮವ
ಸಂತಸದೊಡನೆಸಗುವುದು ೧೩

೧. (ಗ) ನರಿ.

ಇದು ಜಗದೀಶ್ವರನಾಜ್ಞೆಯೆನಗೆ ತಾ
ನಿದನಾಚರಿಸಬೇಕೆಂದು
ಮುದದೊಡನೊಡರಿಪರಿಗೆ ಮೋಸವಿಲ್ಲೆಂ
ಬುದನರಿವುದು ಗೀತೆಯೊಳು ೧೪

ಶ್ಲೋ॥ ನೇಹಾಭಿಕ್ರಮ ನಾಶೋಽಸ್ತಿ
ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ
ತ್ರಾಯತೇ ಮಹತೋ ಭಯಾತ್ ॥

ಭಗವದ್ಗೀತಾ ಅಧ್ಯಾಯ ೨, ಶ್ಲೋಕ ೪೦

ಈಯೆಸಕದೊಳಿರೆ ಶೂದ್ರರಾದೊಡಮಾ
ಸ್ತ್ರೀಯರಾದೊಡಮೇನವರು
ಆ ಯೋಗಿಗಳಡರುವ ಪರಗತಿಗೆ ತಾ
ವಾಯಾಸವಿಲ್ಲದೇರುವರು ೧೫

ಇಂತಪ್ಪುದಕ್ಕಂ ಗೀತಾವಚನಂ :

೨ಶ್ಲೋ॥ ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾ
ಸ್ತೇಽಪಿಯಾಂತಿ ಪರಾಂಗತಿಮ್೨ ॥

ಭಗವದ್ಗೀತಾ: ಅಧ್ಯಾಯ ೯, ಶ್ಲೋಕ ೩೨

ಶುಚಿಯಾಗಿರೆ ದೇವತೆಗಳು ಸಲಹುವರು
ಶುಚಿಯನು ಪಿತೃಗಳೋವುವರು
ಶುಚಿಗಂಜುವುವು ಪ್ರೇತ ಭೂತಗಳದರಿಂದ
ಶುಚಿಯುಪ್ಪುದೆಲ್ಲ ವೇಳೆಯೊಳು) ೧೬

೨. (ಖ) ಪ್ರತಿಯಲ್ಲಿ ಈ ಕೆಳಗಿನ ಪಙ್ಕ್ತಿಯೂ ಇದೆ.
ಕಿಂಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ.

ಪಿರಿಯರ [೩]ನಿಟ್ಟಿಸಿದೊಡನೆ[೩] ಪೋಪುದು ಭೀತಿ
ಪರಿದೋಡುವುವು ಪಾಪಗಳು
ಇರದದರಿಂದ ಶ್ರೀ ಹರಿಶರಣರ ದಿವ್ಯ
ಚರಣ ದರ್ಶನವೆಸಗುವುದು ೧೭

ಪರಮ ವಿಶ್ವಾಸವೆರಸಿ ವಿಷ್ಣು ವೈಷ್ಣವ
ಚರಣ ತೀರ್ಥವ ಸೇವಿಸಿದೊಡೆ
ಪರಿದೋಡುವುವು ಸಕಲ ಪಾಪಂಗಳು
ಪರಮ ಪದವಿ ಬಸವಹುದು ೧೮

ತಿಳಿಯೆ ಮಾನುಷಲೋಕದಿಂದಾ ಜವನೂರ
ಬಳಿಗೈದುವ ಪೆರ್ಬಟ್ಟೆ
ಉಳಿಯದೆಂಬತ್ತೆಂಟು ಸಾಸಿರ ಗಾವುದ
ದಳತೆಯ ನೀಟವೆನಿಪುದು ೧೯

ಊರು ಕೇರಿಗಳಿಲ್ಲ ಒರ್ವರ ನೆರವಿಲ್ಲ
ನೀರು ನೆಳಲು ತಾನಿಲ್ಲ
ಸೇರಿ ನಿಲುವದೊಂದು ಠಾವಿಲ್ಲವೆನಲಾ
ದಾರಿಯನೇವೇಳುವುದು ೨೦

ಪುರಿದಂತೆ ಬೇವುರಿ ಮಳಲ ರಾಶಿಗಳಿಂದ
ಹರಹಿದ ಮುಳ್ಳುಗಳಿಂದ
ಪರಿಪರಿ ಗೋರುಕಲ್ಲುಗಳಿಂದ ಪಜ್ಜೆಯ
ನುರಿಗೊಳಿಸುವುದೊಡನೊಡನೆ ೨೧

೩. (ಕ, ಗ) ದರ್ಶನದಿಂದ.

ಆರಯ್ಯೆ ದಾನವೀಯದ ಪಾಪಿಗಳೀ
ದಾರಿವಿಡಿದು ನಡೆತಹರು
ಭೂರಿ ದಾನಗಳಿತ್ತ ಪುಣ್ಯ ಪುರುಷರೀ
ದಾರಿಯೊಳಿಡರಡಿಗಳನು ೨೨

ಪೊಡವಿಯ ಪಾಸಿಕೆಗಳನುಂಬ ಊಟವ
ಕುಡಿನೀರ ತುರು ಕುದುರೆಗಳ
ಉಡೆಗಳನೊಳ್ಮಣಿಗಳನೊಲಿದೀವುದು
ಪಡೆವುದು ಪರಮ ಗತಿಗಳನು ೨೩

ಅಲಸದೆ ಮುಕ್ತಿಯನಾಸೆವಡುವರನ್ಯ
ಫಲವ ಬಯಸಿ ಬಣ್ಣಗೆಡದೆ
ನೆಲೆಗೊಂಡ ನಿಜಧರ್ಮದ ನೇಮವಳಿಯದೆ
ಪಲವು ದಾನವ ಪಣ್ಣುವುದು ೨೪

ತಾಳಿಗೆಯೊಣಗದ ಮುನ್ನಮೆ ನಾಲಗೆ
ಬೀಳದ ಮುನ್ನಮೆ ಬೇಗ
ಪೇಳುವುದಂಬುಜಾಕ್ಷನ ಪೆಸರುಗಳನು
ಪೇಳಲರಿಯದೊಡಾಲಿಪುದು ೨೫

ಶ್ರೀವಿಷ್ಣು ಭಕ್ತಿಯಿಂದತಿವೇಗದೊಳು ದುಃ
ಖಾವಳಿಯಳಿವುದೆಂಬುದಕೆ
ಭಾವಿಸೆ ಭಾಗವತದೊಳೊಂದು ಕಥೆಯುಂ
ಟಾ ವಿಧವನು ಬಣ್ಣಿಪೆನು ೨೬

ತಕ್ಷಕನಿಂದ ತನಗೆ ಅಳಿವಪ್ಪುದಿ
ನ್ನಕ್ಷಯಗತಿಗೊಂಬನೆಂದು
ಆ ಕ್ಷಣದೊಳು ಶುಕಮುನಿಯಡಿಗೆರಗಿ ಪ
ರೀಕ್ಷಿತನಿಂತು ಕೇಳಿದನು ೨೭

ಸಾವಡಸಿದ ಸಮಯದೊಳು ಸದ್ಗತಿಗಾಗಿ
ಯಾವುದನೊಲಿದಾಲಿಪುದು
ಆವುದನೋದುವುದಾವುದನೊಡರಿಪು
ದಾವುದನಿರದೆ ನೆನೆವುದು ೨೮

ಇಂತು ನುಡಿದ ಪರೀಕ್ಷಿತರಾಯಗೆ ಮಿಗೆ
ಸಂತಸವನು ಸಮನಿಸುತ
ತಾಂ ತಿಳಿದಖಿಲಶಾಸ್ತ್ರದ ತತ್ವಮನೋ
ರಂತರುಹಿದನಾ ಯೋಗಿ ೨೯

ಅರಸ ಕೇಳಾಪತ್ತಡಸಿದ ವೇಳಗೆ
ಹರಿಕಥೆಗಳನೆ ಕೇಳುವುದು
ಹರಿನಾಮಂಗಳನೊಲಿದೋದುವುದು ಶ್ರೀ
ಹರಿಪದಂಗಳನೆ ನೆನೆವುದು ೩೦

ಹರಿಪಾದಪದ್ಮದ ಸೇವೆಯಿಲ್ಲದೆ ಪಲ
ವರಿಸಮಿದ್ದೊಡೆ ಫಲವೇನು
ಮುರವೈರಿಯ ನೆನೆದೊಂದು ಮುಹೂರ್ತಕೆ
ಪರಗತಿ ಬಯಸಿದಂತಹುದು ೩೧

ಅಂದು ಖಟ್ವಾಂಗನೆಂಬರಸು ತಾನಳಿವುದ
ಕೊಂದು ಮುಹೂರ್ತದೊಳರಿತು
ಕುಂದದೆ ಭಜಿಸಿ ಮುಕುಂದನ ಚರಣವ
ಸಂದನು ಪರಮಪದವಿಗೆ ೩೨

ಏಳಿಲೆ ಭರತವಂಶಾಗ್ರಣಿ ಬೇಗದೊ
ಳೇಳು ಭಜಿಸು ಮಾಧವನ
ಏಳು ದಿವಸದಾಯುವಿರ್ಪುದು ನಿನಗಿ
ನ್ನಾಲೋಚನೆಯೇತಕಿದಕೆ ೩೩

ಈ ವಿಧದೊಳು ಪೇಳಿದ ಶುಕಮುನಿಗೆ ಪ
ದಾವನತಿಯನಾಚರಿಸಿ
ಭಾವಶುದ್ಧಿಯೊಳು ಭಾಗವತವ ಕೇಳಿಯಂ
ದಾ ವಿಷ್ಣುಪದವನೈದಿದನು ೩೪

ಆರಯ್ಯೆ ವಿಷ್ಣುಪುರಾಣ ರಾಮಾಯಣ
ಭಾರತ ಭಾಗವತಗಳ
ಆರು ಪಿರಿಯರಿಂದಾಲಿಪರವರಿಗೆ
ಸೇರುವುವಖಿಳ ಸಿದ್ಧಿಗಳು ೩೫

ಇದಕೆ ಸಮ್ಮತಿ ವಚನಂಗಳು ಪಲವುಂ
ಟದರೊಳೊಂದೆರಡನೋದುವೆನು
ಅದರರ್ಥಂಗಳನೆಲ್ಲರುಮರಿವಂತೆ
ಪದರಚನೆಯೊಳು ಬಣ್ಣಿಪೆನು ೩೬

ಶ್ರೀ ಭಾಗವತೇ ಪ್ರಥಮಸ್ಕಂಧೇ, ಪ್ರಥಮೇಧ್ಯಾಯೇ

ಶ್ಲೋ॥ ಧರ್ಮಃ ಪ್ರೋಜ್ಝಿತ ಕೈತವೋತ್ರ
ಪರಮೋ ನಿರ್ಮತ್ಸರಾಣಾಂ ಸತಾಂ ।
ವೇದ್ಯಂ ವಾಸ್ತವಮತ್ರ ವಸ್ತು
ಶಿವದಂ ತಾಪತ್ರಯೋನ್ಮೂಲನಂ ॥
ಶ್ರೀಮದ್ಭಾಗವತೇ ಮಹಾಮುನಿಕೃತೇ
ಕಿಂ ವಾ ಪರೈರೀಶ್ವರಃ ।
ಸದ್ಯೋ ಹೃದ್ಯವರುಧ್ಯತೇತ್ರ
ಕೃತಿಭಿಃ ಶುಶ್ರೂಷುಭಿಸ್ತತ್ ಕ್ಷಣಾತ್ ॥

ವೇದವ್ಯಾಸನಣುಗನಾ ಶುಕಮುನಿ
ಯಾದರದಿಂದನುಗೈದ
ವೇದ ತತ್ವಾರ್ಥಮೆನಿಪ ಭಾಗವತವ
ನಾದರದಿಂದಾಲಿಪುದು ೩೭

ಮದ ಮತ್ಸರಂಗಳಡಗಿದ ಮಹಾತ್ಮರ
ಸದಮಳ ಧರ್ಮವಿದರೊಳು
ಇದು ತಾಪತ್ರಯ ಹರವಿದನಾಲಿಪ
ರೆದೆಯೊಳು ಹರಿ ನೆಲಸುವನು ೩೮

ಶ್ರೀ ವಿಷ್ಣುಪುರಾಣೇ ಷಷ್ಠೇ ಅಂಶೇ ಚರಮೇ ಅಧ್ಯಾಯೇ

ಶ್ಲೋ॥ ಪುರಾಣಂ ವೈಷ್ಣವಂ ಚೈತತ್
ಸರ್ವಕಿಲ್ಬಿಷನಾಶನಂ ।
ವಿಶಿಷ್ಟಂ ಸರ್ವಶಾಸ್ತ್ರೇಭ್ಯಃ
ಪುರುಷಾರ್ಥೋಪಪಾದಕಂ ॥

ಯತ್ರಾದೌ ಭಗವಾನ್ ಚರಾಚರ
ಗುರುರ್ಮಧ್ಯೇ ತಥಾಂತೇ ಚ ಸಃ ।
ಬ್ರಹ್ಮಜ್ಞಾನಮಯೋಽಚ್ಯುತೋಽಖಿಲ
ಜಗನ್ಮಧ್ಯಾಂತ ಸರ್ಗಪ್ರಭುಃ ॥
ತಚ್ಛೃಣ್ವನ್ಪುರುಷಃ ಪವಿತ್ರ
ಪರಮಂ ಭಕ್ತ್ಯಾ ಪರನ್ಧಾರಯನ್ ।
ಪ್ರಾಪ್ನೋತ್ಯಸ್ತಿನತತ್ಸಮ
ಸ್ತ್ರಿಭುವನೇಷ್ವೇಕಾಂತಸಿದ್ಧಿರ್ಹರಿಃ ॥

ಇದನು ಶ್ರೀ ವಿಷ್ಣು ಪುರಾಣವೆಂಬರು ಮ
ತ್ತಿದರಿಂದ ಪಾಪ ಪರಿವುದು
ಇದು ಸರ್ವ ಶಾಸ್ತ್ರದೊಳುತ್ತಮವೆನಿಸುವು
ದಿದು ಸರ್ವಫಲವ ಸಾಧಿಪುದು ೩೯

ಆದಿ ಮಧ್ಯಾಂತ ರಹಿತನಚ್ಯುತನಿದ
ರಾದಿ ಮಧ್ಯಾಂತದೊಳಿಹನು
ಈ ದಿವ್ಯ ವಿಷ್ಣು ಪುರಾಣವ ಕೇಳುವ
ರಾ ದೇವನಡಿಯ ಸೇರುವರು ೪೦

ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚರಮಸ್ಸರ್ಗೇ

ಶ್ಲೋ ॥ ರಾಮಾಯಣಮಿದಂ ಕೃತ್ಸ್ನಂ
ಶೃಣ್ವತಃ ಪರತಸ್ಸದಾ ।
ಪ್ರಿಯತೇ ಸತತಂ ರಾಮ
ಸ್ಸಹಿ ವಿಷ್ಣುಸ್ಸನಾತನಃ ॥

ಪಾಪಾನ್ಯಪಿ ಚಯಃ ಕೃತ್ವಾ
ಅಹನ್ಯಹನಿ ಮಾನವಃ ।
ಪರತ್ಯೇಕಮಪಿಶ್ಲೋಕಂ
ಪಾಪಾತ್ಸಪರಿಮುಚ್ಯತೇ ॥

ಈ ರಾಮಾಯಣವೆಲ್ಲವನೆಡೆವಿಡ
ದಾರೈದು ತಿಳಿದೋದುವರನು
ಶ್ರೀರಾಮಚಂದ್ರನೊಲಿದು ಸಲಹುವನಾದಿ
ನಾರಾಯಣನವಸ್ಯೈಸೆ ೪೧

ಒಂದು ಸರ್ಗಮನೊಂದು ಪದ್ಯಮನಲ್ಲದೊ
ಡೊಂದು ಪಾದವನೋದಿದೊಡೆ
ಅಂದಂದಿನೊಳೆಸಗಿದ ಪಾಪಂಗಳಂ
ದಂದಿಗೆ ಪರಿಹರಿಸುವುವು ೪೨

ಶ್ರೀ ಮಹಾಭಾರತೇ ಸ್ವರ್ಗಾರೋಹಣ ಪರ್ವಣಿ
ಚರಮೇ ಅಧ್ಯಾಯೇ

ಶ್ಲೋ ॥ ಕಾರ್ಷ್ಣಂ ವೇದಮಿಮಂ ಸರ್ವಂ
ಶೃಣುಯಾದ್ಯಸ್ಸಮಾಹಿತಃ ।
ಬ್ರಹ್ಮಹತ್ಯಾ ಕೃತಂ ಪಾಪಂ
ತತ್ ಕ್ಷಣಾದೇವ ನಶ್ಯತಿ ॥
ಅಹ್ನಾ ಯದೇನಃ ಕುರುತೇ
ಇಂದ್ರಿಯೈರ್ಮನಸಾ ಗಿರಾ ।
ಮಹಾಭಾರತಮಾಖ್ಯಾಯ
ಸರ್ವಪಾಪೈಃ ಪ್ರಮುಚ್ಯತೇ ॥

ವೇದವ್ಯಾಸನೊಲಿದು ಪೇಳಿದ ಪೊಸ
ವೇದವೆನಿಪ ಭಾರತವನು
ಓದಿದ ಮಾತ್ರದೊಳಳಿವುವು ಬ್ರಹ್ಮಹ
ತ್ಯಾದಿ ಮಹಾ ಪಾತಕಗಳು ೪೩

ನಡೆ ನುಡಿ ನೆನಹುಗಳಿಂದಂದಂದಿನೊ
ಳೊಡರಿಸುವುಗ್ರ ಪಾಪಗಳು
ಅಡಗುವುವಂದಂದಿಗೆ ಭಾರತದೊಂದು
ನುಡಿಯನೋದಿದ ಮಾತ್ರದೊಳು ೪೪

ಇಂತು ನಡೆವ ನಿತ್ಯ ನೈಮಿತ್ತ ಕರ್ಮ ಶ್ರೀ
ಕಾಂತನೂಳಿಗವೆಂದು ತಿಳಿದು
ಸಂತಸದಿಂದಾ[೪]ಚರಿಸೆ[೪] ಸತಿಯರಿಗೆ
ಚಿಂತಿತ ಫಲ ಸೇರುವುದು ೪೫

ಗುರುಮುಖದಿಂದ ರಹಸ್ಯತ್ರಯಾರ್ಥದ
ತಿರುಳನರಿತು ತೀವ್ರದೊಳು
ಪರಿಹರಿಪುದು ಮಂತ್ರಾಂತರ ದೇವತಾಂ
ತರ ಸಾಧನಾಂತರಂಗಳನು ೪೬

ಪಂಚಸಂಸ್ಕಾರಗಳನು ಪಡೆದೊಡನರ್ಥ
ಪಂಚಕತತ್ವಮನರಿತು
ಪಾಂಚಕಾಲಿಕ ಧರ್ಮವನೆಸಗುತ ನಿ
ಶ್ಚಂಚಲ ಚಿತ್ತದೊಳಿಹುದು ೪೭

೪. (ಕ) ಚರಿಪ.

ಇದು ಮಂತ್ರವಿದು ದೇವತೆಯಿದು ನಡತೆಯೆಂ
ಬುದನರಿತಂತರಂಗದೊಳು
ಮುದದೊಡನಿರ್ಪ ಮುಮುಕ್ಷುಗಳಿಗೆ ಮುಕ್ತಿ
ಪದವಿ ಕೈಬಸವಾಗಿಹುದು ೪೮

ಪತಿಯೊಲವಕ್ಕೆ ಸತಿಯರೊಳು ಸತಿಯರು
ಪತಿಪಾದ ಭಕ್ತೆಯರಕ್ಕೆ
ಸತಿಯರ ಮೈಮೆ ಸಕಲ ಜಗದೊಳು ನಿಲ್ಕೆ
ಸತಿಧರ್ಮ ಶಾಶ್ವತಮಕ್ಕೆ ೪೯

ಉರ್ವೀಶರು ಧಾರ್ಮಿಕರಕ್ಕೆ ಜಗದೊಳು
ಪಾರ್ವರು ಪದುಳದೊಳಿರ್ಕೆ
ಒರ್ವರೊರ್ವರೊಳೊಡವೆರೆಗೆ ದಂಪತಿಗಳು
ಸರ್ವರು ಸೌಖ್ಯದೊಳಿರ್ಕೆ ೫೦

ಶ್ರೀವೇದಮಾರ್ಗ ಪ್ರತಿಷ್ಠಾಪನಾಚಾರ್ಯ
ನಾ ವೈಷ್ಣವ ಧರ್ಮಮೂರ್ತಿ
ಆವನುಭಯ ವೇದಾಂತಾಚಾರ್ಯನೆಂ
ಬೀ ವಿಧದೀಳ್ಗೆವೆತ್ತಿಹನು ೫೧

ಶ್ರೀ ಶುಕ ವೇದವ್ಯಾಸ ವಾಲ್ಮೀಕಿ ಪ
ರಾಶರರಸು ಪಡಿಗೊಂಡು
ಶ್ರೀ ಶ[೫]ಪದಾ[೫]ಂಬುಜಭಕ್ತಿ ತತ್ವಜ್ಞಾನ
ರಾಶಿಯೆನಿಸಿ ರಾಜಿಪನು ೫೨

೫. (೩) ಪಾದ.

ಈ ಮಹಿಮೆಯೊಳೆಸೆವಳಸಿಂಗರಾರ್ಯನು
ದ್ದಾಮ ಕೃಪಾವೈಭವಕೆ
ಭೂಮಿಯೆನಿಸಿ ನೆಗಳಿದ ಮೈಮೆಯಿಂದಾ
ನೀ ಮಹಾಕೃತಿಯ ಪೇಳಿದೆನು ೫೩

ಧರ್ಮರಹಸ್ಯವನರಿತಿರ್ಪನೆಂಬೊಂದು
ಪೆರ್ಮೆಯೊಳು ಸುರ್ದವಳಲ್ಲ
ಧರ್ಮದ ನೆನಹು ಮರೆಯದಂತೀ ಕೃತಿಯಾಗಿ
ನಿರ್ಮಿಸಿ ನೆಲೆಗೊಳಿಸಿದೆನು ೫೪

ಭಾವಿಸೆ ಬಿಜ್ಜೆಗಲಿತ ಪೆರ್ಮೆಯೆನಗಿಲ್ಲ
ದೇವತೆಗಳ ವರಮಿಲ್ಲ
ಆವುದನುಪದೇಶವಿತ್ತನಾರ್ಯನು ತನ
ಗಾ ವಿಧದೊಳು ಪೇಳಿದೆನು ೫೫

ಓಲೆವಿಡಿದು ನಾಮೋದಲೇಕಿದನೆಮ್ಮ
ಶೀಲವನೆಂದು ಕಳೆಯದೆ
ಬಾಲೆ ಬಣ್ಣಿಸಿ ಬಳಲಿದಳೆಂಬ ಮರುಕದಿಂ
ದಾಲಿಪುದಖಿಲ ಸತಿಯರು ೫೬

ಮಳೆಯಕ್ಕೆ ಕಾಲಕಾಲಕೆ ದೇವರೊಲವಿಂದ
ಬೆಳೆಗೈಗೆ ಪೆರ್ಚುಗೆಯಕ್ಕೆ
ಇಳೆಯೊಳು ಪತಿ ಪುತ್ರ ಪೌತ್ರ ಸಂಪದದೊಡ
ನೊಳುವೆಂಡಿರೊಪ್ಪುದೊಳಿರ್ಕೆ ೫೭

*

ಶ್ರೀರಂಗಪಟ್ಟಣದೊಳು ಸಿರಿ ನೆಲಸಿರ್ಕೆ
ಭೂರಿ ವೈಭವ ಪುದಿದಿರ್ಕೆ
ಶ್ರೀರಂಗಧಾಮನ ದಿವ್ಯಯಾತ್ರೋತ್ಸವ
ದಾರಾಧನೆ ಮಿಗಿಲಕ್ಕೆ ೫೮

ಕನ್ನಡನಾಡೊಳು ಕಲಿಯುಗ ಪುಗದಿರ್ಕೆ
ಕನ್ನಡಿಗರು ಘನರಕ್ಕೆ
ಉನ್ನತಿವಡೆಗೆಯಗರ ದೇಗುಲಗಳು
ಸನ್ನುತಿವಡೆಗೆ ಸತ್ರಗಳು ೫೯

ಈ ವಸುಧೆಯ ಧರ್ಮದೊಳು ಪಾಲಿಸುಗೆ ಚಿಕ
ದೇವರಾಜೇಂದ್ರ ಚಂದ್ರಮನು
ದೇವಗೋವಿಪ್ರಸಂತತಿ ಸಂತಸದೊಳಿರ್ಕೆ
ಗೋವಿಂದಗಾನಂದಮಕ್ಕೆ ೬೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
[೬]ಮನ್ನಣೆ[೬]ವಡೆದೊಪ್ಪಿತೊಂಬತ್ತನೆಯ ಸಂಧಿ
ಸನ್ನುತ ಗುಣಸಂಬಂಧಿ ೬೧

## ಹದಿಬದೆಯ ಧರ್ಮಂ ಸಂಪೂರ್ಣಂ

೬. (ಖ) ಉನ್ನತಿ.

# ಟಿಪ್ಪಣಿ

**ಸಂಧಿ ೫, ಪದ್ಯಗಳು ೮, ೯**

ಕುವರನಾದೊಡೆ ಬಂದ ಗುಣವೇನದರಿಂದ
  ಕುವರಿಯಾದೊಡೆ ಕುಂದೇನು
ಕುಲಪುತ್ರನೋದಿ ತಿಳಿದು ನಡೆದಲ್ಲದೆ
  ಕುಲವನುದ್ಧರಿಸಲರಿಯನು

ಗಂಡುಮಗುವಾದರೇನು? ಹೆಣ್ಣುಮಗುವಾದರೇನು? ಯಾರು ಸುಗುಣಗಳಿಂದ ಕೂಡಿರುತ್ತಾರೆಯೊ, ಆ ಮಗುವಿನ ಒಳ್ಳೆಯ ನಡತೆಯಿಂದ ತಾಯಿತಂದೆಗಳಿಗೆ ಕೀರ್ತಿಯುಂಟಾಗುತ್ತದೆ ಮಕ್ಕಳೆಂಬ ದೃಷ್ಟಿಯಿಂದ ಗಂಡು ಮತ್ತು ಹೆಣ್ಣುಮಕ್ಕಳು ಅಷ್ಟೇ ಮಹತ್ವವುಳ್ಳವರು ಇಬ್ಬರಿಗೂ ಉತ್ತಮರಾಗಿ ಬಾಳುವ ಶಕ್ತಿಯುಂಟು

ಕುಮಾರನು ವಿದ್ಯೆ ಕಲಿತು ಅನುಭವವನ್ನು ಪಡೆದು, ತಕ್ಕ ರೀತಿಯಲ್ಲಿ ನಡೆದುಕೊಳ್ಳಲು ಬಲವನ್ನು ಹೊಂದುವವರೆಗೆ ಕುಲವನ್ನು ಬೆಳಗಿಸಲಾರನು ಆತನ ಸ್ವಭಾವವೂ ಸ್ವಲ್ಪ ಬಿರುಸು ಮಗುವಾಗಿದ್ದಾಗ ಹೆಣ್ಣುಮಕ್ಕಳಂತೆ ನಯಸ್ವಭಾವವಿದ್ದರೂ, ತಿಳಿವು ಬಂದಮೇಲೆ ಆತನ ಮನೋಭಾವ ಜೀರಯಾದಂತೆ ಕಂಡುಬರುತ್ತದೆ ತಂದೆತಾಯಿಗಳ ಆಸ್ತಿಯ ಪಾಲಿಗಾಗಿ ಗಂಡು ತನ್ನ ಹಕ್ಕುಬಾಧ್ಯತೆಗಳನ್ನು ಉಪಯೋಗಿಸುತ್ತಾನೆ

ಹೆಣ್ಣುಮಗುವಿನದು ಮರುಕದ ಸ್ವಭಾವ, ಒಳ್ಳೆಯ ಪತಿಯ ಕೈ ಹಿಡಿದು, ಘನವಂತರ ಮನೆತನಕ್ಕೆ ಬಂದ ಕನ್ನೆ ಅತ್ತೆಯ ಮನೆ ತವರುಮನೆಗಳ ಹೆಸರನ್ನು ಬೆಳಗಿಸುತ್ತಾಳೆ ಕೋಮಲ ಸ್ವಭಾವದ ಹೆಣ್ಣು ತವರವರು ಅಕ್ಕರೆಯಿಂದ ಹುಲ್ಲುಕಡ್ಡಿಯನ್ನು ಕೊಟ್ಟರೂ ಸಂತೋಷದಿಂದ ಅದನ್ನು ಸ್ವೀಕರಿಸಿ ಅದು ಅಮೂಲ್ಯ ಪದಾರ್ಥವೆಂದು ಹಿಗ್ಗುವಳು

**ಯೋಗದಶಾಪರಿಣತಿ: ಸಂಧಿ ೭, ಪದ್ಯ ೪೨**

ಆತ್ಮೋನ್ನತಿಗಾಗಿ ಋಷಿಗಳು ತೋರಿರುವ ಮಹಾ ಪ್ರಯತ್ನಗಳು ಯೋಗಗಳು ಇವು ಬಹಳ ಮುಖ್ಯವಾದುವು ಎಡೆಬಿಡದೆ ಇಷ್ಟದೇವತೆಯನ್ನು ಧ್ಯಾನಮಾಡುವವನು ಯೋಗದ (ಭಕ್ತಿಯ) ದಶಾ=ಅವಸ್ಥೆಯಲ್ಲಿ ಇರುತ್ತಾನೆ ಈ ಸಾಧನೆಯ ಕಟ್ಟಕಡೆ ಸಿದ್ಧಿ ಅಥವಾ ಸಮಾಧಿ ಅಥವಾ ಪರಿಣತಿ ಈ ಸ್ಥಿತಿಯಲ್ಲಿ ಯೋಗಿಗೆ ಎಲ್ಲೆಲ್ಲೂ ಗಾಢವಾದ ಆನಂದವೇ ಅನುಭವಕ್ಕೆ ಬರುತ್ತದೆ ಮೆಚ್ಚಿದ ನೆಚ್ಚಿದ ದೇವತೆ, ಒಳಗೆ, ಹೊರಗೆ, ಎಲ್ಲಿ ನೋಡಿದರಲ್ಲಿ ಪ್ರಕಾಶಿಸುತ್ತದೆ

**ನೀರೊಳು ಮೆಯ್ಯ ನೇಮದೊಳು ಕರಣಗಳ:**
**ಸಂಧಿ ೮, ಪದ್ಯ ೨೩**

ಸರ್ವವನ್ನು ಶುಚಿಪಡಿಸಿಕೊಳ್ಳಲು ಸ್ನಾನ ಅಗತ್ಯ ನೀರಿನಲ್ಲಿ ಒಡಲನ್ನೂ, ನಿಗ್ರಹದಲ್ಲಿ ಇಂದ್ರಿಯಗಳನ್ನೂ, ಹೆಚ್ಚಿದ ಸತ್ವಗುಣದಲ್ಲಿ (ಸತ್ಯ ಸುಗುಣ ಮೊದಲಾದ ಒಳ್ಳೆಯ ಸ್ವಭಾವಾಂಶಗಳಲ್ಲಿ) ಬುದ್ಧಿಯನ್ನೂ ಮೀಯಿಸಬೇಕು ನಾರಾಯಣನ ದಾಸ್ಯದಲ್ಲಿ ಆತನ ಅಂಶವಾದ ಜೀವಾತ್ಮನನ್ನು ಸ್ವಚ್ಛಪಡಿಸಬೇಕು ಈ ಪೂರ್ಣ ಸ್ನಾನದಿಂದ ಕೇವಲ ನೈರ್ಮಲ್ಯವನ್ನು ಹೊಂದಬೇಕು.

**ಕರ್ಮಯೋಗ: ಸಂಧಿ ೯, ಪದ್ಯ ೧**

ಶ್ರೇಷ್ಠವಾದ ಸಾಧನೆಗಳ ಉದ್ದೇಶ ಎರಡು ಬಗೆಯದಾಗಿದೆ. ಮನುಷ್ಯನ ಸ್ವಾರ್ಥವನ್ನು ಹುಡಿಗೂಡಿಸುವುದು, ಆತನ ಆತ್ಮಬಲವನ್ನು ಬೆಳಸುವುದು ಕರ್ಮಯೋಗ ಒಂದು ಶ್ರೇಷ್ಠ ಸಾಧನೆ ಅದರ ಉದ್ದೇಶವೂ ಮೇಲಿನ ಎರಡು ವಿಚಾರಗಳನ್ನು ಮನುಷ್ಯ ಪಡೆಯುವಂತೆ ಮಾಡುವುದೇ ಆಗಿದೆ. ಕರ್ಮಗಳೆಂದರೆ, ಮನಸ್ಸನ್ನು ತಿದ್ದಿಕೊಳ್ಳಲು ವ್ಯಕ್ತಿ ಕೈಕೊಳ್ಳುವ ಶಾಸ್ತ್ರಸಮ್ಮತವಾದ ಕೆಲಸಗಳು. ಮನುಷ್ಯನ ಜೀವಲಕ್ಷಣ ಕೆಲಸ ಅಥವಾ

ಕರ್ಮ ಮಾಡುವುದು ಕರ್ಮ ಮಾಡದೆ ಶರೀರ ವ್ಯಾಪಾರ ಕೂಡ ನಡೆಯಲಾರದು ವ್ಯಕ್ತಿ ಒಳ್ಳೆಯ ಕೆಲಸಗಳನ್ನು ಮಾಡ ಬೇಕು ತನ್ನ ಸ್ವಂತ ಪ್ರಯೋಜನದ ಆಸೆಯಿಲ್ಲದೆ ದುಡಿಯ ಬೇಕು ಎಲ್ಲ ಜೀವಿಗಳ ಸೇವೆಯೇ ಉತ್ತಮ ಕರ್ಮ; ಇನ್ನೊಬ್ಬರಿಗೆ ಮೇಲ್ಮೆಯನ್ನುಂಟುಮಾಡುವುದೇ 'ಯಜ್ಞ' ತನ ಗೋಸ್ಕರವೆಂದು ಕೆಲಸಮಾಡಿದರೆ ಮನುಷ್ಯನಿಗೆ ಕಟ್ಟುಗಳು ಹೆಚ್ಚುತ್ತವೆ ಶ್ರೇಯಸ್ಸು (ಮೋಕ್ಷ) ದೊರೆಯುವುದಿಲ್ಲ ಆದುದರಿಂದ ಮನುಷ್ಯ ತಾನು ಮಾಡುವ ಕಲಸಗಳ ಫಲಾಫಲ ಗಳಲ್ಲಿ ಆಶೆಯನ್ನಿಡದೆ 'ಲೋಕಸಂಗ್ರಹ'ಕ್ಕಾಗಿ ಕೆಲಸಗಳಿಗೆ ಮನಕೊಟ್ಟು, ಮೈಯೊಡ್ಡಬೇಕು ಗಣ್ಯರ ಕಾರ್ಯತತ್ಪರತೆ ಯನ್ನು ಇತರರು ಕಲಿತು ಆಚರಿಸುತ್ತಾರೆ, ಇದು ಲೋಕರೂಢಿ ಉತ್ತಮನ ಕರ್ಮ ಉಳಿದವರಿಗೆ ಮೇಲ್ಪಂಕ್ತಿ ಆತನ 'ಸೋಂಬತನ' ಜನರ ಸತ್ವನಾಶಕ್ಕೆ ಕಾರಣ ಹೀಗಿರುವು ದರಿಂದ, ಯೋಗ್ಯರು ಮಿಕ್ಕವರ ಕಾರ್ಯಶೀಲತೆಯ ಹೊಣೆ ತಮ್ಮ ಮೇಲೆ ಇರುವುದೆಂದು ತಿಳಿದು, ಅನಾಸಕ್ತಿಯಿಂದ ಕೆಲಸಮಾಡಬೇಕು, ಮಾಡಿದ್ದನ್ನು ಪರಮಾತ್ಮನಿಗೆ ಅರ್ಪಿಸ ಬೇಕು 'ಜನಕಾದಿಗಳು ಕರ್ಮದಿಂದಲೇ ಪರಮಸಿದ್ಧಿಯನ್ನು ಪಡೆದಿದ್ದರು'

**ರಹಸ್ಯತ್ರಯ: ಸಂಧಿ ೯, ಪದ್ಯ ೪೬**

ಪ್ರಕೃತಿ, ಆತ್ಮ, ಪರಮಾತ್ಮ—ರಹಸ್ಯತ್ರಯಗಳು ಪೃಥ್ವಿ ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳು, 'ಪ್ರಕೃತಿ.'

ಪರಮಾತ್ಮನ ಅಂಶ ಆತ್ಮ

ಪೃಥಿವ್ಯಾದಿಗಳು ಮತ್ತು ಜೀವಾತ್ಮ ಇವೆರಡಕ್ಕೆ ಒಡೆಯ ನಾದ ದೇವರು 'ಪರಮಾತ್ಮ'.

**ಪಂಚಸಂಸ್ಕಾರಗಳು: ಸಂಧಿ ೯, ಪದ್ಯ ೪೭**

ಇವು ಧಾರ್ಮಿಕ ಆಚಾರಗಳು —

೧. ತಪ: ಮಹಾವಿಷ್ಣುವಿನ ಆಯುಧಗಳಾದ ಶಂಖ ಚಕ್ರಗಳ ಲಾಂಛನವನ್ನು (ಚಿಹ್ನೆ) ತೋಳಿಗೆ ಧರಿಸುವುದು

೨ ಪುಂಡ್ರ. ನಾಮವನ್ನು ಇಟ್ಟುಕೊಳ್ಳುವುದು

೩ ನಾಮ ವಿಷ್ಣುವಿನ ಹೆಸರನ್ನು ಇಟ್ಟುಕೊಳ್ಳುವುದು. ಪುರುಷರು ವಿಷ್ಣುವಿನ 'ದಾಸ'ನೆಂತಲೂ, ಸ್ತ್ರೀಯರು ವಿಷ್ಣುವಿನ 'ದಾಸಿ'ಯೆಂತಲೂ ಹೇಳಿಕೊಳ್ಳಬೇಕು

೪ ಮಂತ್ರ. ವಿಷ್ಣುವಿಗೆ ಸಂಬಂಧಿಸಿದ ಮೂರು ವಿಧದ ಮಂತ್ರಗಳು

(ಅ) ನಾರಾಯಣ ಅಷ್ಟಾಕ್ಷರಿ

(ಆ) ದ್ವಯ ಅಥವಾ ಶರಣಾಗತಿ

(ಇ) ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದ ೬೬ ನೆಯ ಶ್ಲೋಕ

೫ ಯಾಗ. ವಿಷ್ಣುವಿನ ಪೂಜೆ

**ಅರ್ಥಪಂಚಕ: ಸಂಧಿ ೯, ಪದ್ಯ ೪೭**

ಸಂಸಾರದಲ್ಲಿ ತೊಳಲುತ್ತಿರುವ ಜೀವಿ ಮೋಕ್ಷವನ್ನು ಪಡೆಯಲು ಸಹಾಯವಾಗುವ ಅಮೋಘವಾದ ಐದು ಉಪಾಯಗಳು :—

೧ ಸ್ವಸ್ವರೂಪ ಜೀವಿಗಳು ಅಗಣಿತರು, ಬದ್ಧ, ಕೇವಲ, ಮುಮುಕ್ಷು, ಮುಕ್ತ, ನಿತ್ಯ ಎಂಬ ಐದು ಅವಸ್ಥೆಗಳಲ್ಲಿ ಇರುತ್ತಾರೆ. ಕೆಳಗಿನ ಹಂತದಲ್ಲಿರುವ ಬದ್ಧಜೀವಿಯೂ ಅರ್ಥಪಂಚಕದ ಸಹಾಯದಿಂದ ಉದ್ಧಾರದ ಹಾದಿಯನ್ನು ಕಂಡುಕೊಳ್ಳುತ್ತಾನೆ. ಪುನರ್ಜನ್ಮ ಇಲ್ಲದೆ ನಾರಾಯಣನ ಸಾಮೀಪ್ಯದ ಸುಖವನ್ನು ಹೊಂದುತ್ತಾನೆ.

೨ ಪರಸ್ವರೂಪ ಭಗವಂತನ ರೂಪು ಮಹಿಮೆಗಳನ್ನು ಕುರಿತು ವಿಚಾರಮಾಡಿ ತಿಳಿಯುವುದು

೩ ಪುರುಷಾರ್ಥಸ್ವರೂಪ ಜೀವಿಯ ಧ್ಯೇಯ ಉದ್ದೇಶಗಳನ್ನು ತಿಳಿಯುವುದು

ಧರ್ಮ
ಅರ್ಥ
ಕಾಮ
ಮೋಕ್ಷ

೪ ಉಪಾಯಸ್ವರೂಪ. ಪುರುಷಾರ್ಥಗಳನ್ನು ಕೈಗೂಡಿಸಿಕೊಡಬಲ್ಲ ಐದು ಸಾಧನಗಳು ಅಥವಾ ಉಪಾಯಗಳು (ಯೋಗಗಳು)

ಕರ್ಮಯೋಗ
ಜ್ಞಾನಯೋಗ
ಭಕ್ತಿಯೋಗ
ಪ್ರಪತ್ತಿಯೋಗ
ಆಚಾರ್ಯಾಭಿಮಾನ

ಪ್ರಪತ್ತಿಯೆಂದರೆ, ನಾರಾಯಣನಲ್ಲಿ ಆತ್ಮಾರ್ಪಣೆ ಮಾಡುವುದು, ಅನನ್ಯಭಾವದಿಂದ ಆತನ ಮರೆಹೋಗುವುದು

ಆಚಾರ್ಯಾಭಿಮಾನ. ಮೊದಲ ನಾಲ್ಕು ಉಪಾಯಗಳನ್ನು ತಾನೇ ನೇರವಾಗಿ ಆಚರಿಸಲಾರದ ಜೀವಿಗೆಕೂಡ ಉನ್ನತಿಯುಂಟು ಸದ್ಗುರುವಿನ ಅಭಿಮಾನಕ್ಕೆ ಪಾತ್ರನಾಗಿ, ಆತನನ್ನೇ ಗತಿಮತಿಯೆಂದು ಆಶ್ರಯಿಸುವುದು ಶಿಷ್ಯನ ಕಲ್ಯಾಣಕ್ಕಾಗಿ ಆಚಾರ್ಯನು ತಾನೇ ಯೋಗಾನುಷ್ಠಾನ ಮಾಡುತ್ತಾನೆ, ತನ್ನ ಬಳಿಗೆ ಬಂದ ಶಿಷ್ಯನನ್ನು ಕಾಪಾಡುತ್ತಾನೆ ಇಂಥ ಆಚಾರ್ಯನ ವಿಷಯದಲ್ಲಿ ಶಿಷ್ಯನು ಕುಂದದ ಅಭಿಮಾನವನ್ನಿಡಬೇಕು

೫. ವಿರೋಧಿಸ್ವರೂಪ. ಪುರುಷಾರ್ಥಗಳ ಪ್ರಾಪ್ತಿಗೆ ಅಡ್ಡ ಬರುವ ಐದು ತರದ ತೊಂದರೆಗಳು.

ಸ್ವಸ್ವರೂಪ ವಿರೋಧಿ (ಭ್ರಾಂತಿ), ಅರ್ಥ ಕಾಮಗಳೆಂಬ ಪುರುಷಾರ್ಥಗಳಲ್ಲಿ ಹೆಚ್ಚು ಅಭಿಮಾನ, ಉಪಾಯಗಳಲ್ಲಿ (ಸಾಧನ ಗಳಲ್ಲಿ) ಅಪನಂಬಿಕೆ, ಭಗವಂತನ ವಿಷಯದಲ್ಲಿಯೂ ಭಾಗವತರ ವಿಷಯದಲ್ಲಿಯೂ ಅಪಚಾರ, ಮತ್ತು ಪರತ್ವವಿರೋಧಿ (ಸ್ವಾಮಿಯ ವಿಚಾರದಲ್ಲಿ ತಪ್ಪು ಭಾವನೆ)

**ಪಾಂಚಕಾಲಿಕ ಧರ್ಮ: ಸಂಧಿ ೯, ಪದ್ಯ ೪೭**

ಪ್ರತಿದಿವಸದಲ್ಲಿ ಶ್ರೀ ವಿಷ್ಣುವಿನ ಸೇವೆಯನ್ನು ಐದು ಪ್ರಕಾರ ದಲ್ಲಿ ಕೈಕೊಳ್ಳುವುದು

ಅಭಿಗಮನ ಎದ್ದ ಕೂಡಲೇ ನಾರಾಯಣನನ್ನು ಸ್ಮರಿಸು ವುದು

ಉಪಾದಾನ ಸ್ವಾಮಿಯ ಪೂಜಗೆಂದು ಹೂ ಮೊದಲಾದ ಪೂಜಾ ದ್ರವ್ಯಗಳನ್ನು ತೆಗೆದಿಡುವುದು

ಇಜ್ಯಾ ಅಚ್ಚಳಿಯದ ಭಕ್ತಿಯಿಂದ ಲೋಕನಾಥನನ್ನು ಪೂಜಿಸುವುದು

ಸ್ವಾಧ್ಯಾಯ ಧರ್ಮಗ್ರಂಥಗಳನ್ನು ಓದಿ, ಮನನ ಮಾಡು ವುದು, ಸ್ವಾಮಿಯ ಹೆಸರನ್ನು ಹಾಡುವುದು, ಮತ್ತು ಕೇಳುವುದು.

ಯೋಗ ಪ್ರೀತಿ ಶ್ರದ್ಧೆಗಳಿಂದ ಶ್ರೀಮನ್ನಾರಾಯಣನಲ್ಲಿ ಮನಸ್ಸನ್ನು ಲೀನ ಮಾಡುವುದು

**ಶ್ರೀ ವೇದಮಾರ್ಗ ಪ್ರತಿಷ್ಠಾಪನಾಚಾರ್ಯ: ಸಂಧಿ ೯, ಪದ್ಯ ೫೧**

ವಿಶಿಷ್ಟಾದ್ವೈತಮತವನ್ನು ಉದ್ಧರಿಸಿದ ಶ್ರೀ ರಾಮಾನುಜಾ ಚಾರ್ಯರು ಆದಿಶೇಷನ ಅವತಾರವೆಂದು ಮಾನ್ಯರಾಗಿದ್ದಾರೆ. ಉತ್ತಮವಾದ ಭಕ್ತಿಯ ಆಚರಣೆಯಲ್ಲಿ ಜನರ ಮನಸ್ಸು ನೆಲಸು ವಂತೆ ಮಾಡಿದ ಮಹಾತ್ಮರಿವರು.

ಈ ಮಹಾನುಭಾವರು ಶ್ರೀ ಭೂತಪುರಿಯಲ್ಲಿ ಕ್ರಿ. ಶ. ೧೦೨೭ರಲ್ಲಿ ಉದಯಿಸಿದರು ಬೇರೆ ಬೇರೆ ವಿದ್ವಾಂಸರ ಹತ್ತಿರ ತತ್ವ ವೇದಾಂತಗಳನ್ನು ಅಭ್ಯಾಸ ಮಾಡಿದರು ಅಸಾಮಾನ್ಯ ದೈವಭಕ್ತಿಯುಳ್ಳ ಕಾರಣಪುರುಷರು ಸಂನ್ಯಾಸವನ್ನು ಸ್ವೀಕರಿಸಿ 'ಯತಿರಾಜ'ರೆಂದು ಖ್ಯಾತಿಹೊಂದಿದರು. ಶ್ರೀರಂಗದಲ್ಲಿ ನೆಲಸಿದ್ದು ಕೆಳಗೆ ಹೆಸರು ಕಾಣಿಸಿರುವ ಪೂಜ್ಯ ಗ್ರಂಥಗಳನ್ನು ಬರೆದರು.

೧ ವೇದಾಂತಸಾರ
೨ ವೇದಾರ್ಥ ಸಂಗ್ರಹ
೩ ವೇದಾಂತ ದೀಪ
೪ ಶ್ರೀ ಭಾಷ್ಯ
೫ ಗೀತಾ ಭಾಷ್ಯ

ಈ ಪೂಜ್ಯಪಾದರು ದಕ್ಷಿಣ ಹಿಂದುಸ್ಥಾನದಲ್ಲಿ ಸಂಚರಿಸಿ, ದಕ್ಷಿಣದ ಪ್ರಸಿದ್ಧ ಯಾತ್ರಾಸ್ಥಳವಾದ ಮೇಲುಕೋಟೆ (ಯದುಗಿರಿ) ಯಲ್ಲಿ ಕೆಲವು ಕಾಲವಿದ್ದರು ಅನೇಕ ವಿಷ್ಣುದೇವಾಲಯಗಳನ್ನು ಜೀರ್ಣೋದ್ಧಾರಮಾಡಿದರು ಅಸಂಖ್ಯಾತರಾದ ಶ್ರದ್ಧಾಳುಗಳಿಗೆ ಶ್ರೀವೈಷ್ಣವ ಮತದೀಕ್ಷೆಯನ್ನು ಅನುಗ್ರಹಿಸಿದರು

ಈ ಪುಣ್ಯಪುರುಷರು ಧಾರ್ಮಿಕ ಜೀವನದ ಸಾರವಾದ ಭಕ್ತಿಯ ಮಹಿಮೆಯನ್ನು ವಿವರಿಸಿದರು, ದಾಸಭಾವದಿಂದ (ಪ್ರಪತ್ತಿ) ಶ್ರೀ ವಿಷ್ಣುವಿಗೆ ಶರಣುಹೋದರೆ, ಎಂಥ ಪರಮಸುಖ ದೊರಕುತ್ತದೆ ಎಂಬುದನ್ನು ನಿರೂಪಿಸಿದರು ಮೋಕ್ಷವನ್ನು ಹೊಂದುವ ಸಾಮರ್ಥ್ಯ ಎಲ್ಲರಿಗೂ ಇರುವುದೆಂದು ವಿಶದ ಪಡಿಸಿದರು

ವಿಶಿಷ್ಟಾದ್ವೈತ ಧರ್ಮಸಾಹಿತ್ಯಕ್ಕೆ 'ಉಭಯವೇದ' ವೆಂಬ ಹೆಸರೂ ಉಂಟು ಸಂಸ್ಕೃತ ವೇದೋಪನಿಷತ್ತುಗಳು, ಇವುಗಳ ಜೊತೆಗೆ ಆಳ್ವಾರರೆಂದು ವಂದನೀಯರಾದ ಹನ್ನೆರಡು ಮಂದಿ

ಭಕ್ತಕವಿಗಳ ಗೀತಸಾಹಿತ್ಯ (ತಮಿೞ್ ಪ್ರಬಂಧಂ, ದಿವ್ಯ ಪ್ರಬಂಧಂ) ಈ ಎರಡು ಬಗೆಯ ಗ್ರಂಥ ಸಮುದಾಯಗಳನ್ನು ಒಳಪಡಿಸಿಕೊಂಡ ಸಿದ್ಧಾಂತ ಪದ್ಧತಿಯನ್ನು ಕೂಲಂಕಷವಾಗಿ ಅಭ್ಯಾಸಮಾಡಿ, ಅದನ್ನು ಜನಕ್ಕೆ ಉಪದೇಶಿಸಿದ ಧರ್ಮಗುರುಗಳು ಶ್ರೀ ರಾಮಾನುಜರು.

# ಪೂರ್ವಕಥೆಗಳು

**ಸಂಧಿ ೨, ಪದ್ಯ ೪೬**

ಆ ತ್ರಿಮೂರ್ತಿಗಳಾಮಂತ್ರಿತ . . . ಅತ್ರಿಯ ಸತಿಗನಸೂಯಾದೇವಿಗೆ ಪುತ್ರರಾದರು ಪೂರ್ವದೊಳು

ಸಪ್ತರ್ಷಿಗಳಲ್ಲಿ (ಪ್ರಜಾಪತಿಗಳಲ್ಲಿ) ಒಬ್ಬರು ಮಹಾತ್ಮರಾದ ಅತ್ರಿಮುನಿಗಳು ಅವರ ಪತ್ನಿ ಮಹಾತೇಜೋವಂತಳೂ ಪರಮ ಪತಿವ್ರತೆಯೂ ಆದ ಅನಸೂಯಾದೇವಿ ಅವಳ ಕೀರ್ತಿ ಸುರ ಲೋಕವನ್ನು ಮುಟ್ಟಿತು ದೇವತೆಗಳನ್ನೂ ದೇವೇಂದ್ರನನ್ನೂ ಹೆದರಿಸಿತು ಇಂದ್ರನು ತ್ರಿಮೂರ್ತಿಗಳಿಗೆ ಮೊರೆಯಿಟ್ಟನು

ಬ್ರಹ್ಮ ವಿಷ್ಣು ಮಹೇಶ್ವರರು ಭಿಕ್ಷುಕರ ವೇಷವನ್ನು ಧರಿಸಿದರು, ಮುನಿಸತಿಯನ್ನು ಪತಿವ್ರತಾ ಪರೀಕ್ಷೆಯಲ್ಲಿ ಒರೆಹಚ್ಚಿ ನೋಡುವೆವೆಂದು ಅತ್ರಿಮಹರ್ಷಿಯ ಆಶ್ರಮಕ್ಕೆ ಬಂದರು. ಋಷಿಗಳು ಅನುಷ್ಠಾನಕ್ಕೆ ನದಿಗೆ ಹೋಗಿದ್ದರು ವೇಷಧಾರಿಗಳು ಋಷಿಪತ್ನಿಯ ಹತ್ತಿರ ಇಚ್ಛಾಭೋಜನವನ್ನು ಬೇಡಿದರು ಸಾಧ್ವಿ ಬಂದವರನ್ನು ಉಪಚರಿಸಿ, ಆಗಲಿ ಎಂದಳು. ಆಕೆಯ ಪತಿ ಬರುವವರೆಗೆ ಯತಿಗಳು ಕಾಯಲು ಒಪ್ಪಲಿಲ್ಲ ಆದ್ದರಿಂದ ಬಂದವರಿಗೆ ಊಟಕ್ಕೆ ಬಡಿಸಲು ಅನಸೂಯಾಮಾತೆ ಸಿದ್ಧಳಾದಳು ಬಂದವರು ಆಕೆ ವಿವಸ್ತ್ರಳಾಗಿ ಊಟಕ್ಕೆ ಬಡಿಸಿದರೆ ಮಾತ್ರ ಆಹಾರ ತೆಗೆದುಕೊಳ್ಳುವೆವೆಂದು ಮುಷ್ಕರಮಾಡಿದರು. ಪರಮಪತಿವ್ರತೆ ಬೆರಗಾದಳು, ಯೋಚಿಸಿದಳು, ಪತಿಯನ್ನು ನೆನೆದಳು, ಆತನ ತಪೋಬಲ ತನ್ನ ರಕ್ಷೆ, ಬೆಂಗಾವಲೆಂದಳು 'ಅತಿಥಿಗಳು ನನ್ನ ಶಿಶುಗಳು' ಎಂದು ಭಾವಿಸಿ ವಸ್ತ್ರರಹಿತಳಾಗಿ ಊಟ ಬಡಿಸಲು ಬಂದಳು. (ಶ್ರೀಗುರು ಚರಿತ್ರೆ) ಪತಿಧ್ಯಾನಮಾಡಿ ಗೌರಿ ಪೂಜೆಮಾಡಿ ಇಟ್ಟಿದ್ದ ಕಮಂಡಲೂದಕವನ್ನು ಅತಿಥಿಗಳಮೇಲೆ ಚಿಮುಕಿಸಿದಳು ಮಹಾ ಪತಿವ್ರತಾ

ಮಹಿಮೆ! ಅತಿಥಿಗಳು ಕೂಸುಗಳಾಗಿ ಆಡತೊಡಗಿದರು, ಅಳ ತೊಡಗಿದರು. ಅವರನ್ನು ಋಷಿಪತ್ನಿ ಮಾತೃವಾತ್ಸಲ್ಯದಿಂದ ಎತ್ತಿ ಆಡಿಸಿದಳು. ಅತ್ರಿಮಹರ್ಷಿ ಎಲೆಮನೆಗೆ ಬಂದು ನಿಜಾಂಶ ತಿಳಿಸಿದರು, ಶಿಶುಗಳು ತ್ರಿಮೂರ್ತಿಗಳೆಂದು ದಿವ್ಯಜ್ಞಾನದಿಂದ ಅರಿತರು, ಅವರಿಗೆ ವಂದಿಸಿದರು. ಜಗತ್ಕಾರಣರು ನಿಜರೂಪ ತೋರಿಸಿ ವರವನ್ನು ಕೇಳಿರೆಂದರು ನಿರಿಚ್ಛೆಯ ಮುನಿಗಳಿಗೆ ಏನೂ ಬೇಕಿರಲಿಲ್ಲ. ಅನಸೂಯಾದೇವಿ 'ನೀವು ನನ್ನ ಪುತ್ರರಾಗಬೇಕು' ಎಂದಳು. 'ತಥಾಸ್ತು' ಎಂದರು ಬ್ರಹ್ಮನ ಅಂಶವಾದ ಚಂದ್ರ, ವಿಷ್ಣುವಿನ ಅಂಶವಾದ ದತ್ತ, ರುದ್ರನ ಅಂಶವಾದ ದೂರ್ವಾಸರು ಈ ಋಷಿದಂಪತಿಗಳ ಕುಮಾರರಾದರು ಪರ್ಣಶಾಲೆಯನ್ನು ಬೆಳಗಿದರು.

**ಸಂಧಿ ೩, ಪದ್ಯ ೪೭**

ಕಾನನದೊಳು ಕಡುಕಷ್ಟವಡೆದು ಜಾನಕಿ ಜಸವ ಪಡೆದಳು

**ಸಂಧಿ ೨, ಪದ್ಯ ೪೭**

... .. . .ಸೀತೆ ಬೆಂಕಿಯ ಪುಗ್ಗೆ ಶೀತಳವಾದುದು.

ವಿದೇಹರಾಜನಾದ ಜನಕನ ಮಗಳು, ಅಯೋಧ್ಯೆಯ ದೊರೆಯಾದ ದಶರಥಮಹಾರಾಜನ ಸೊಸೆ, ದಶರಥರಾಮನ ಪತ್ನಿ, ಲಕ್ಷ್ಮಿಯ ಅವತಾರ ರಾಮನು ತಂದೆಯ ಸತ್ಯವನ್ನು ಉಳಿಸಲು ಹದಿನಾಲ್ಕು ವರ್ಷ ವನವಾಸಕ್ಕೆ ಹೊರಟನು; ಪತಿಪ್ರಾಣಳಾದ ಸೀತಾದೇವಿಯೂ ಆತನನ್ನು ಹಿಂಬಾಲಿಸಿದಳು. ಅಡವಿಯ ಕಷ್ಟಕಂಟಕಗಳನ್ನು ಸಹಿಸಿದಳು, ಪತಿಗೆ ಪ್ರೇಮಧಾರೆ ಎರೆದಳು.

ರಾವಣನಿಂದ ಸೀತಾಪಹರಣವಾಯಿತು; ಕಪಿ ಸೈನ್ಯದ ಸಹಾಯದಿಂದ ಸೀತೆಯ ಸುದ್ದಿಯರಿತು ಶ್ರೀರಾಮನು ರಾವಣ ನನ್ನು ರಾಕ್ಷಸ ಕುಲಸಹಿತ ಸವರಿದನು. ಭಕ್ತಶ್ರೇಷ್ಠ ವಿಭೀಷಣ ನನ್ನು ಲಂಕೆಗೆ ಅಧಿಪತಿಯನ್ನಾಗಿ ಮಾಡಿದನು.

ದೊಡ್ಡ ಸಭೆಯೆದುರು, ವಿನಯದಿಂದ ಬಾಗಿ ಬಂದ ಜಾನಕಿಯನ್ನು ರಾಮನು ಆದರಿಸಲಿಲ್ಲ, ಪರಗೃಹವಾಸ ಕಾಲದ ಆಕೆಯ ಶೀಲಚಾರಿತ್ರವನ್ನು ಕುರಿತು ಸಂದೇಹಗೊಂಡನು. ಮಿಥ್ಯಾಪವಾದ ನೀಗಿಕೊಳ್ಳಲು ಸೀತೆ ಸಿದ್ಧಳಾದಳು. ತನ್ನ ಸತೀತ್ವವನ್ನು ಉಗ್ಗಡಿಸುತ್ತ ಧಗಧಗಿಸುವ ಅಗ್ನಿಯಲ್ಲಿ ಬಿದ್ದಳು ಅದು ಆಕೆಯನ್ನು ಬಾಧಿಸಲಿಲ್ಲ, ಬದಲು ಶ್ರೀಗಂಧದಂತೆ ತಂಪಾಯಿತು.

**ಸಂಧಿ ೨, ಪದ್ಯ ೪೮**

ಹರನ ಸಾಹಸಕಂಜದೆ ಮು
ಪ್ಪುರ ಪೋರಿದುದು
ಪುಣ್ಯಾಂಗನೆಯರ ಸ
-ಚ್ಚರಿತದ ಸಲಿಗೆಯಿಂದ್ಯೆಸೆ

ತಾರಕಾಸುರನ ಮಕ್ಕಳು ಮೂವರು. ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಘೋರ ತಪಮಾಡಿ ಬ್ರಹ್ಮನನ್ನು ಮೆಚ್ಚಿಸಿದರು ಅಮೋಘ ವರವನ್ನು ಪಡೆದರು ಜಗವಿಜಯಿಗಳಾಗಿ ತ್ರಿಪುರಗಳನ್ನು ಕಟ್ಟಿದರು

ಇವು ಚಿನ್ನ, ಬೆಳ್ಳಿ, ಕಬ್ಬಿಣದಿಂದ ನಿರ್ಮಿತವಾದುವು; ಚಕ್ರದಮೇಲೆ ನಿಂತು ಚಲಿಸುವಂಥವು, ಸ್ವರ್ಗ, ಅಂತರಿಕ್ಷ, ಪೃಥ್ವಿಯಲ್ಲಿ ಇರುವಂಥವು ಇವು ಒಟ್ಟುಗೂಡುವುದು ಬಹು ಅಪೂರ್ವ, ಯುಗಕ್ಕೊಮ್ಮೆ ಹಾಗೆ ಒಂದೆಡೆಗೆ ಈ ತ್ರಿಪುರಗಳು ಸೇರಿದಾಗ ಒಂದು ಬಾಣದಿಂದ ಇವನ್ನು ಸುಡಬಲ್ಲ ದೇವಾಧಿದೇವನಿಂದ ಈ ಲೋಕಕಂಟಕರಿಗೆ ಸಾವು ಬರಬೇಕೆಂದು ವಿಧಿನಿಯಮವಿತ್ತು. ರಾಕ್ಷಸ ಪತ್ನಿಯರು ಶಿವಭಕ್ತೆಯರು, ಮಹಾಪತಿವ್ರತೆಯರು ಆಗಿದ್ದರು ಬಹಳ ಕಾಲ ಮಹಾದೇವನ ಸಾಹಸವನ್ನು ಇವರ ತೇಜಸ್ಸಿನಿಂದ ತ್ರಿಪುರ ಅಡ್ಡಗಟ್ಟಿತು. ಹರನು ಬಹುಕಾಲ ಲಕ್ಷ್ಯಸಾಧನೆಮಾಡಿ ಒಂದೆ ಬಾಣದಿಂದ ಮುಪ್ಪುರಗಳನ್ನು ಸುಟ್ಟುಹಾಕಿದನು (ಶೈವ ಸುಧಾರ್ಣವ, ಪುಟ ೧೯೯ )

**ಸಂಧಿ ೨, ಪದ್ಯ ೪೯ ಮತ್ತು ೫೦**

ಧರ್ಮಗತಿಯ ತಾರತಮ್ಯವ ತಿಳಿವೊಡೆ .
ನೀ ನಡೆ ಮಿಥಿಲೆಗೆ ಧರ್ಮವ್ಯಾಧನ ಬಳಿಗೆ.
ಮಿಥಿಲೆಯ ಬಳಿ ಸಂದನು ಸಂತೋಷದೊಳು

ರಾಜಧರ್ಮ ಮೂರ್ತಿಯಾದ ಜನಕನ ಊರು ಮಿಥಿಲೆ. ಇದು ಧರ್ಮಸ್ಥಳ ಬ್ರಾಹ್ಮಣನು ಧರ್ಮವ್ಯಾಧನು ಮಾಂಸದ ಅಂಗಡಿಯಲ್ಲಿದ್ದು ಆ ಸಾಮಾನಿನ ವ್ಯಾಪಾರ ಮಾಡುತ್ತಿದ್ದುದನ್ನು ಕಂಡನು ವಿಪ್ರನನ್ನು ನೋಡಿ ಅಂಗಡಿಕಾರನು ಅವನಿಗೆ ನಮಸ್ಕರಿಸಿದನು, ನಿನ್ನನ್ನು ಆ ಪತಿವ್ರತೆ ನನ್ನ ಬಳಿಗೆ ಕಳಿಸಿದ್ದು ನನಗೆ ಗೊತ್ತಾಯಿತು ಎಂದನು, ಈ ಸ್ಥಳ ನಿನಗೆ ಕುಳಿತುಕೊಳ್ಳಲು ತಕ್ಕದ್ದಲ್ಲ, ನನ್ನ ಮನೆಗೆ ಬರುವುದಾದರೆ ನಡೆಯೆಂದನು ಬ್ರಾಹ್ಮಣನು ಒಪ್ಪಿ ಅಲ್ಲಿಗೆ ಹೋದಮೇಲೆ ಅರ್ಘ್ಯಪಾದ್ಯದಿಂದ ಆತನನ್ನು ಸತ್ಕರಿಸಿ, ಸುಖಾಸನದಲ್ಲಿ ಅತಿಥಿ ವಿಶ್ರಮಿಸಿಕೊಳ್ಳಬೇಕೆಂದು ಬೇಡಿದನು

ಇವರಿಬ್ಬರಲ್ಲಿ ಧರ್ಮದ ರೂಪು, ರೀತಿ, ವ್ಯಾಪನೆಯ ಬಗ್ಗೆ ಪ್ರಶ್ನೋತ್ತರಗಳು ನಡೆದುವು ಅದರ ಸಾರಸಂಗ್ರಹವನ್ನು ಇಲ್ಲಿ ಕೊಟ್ಟು ಬ್ರಾಹ್ಮಣನ ಆಖ್ಯಾನವನ್ನು ಮುಗಿಸಲಾಗಿದೆ

ಧರ್ಮಕ್ಕೆ ಶ್ರುತಿ ಆಧಾರ, ಇದು ಅನಂತ ಶಾಖೆಗಳುಳ್ಳದ್ದು. ಆದ್ದರಿಂದ ಧರ್ಮವು ಅನಂತ, ನಿಗೂಢ ಧರ್ಮದಲ್ಲಿ ಪ್ರೀತಿ, ಆಸಕ್ತಿ ಇಟ್ಟರೆ ಅದು ಮನುಷ್ಯನನ್ನು ಮಹೋನ್ನತನನ್ನಾಗಿ ಮಾಡಬಲ್ಲುದು, ದೇವನನ್ನಾಗಿ ಮಾರ್ಪಡಿಸಬಲ್ಲುದು ಆದ್ದರಿಂದ ಧರ್ಮ ಮನುಷ್ಯರಿಗೆ ತಾರಕ ಮತ್ತು ಉದ್ಧಾರಕ.

ಧರ್ಮ ಕಾಲದೇಶಪ್ರಸಂಗಗಳಿಗೆ ತಕ್ಕಂತೆ ರೂಪವನ್ನು ಬದಲಾಯಿಸಿಕೊಳ್ಳುತ್ತದೆ, ಸತ್ಯಭಾಷಣ ಮಾಡುವುದು ಧರ್ಮ, ಆದರೆ ಮದುವೆ ಸಮಯದಲ್ಲಿ, ಮರಣಕಾಲದಲ್ಲಿ ಸುಳ್ಳಾಡಿದರೆ ಅದು ಅಧರ್ಮವಾಗುವುದಿಲ್ಲ ಸ್ವಧರ್ಮ (= ಕುಲಧರ್ಮ)ದಲ್ಲಿ

ನಡೆಯುತ್ತಿದ್ದರೆ ಹೀನವಂಶದವ ಉಚ್ಚ ವರ್ಣದವನಾಗುತ್ತಾನೆ. ಸ್ವಧರ್ಮದಿಂದ ಜಾರಿದರೆ ಮೇಲು ಜಾತಿಯವನು ಕೀಳು ಜಾತಿಯವನಾಗುತ್ತಾನೆ

ಕುಲಧರ್ಮದ ವೃತ್ತಿ ಕ್ರೂರವಾಗಿದ್ದರೂ ಸಾಧುವಾದದ್ದೇ, ಸೃಷ್ಟಿ ಪ್ರಾಣಿಗಳಿಂದ ನಿಬಿಡವಾಗಿದೆ, ಜ್ಞಾನಿಗಾದರೂ ಕೆಲಸ ಮಾಡುವುದು ತಪ್ಪಿದ್ದಲ್ಲ, ಆದ್ದರಿಂದ ಕೇವಲ ಅಹಿಂಸೆಯನ್ನು ಆಚರಿಸುವುದು ಪ್ರಪಂಚದಲ್ಲಿ ಸಾಧ್ಯವಿಲ್ಲ ಅನಾಸಕ್ತಿಯಿಂದ ಕುಲದ ಕಸಬನ್ನು ನಡಸಿಕೊಂಡುಹೋದರೆ, ಅದರ ಫಲ ಅಂಟದು, ಆತ್ಮೋನ್ನತಿಗೆ ಪ್ರತಿಬಂಧಕವಾಗದು.

**ವ್ಯಕ್ತಿ ಧರ್ಮ.**—ಶಿಷ್ಟಾಚಾರಗಳನ್ನು ಪಾಲಿಸುವುದು ಸಾಧು ಸಹವಾಸ ಮಾಡುವುದು ಯಜ್ಞ, ದಾನ, ತಪ, ವೇದಾಧ್ಯಯನ, ಭೂತದಯೆ, ಅಹಿಂಸೆ, ನಯ ನುಡಿ—ಇವುಗಳ ಆಚರಣೆ, ಆರ್ಜನೆಯೇ ಶಿಷ್ಟಾಚಾರವೆಂಬುದು ಕಾಮಕ್ರೋಧಗಳನ್ನು ಗೆಲ್ಲುವುದೂ ಶಿಷ್ಟಾಚಾರದ ಒಂದು ಅಂಗವೇ ಆಗಿರುತ್ತದೆ ಇಂಥ ಆಚಾರ, ಗುಣ, ಬಲ ಉಳ್ಳವನು ಶಿಷ್ಟನು ಶಿಷ್ಟಾಚಾರದಿಂದ ಯೋಗವುಂಟಾಗಿ ಜ್ಞಾನ ಲಭಿಸಿ ಸಂಸಾರ ಭಯ ತಪ್ಪುತ್ತದೆ

**ಗೃಹಸ್ಥಾಶ್ರಮ ಧರ್ಮ.**— ತಾಯಿ ತಂದೆಗಳಲ್ಲಿ ತುಂಬ ಆದರವಿರಿಸುವುದು ಅವರನ್ನು ಭಕ್ತಿಯಿಂದ ಕೇವಲ ಭೂದೇವರೆಂದು ಭಾವಿಸುವುದು ಈ ಗುರು ಜನರ ಸತ್ಕಾರದಿಂದ, ಇವರ ಸಂತೋಷ ಆಶೀರ್ವಾದಗಳಿಂದ ಮಗನಿಗೆ ಶ್ರೇಯಸ್ಸು ಉಂಟಾಗುತ್ತದೆ ತಪೋಬಲ ಬರುತ್ತದೆ ಪ್ರಜ್ಞಾಲಾಭವಾಗುತ್ತದೆ

ಉದಾ: ಧರ್ಮವ್ಯಾಧ.

**ಮೋಕ್ಷ ಧರ್ಮ.**—ಧರ್ಮನಿಷ್ಠೆ ಉಂಟಾಗಲು ರಾಗದ್ವೇಷಗಳನ್ನು ಬಿಡಬೇಕು; ಮಹಾತ್ಮರನ್ನು ಉಪಚರಿಸಬೇಕು. ಮೇಲೆ ವಿವರಿಸಿದ ಧರ್ಮಾಂಗಗಳನ್ನು ಅರಿತು ಆಚರಿಸಿದರೆ, ಇಂದ್ರಿಯ

ಜಯವಾಗುತ್ತದೆ ಚಿತ್ತ ವಶವಾಗಿ ಪ್ರಸನ್ನವಾಗುತ್ತದೆ ಧರ್ಮ ನಡಸಿಯೂ ಅತೃಪ್ತಿಹೊಂದುವ ವ್ಯಕ್ತಿಯೇ ಜ್ಞಾನಿ. ಇಂಥವನು ಬ್ರಹ್ಮವಿದ್ಯೆಯನ್ನು ಗ್ರಹಿಸುತ್ತಾನೆ ಆತ್ಮತತ್ವವನ್ನು ಗೊತ್ತು ಮಾಡಿಕೊಳ್ಳುತ್ತಾನೆ ಶುಭಾಶುಭಕರ್ಮಗಳ ಎಲ್ಲೆ ಬಲೆಗಳನ್ನು ಮೀರಿ ಪರಮ ಸುಖವನ್ನು ಹೊಂದುತ್ತಾನೆ

**ಕರ್ಮ ಚಕ್ರ.—** ಇದು ಉಂಟಾಗಲು ಪೂರ್ವ ಜನ್ಮ ಸಂಸ್ಕಾರ, ಪ್ರಾರಬ್ಧಗಳು ಕಾರಣ ಒಳ್ಳೆಯ ಕೆಟ್ಟ ಕೆಲಸಗಳಿಂದ ವ್ಯಕ್ತಿಗೆ ಏಳು–ಬೀಳು ಉಂಟಾಗುತ್ತವೆ ಧರ್ಮಜ್ಞಾನವೂ, ಆಚಾರವೂ ಇವುಗಳನ್ನು ಸರಿಮಾಡುತ್ತವೆ, ಇವುಗಳ ಫಲದಿಂದ ವ್ಯಕ್ತಿ ಸೆರೆಯಾಗದಂತೆ ಮಾಡುತ್ತದೆ ಧರ್ಮದ ಬೆಳಕಿನಲ್ಲಿ ಶುಭಾಶುಭ ಕರ್ಮಗಳು ವ್ಯತ್ಯಾಸಹೊಂದುತ್ತವೆ

ಹೀಗೆ ಧರ್ಮ ವಿವರಣೆ ಮಾಡಿದನಂತರ ಧರ್ಮವ್ಯಾಧ ಬ್ರಾಹ್ಮಣನಿಗೆ ತನ್ನ ಮನೆಯಲ್ಲಿ ದೇವಾಲಯದಂತಿರುವ ಕೋಣೆಯನ್ನು ತೋರಿಸಿದನು. ಅಲ್ಲಿ ಆತನ ಮುಪ್ಪಿನ ತಾಯಿ ತಂದೆಗಳು ಕುಳಿತಿದ್ದರು ಅವರಿಗೆ ನಮಸ್ಕರಿಸಿ ಆಮೇಲೆ ಬ್ರಾಹ್ಮಣನ ಪರಿಚಯ ಮಾಡಿಕೊಟ್ಟನು, ಇವರು ನನ್ನ ಭಾಗದ ದೇವತೆಗಳು ಎಂದನು ಅವನ ತಾಯಿ ತಂದೆಗಳು ವಿಪ್ರನನ್ನು ಸತ್ಕರಿಸಿದರು. ಧರ್ಮವ್ಯಾಧನು ಬ್ರಾಹ್ಮಣನಿಗೆ ಹಿತೋಪದೇಶವನ್ನು ಮಾಡಿದನು "ನೀನು ಕುರುಡರಾದ ತಾಯಿ ತಂದೆಗಳನ್ನು ತೊರೆದು ವೇದಾಭ್ಯಾಸಕ್ಕೆಂದು ಹವಣಿಸಿದ್ದು ತಪ್ಪು ಬೇಗ ಹಿಂದಿರುಗಿ ಅವರ ಶೋಕವನ್ನು ಹೋಗಲಾಡಿಸಿ, ಸಂತೋಷಪಡಿಸು, ಎಂದರೆ ನಿನಗೆ ಮೇಲು, ಮಂಗಳ. ನನಗೆ ಧರ್ಮಜ್ಞನೆಂದು ಕೀರ್ತಿ ಬರಲು ನಾನು ಮಾತಾಪಿತರನ್ನು ಓಲೈಸುವುದೇ ಕಾರಣ" ಎಂದನು. ಬ್ರಾಹ್ಮಣನು ಧರ್ಮವ್ಯಾಧನ ಮಾತಿನಂತೆ ನಡೆದನು

(ಮಹಾಭಾರತ ವನಪರ್ವ ಅಧ್ಯಾಯಗಳು ೨೦೭–೨೧೬

**ಸಂಧಿ ೩, ಪದ್ಯ ೪೬.**

ನಳನೊಳು ನಲ್ಮೆಯನೆಸಗಿ
ಪೆಂಡಿರೊಳೆಣೆಯಿಲ್ಲದ ಕೀರ್ತಿಯ
ತಳೆದೆಸೆದಳು ದಮಯಂತಿ.

ಈಕೆ ವಿದರ್ಭದೇಶದ ದೊರೆಯಾದ ಭೀಮನೆಂಬವನ ಮಗಳು, ನಿಷಧದೇಶದ ದೊರೆಯಾದ ನಳನನ್ನು ಸ್ವಯಂವರದಲ್ಲಿ ಮದುವೆಯಾದಳು ಈ ಅನುರೂಪ ದಂಪತಿಗಳು ಬಹುಕಾಲ ಸುಖದಿಂದಿದ್ದರು ಕಲಿಮಹಿಮೆಯಿಂದ ನಳನು ತನ್ನ ತಮ್ಮನಾದ ಪುಷ್ಕರನೊಡನೆ ಜೂಜಾಡಿ ಅವನಿಗೆ ರಾಜ್ಯಕೋಶವನ್ನೆಲ್ಲ ಸೋತನು ವನವಾಸಕ್ಕೆ ಹೊರಟನು ಮಹಾಸಾಧ್ವಿಯಾದ ದಮಯಂತಿ ಆತನನ್ನು ಅನುಸರಿಸಿದಳು ಇಬ್ಬರೂ ಅರಣ್ಯವನ್ನು ತಲುಪಿದರು

ಅಲ್ಲಿಯ ಕಷ್ಟಕೋಟಲೆಗಳನ್ನು ಸಹಿಸಿ, ಆಯಾಸಗೊಂಡು ದಂಪತಿಗಳು ಒಂದು ಕಡೆ ವಿಶ್ರಮಿಸಿದರು ದಮಯಂತಿ ತೌರೂರಿಗೆ ಹೋಗೆಂದ ಗಂಡನ ಸಲಹೆಯನ್ನು ಒಪ್ಪಲಿಲ್ಲ, ಶ್ರಮದಿಂದ ಕಂಗೆಟ್ಟು ನಿದ್ರೆ ಹೋದಳು ದುಃಖವಿಹ್ವಲನಾದ ನಳನು ಎಚ್ಚರವಾಗಿದ್ದನು ಆಕೆಯನ್ನು ಅಲ್ಲಿ ಬಿಟ್ಟುಹೋದರೆ ದಾರಿತೋರದೆ ಅವಳು ತಂದೆಮನೆಗೆ ಹೋಗಿ ಸುಖಿಸುವಳೆಂದು ಎಣಿಸಿ ನಳನು ಹೆಂಡತಿಯನ್ನು ಬಿಟ್ಟು ನಡೆದನು ದಿಕ್ಪಾಲರು ಆಕೆಯನ್ನು ರಕ್ಷಿಸಲೆಂದು ಕೋರಿದನು

ನಿದ್ದೆಯಿಂದ ದಮಯಂತಿ ಎದ್ದಳು, ಪತಿಯನ್ನು ನೆನೆದು ಶೋಕಿಸಿದಳು, ಕಾಡುಮೇಡಿನಲ್ಲಿ ಆತನನ್ನು ಹುಡುಕಿದಳು. ಪ್ರಾಣಭಯ ಪರಾಭವಗಳನ್ನು ಎದುರಿಸಿದಳು ಚೇದಿರಾಜನ ರಾಜಮಾತೆಯ ಹತ್ತಿರ ಸೈರಂಧ್ರಿ ಕೆಲಸಮಾಡಿಕೊಂಡು ಕೆಲಕಾಲ ಇದ್ದಳು ಆಮೇಲೆ ತಂದೆಯಕಡೆಗೆ ಹೋಗಿ, ಎರಡನೆಯ

ಸ್ವಯಂವರದ ಹಂಚಿಕೆಯಿಂದ ನಳನನ್ನು ಬರಮಾಡಿಕೊಂಡಳು. ತನ್ನನ್ನು ಅಡವಿಯಲ್ಲಿ ತ್ಯಜಿಸಿದನೆಂದು ಆತನನ್ನು ಪ್ರೀತಿಸುವುದನ್ನು ಬಿಡಲಿಲ್ಲ

(ಮಹಾಭಾರತ ಅಧ್ಯಾಯಗಳು ೫೩-೭೯)

**ಲೋಪಾಮುದ್ರೆ: ಸಂಧಿ ೩, ಪದ್ಯ ೪೯**

ವಿದರ್ಭದೇಶದ ದೊರೆಯ ಮಗಳು, ಅಗಸ್ತ್ಯಮಹರ್ಷಿಗಳ ಪತ್ನಿ ಮದುವೆಯಾದೊಡನೆ ಪತಿಯ ಇಷ್ಟದಂತೆ ದಿವ್ಯ ವಸ್ತ್ರಾಭರಣಗಳನ್ನು ತೆಗೆದೊಗೆದು ನಾರು ಸೀರೆಯನ್ನುಟ್ಟು ಮುನಿವೃತ್ತಿಯನ್ನು ಕೈಕೊಳ್ಳುವಳು ಗಂಗಾತೀರದಲ್ಲಿ ಪತಿಯೊಡನೆ ಅನುಷ್ಠಾನಮಾಡುತ್ತಾಳೆ, ಪತಿ ಶುಶ್ರೂಷೆಯಲ್ಲಿ ನಿರತಳಾಗುತ್ತಾಳೆ

**ಸಂಧಿ ೫, ಪದ್ಯ ೫**

ಹಿಮಾಲಯ ಜನಕರು ಪರಮಪತಿವ್ರತೆಯರೂ ಲೋಕಪೂಜ್ಯರೂ ಆದ ಪಾರ್ವತಿ ಜಾನಕಿಯರಂಥ ಮಕ್ಕಳನ್ನು ಪಡೆದು, ಇಂಥವರ ತಂದೆಗಳು ಎಂಬ ಖ್ಯಾತಿಮಹಿಮೆಯನ್ನು ಪಡೆದರು.

**ಸಂಧಿ ೬, ಪದ್ಯ ೧**

ಅವನಿಗಿಳೆಯುಮಾಗಸಮುಮಳತೆಗೊಳುವಾ ವೇಳೆಯೊಳಡಿಗಳಿಗೆ ಪಾವುಗೆಯಂತಳವಟ್ಟು ತೋರಿದುವಾ ದೇವ

ವಾಮನಾವತಾರದ ಕಥೆ ಭಗವಾನ್ ವಿಷ್ಣು ಮಹರ್ಷಿ ಕಶ್ಯಪರ ಕುಮಾರನಾಗಿ ಜನಿಸಿದನು. ದೈತ್ಯಾಧಿಪತಿಯಾದ ಬಲಿಯನ್ನು ಸೋಲಿಸಲೆಂದು ವಟು ವಾಮನನ ರೂಪಿನಿಂದ ಆ ರಾಕ್ಷಸೇಂದ್ರನ ಸಭೆಗೆ ಬಂದನು ಅತಿಥಿಗೆ ಏನು ಇಷ್ಟವೆಂದು ಬಲಿ ಪ್ರಶ್ನಿಸಿದನು ಮೂರು ಪಾದದಷ್ಟು ಭೂಮಿ ತನಗೆ ಸಾಕೆಂದನು. ಬಲಿ ಕೊಟ್ಟೆನೆಂದು ದಾನದ ನೀರನ್ನು ಬಿಟ್ಟನು ಆಮೇಲೆ ಸ್ವಾಮಿ ತ್ರಿವಿಕ್ರಮನಾಗಿ ವಿರಾಡ್ರೂಪ ಧರಿಸಿ ಭೂಮಿ ಆಕಾಶಗಳನ್ನು ಎರಡು ಹೆಜ್ಜೆಗಳಿಂದ ಆಕ್ರಮಿಸಿದನು ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ಶಿರದಲ್ಲಿಟ್ಟನು.

(ಭಾಗವತಾಮೃತ: ಪುಟ ೨೭೫)

**ಸಂಧಿ ೯, ಪದ್ಯ ೨೭**

ಆ ಕ್ಷಣದೊಳು ಶುಕಮುನಿಯಡಿಗೆರಗಿ ಪರೀಕ್ಷಿತನಿಂತು ಕೇಳಿದನು.

ಶ್ರೀ ಶುಕರು ವ್ಯಾಸಮಹರ್ಷಿಗಳ ಪುತ್ರರು. ತಂದೆ ಇವರಿಗೆ ಭಾಗವತವನ್ನು ಹಾಡ ಕಲಿಸಿದರು ಜನಕ ನಾರದರಿಂದ ಇವರು ಪರಮಜ್ಞಾನವನ್ನು ಹೊಂದಿದರು, ಜೀವನ್ಮುಕ್ತರಾದರು. ತ್ರಿಲೋಕ ಸಂಚಾರಿಗಳಾದ ಇವರು ಅಕಸ್ಮಾತ್ತಾಗಿ ಪರೀಕ್ಷಿತ ಮಹಾರಾಜನಲ್ಲಿ ಬಂದರು ಮುನಿ ಶಾಪದಿಂದ ಏಳು ದಿನಗಳಲ್ಲಿ ಸಾಯಲಿರುವ ಆ ರಾಜರ್ಷಿಗೆ ಭಗವಾನ್ ವಿಷ್ಣುವಿನ ಮಹಿಮೆಯನ್ನು ತಿಳಿಸುವ ಭಾಗವತವನ್ನು ಶ್ರವಣಮಾಡಿಸಿ ಧನ್ಯನನ್ನಾಗಿ ಮಾಡಿದರು

(ಶ್ರೀ ಮಹಾಭಾರತಸಾರ ಅಧ್ಯಾಯಗಳು ೧೫೭–೧೬೦ ಮತ್ತು *Srimad Bhagavata condensed*–pp 10, 13, 19 & 20)

**ಸಂಧಿ ೯, ಪದ್ಯ ೩೨**

ಖಟ್ವಾಂಗನೆಂಬರಸು
ಕುಂದದೆ ಭಜಿಸಿ ಮುಕುಂದನ ಚರಣವ ಸಂದನು ಪರಮಪದವಿಗೆ

ಖಟ್ವಾಂಗನು ಇಕ್ಷ್ವಾಕುವಂಶದ ಸಾರ್ವಭೌಮನು. ದೇವ ದೈತ್ಯರ ಯುದ್ಧದಲ್ಲಿ ಇಂದ್ರನಿಗೆ ನೆರವಾದನು ದೇವತೆಗಳು ಪ್ರಸನ್ನರಾಗಿ ವರವನ್ನು ಕೇಳಿಕೋ ಎಂದರು. ಚಕ್ರವರ್ತಿ ಅವರಿಂದ ತನ್ನ ಆಯುಷ್ಯ ಎರಡು ಗಳಿಗೆ ಮಾತ್ರ ಉಳಿದಿದೆಯೆಂದು ತಿಳಿದನು. ವಿರಕ್ತನಾಗಿ ಭಗವಾನ್ ನಾರಾಯಣನನ್ನು ಏಕಾಗ್ರ ಮನದಿಂದ ಧ್ಯಾನಿಸಿ ಮೋಕ್ಷವನ್ನು ಹೊಂದಿದನು

# ಶಬ್ದಕೋಶ

## ಅ

| | | |
|---|---|---|
| ಅಕಲುಷೆ | ೧-೧೪ | ಮಲಿನತೆಯಿಲ್ಲದವಳು |
| ಅಕ್ಕೆ | ೫-೨೦, ೯-೫೭ | ಅಗಲಿ |
| ಅಗರ | ೯-೫೯ | ಸಂ. ಅಗ್ರಹಾರ |
| ಅಗ್ರ | ೨-೩೩ | ತುದಿ, ಶ್ರೇಷ್ಠ |
| ಅಡಕ | ೪-೬, ೬-೪೨ | ವಿಧೇಯತ್ತೆ, ಹತೋಟಿ |
| ಅಡಸು | ೯-೩೦ | ಒದಗು, ಸಂಭವಿಸು |
| ಅಡಿ | ೩-೧೫, ೪-೩೯ | ಪಾದ, ಕಾಲು |
| ಅಣ್ಪು | ೭-೯ | ಲೇಪನ, ಬಳಿಯುವುದು |
| ಅಣುಗ | ೪-೩೪ | ಮಗ, ಪ್ರೀತಿಯವನು |
| ಅತಿಥಿ | ೮-೩೨ | ಕರಸಿಕೊಂಡು ಮನೆಗೆ ಬಂದವನು |
| ಅದ್ರಿ | ೧-೪ | ಬೆಟ್ಟ, ಗುಡ್ಡ |
| ಅಧವ | ೮-೩೨ | ದೀನ, ಪೋಷಕರಿಲ್ಲದವ |
| ಅನಿಬರು | ೧-೪೭, ೪-೫ | ಅಷ್ಟರೂ, ಎಲ್ಲರೂ |
| ಅನು | ೪-೩೭ | ಹದ, ಔಚಿತ್ಯ |
| ಅನುನಯ | ೬-೪೦ | ಸ್ನೇಹ |
| ಅನುಪಮ | ೩-೧ | ಹೋಲಿಕೆಯಿಲ್ಲದ |
| ಅನುರಾಗ | ೭-೪೨ | ಭಕ್ತಿ, ಪ್ರೀತಿ |
| ಅನುವದಿಸು | ೫-೩ | ತಿಳಿಸು, ಹೇಳು |
| ಅನುವೃತ್ತಿ | ೪-೩ | ಅನುಸರಣೆ |
| ಅಪಾಂಸುಲೆ | ೨-೨೦ | ನಿರ್ಮಲಳು, ಪತಿವ್ರತೆ |
| ಅಬಲೆ | ೪-೪೭ | ಬಲವಿಲ್ಲದವಳು, ಹೆಂಗಸು |
| ಅಮರ್ದು | ೫-೧ | ಸಂ. ಅಮೃತ |
| ಅರಿದು | ೨-೨೬ | ಕಷ್ಟ, ಅಸಾಧ್ಯ |
| ಅಲ್ಲಗಳೆ | ೬-೬ | ಹೀಯಾಳಿಸು, ಕಡೆಗಣಿಸು |
| ಅಲುಗು | ೭-೧೯ | ಅಲುಗಿಸು, ಕದಲಿಸು |

| | | |
|---|---|---|
| ಅಲಿಗೆಯ್ | ೫-೩೭ | ಹಿಂಸೆಮಾಡು |
| ಅವನಿ | ೪-೪೬ | ಇಳೆ, ಭೂಮಿ |
| ಅವಮತಿ | ೪-೧೦ | ಅವಮಾನ |
| ಅಷ್ಟೈಶ್ವರ್ಯ | ೧-೧೫ | ರಾಜ್ಯ, ಭಂಡಾರ, ಸೈನ್ಯ, ಆನೆ, ಕುದುರೆ, ಛತ್ರ, ಚಾಮರ, ಪಲ್ಲಕ್ಕಿ |
| ಅಳ್ದು | ೭-೩೦ | ಮುಳುಗಿ (ಧಾತು. ಅಳ್) |
| ಅಳಲು | ೫-೩೩, ೭-೨೬ | ಸಂಕಟ, ದುಃಖ |
| ಅಳವು | ೭-೨೮ | ಬಲ, ಶಕ್ತಿ |
| ಅಳವಡು | ೮-೩ | ಹೊಂದು |
| ಅಳ್ಕರು | ೨-೩೭ | ಮಮತೆ |
| ಅಳಿ | ೭-೨೩ | ನಾಶವಾಗು |
| ಅಳುಕು | ೫-೪೦ | ಹೆದರಿಕೆ, ದಿಗಿಲು |
| ಅಂಕೆ | ೬-೧೮ | ಹಿಡಿತ, ಸ್ವಾಧೀನ |
| ಅಂಗವಿಸು | ೧-೨೬ | ಹೊಂದಿಸು |
| ಅಂಗಹಾರ | ೬-೨೨ | ಅಂಗವಿಕ್ಷೇಪ |
| ಅಂಗ | ೮-೨೨ | ಒಡಲು, ದೇಹ |
| ಅಂಡಲೆ | ೪-೫, ೮-೪೭ | ಪೀಡೆ, ತೊಂದರೆ |
| ಅಂದ | ೨-೪೧, ೩-೧೪ | ರೀತಿ, ಬಗೆ |
| ಅಂಬುಜ | ೩-೪ | ತಾವರೆ |

## ಆ

| | | |
|---|---|---|
| ಆಣತಿ | ೧-೩೭, ೩-೫ | ಸಂ. ಆಜ್ಞಪ್ತಿ, ಅಪ್ಪಣೆ |
| ಆಣ್ಮ | ೧-೧೬, ೫-೩೨ | ಒಡೆಯ, ಸ್ವಾಮಿ |
| ಆತ್ಮ | ೪-೩ | ತನ್ನ |
| ಆನ್ | ೧-೪೪ | ತಾಳು, ಧರಿಸು |
| ಆಪು | ೪-೩೬ | ಹ.ಗ. ಆರ್ಪು, ಸಾಮರ್ಥ್ಯ |
| ಆರಭಟೆ | ೩-೨೫ | ಅಬ್ಬರ |
| ಆಯ | ೩-೨೬, ೬-೪೨ | ವರಮಾನ, ಹುಟ್ಟುವಳಿ |
| ಆರ್ | ೩-೨೫ | ಕೂಗು, ಗರ್ಜಿಸು, ಶಕ್ತನಾಗು |
| ಆರಯ್ | ೨-೨೯, ೩-೩೬, ೪-೪೮ | ಯೋಚಿಸು, ವಿಚಾರಮಾಡು |

| | | |
|---|---|---|
| ಆರೋಗಣೆ | ೮-೧೪ | ಊಟ |
| ಆಲಿ | ೭-೪೪ | ಕಣ್ಣುಗುಡ್ಡೆ |
| ಆಲಿಸು | ೨-೫೧ | ಕೇಳು |
| ಆಸುರ | ೩-೨೧ | ಜುಗುಪ್ಸೆ |

## ಇ

| | | |
|---|---|---|
| ಇಂಗದಿರ | ೨ ೨ | ಇಸಿದು+ಕದಿರ್+ಅ=ತಂಪಾದ ಕಿರಣವುಳ್ಳವ (ಚಂದ್ರ) |
| ಇಂಗಿತ | ೫-೩೮, ೬-೨೨ | ಆಶಯ, ಅಭಿಪ್ರಾಯ, ಮನೋಭಾವ |
| ಇಂಗೋಲ | ೨-೨ | ಇನಿದು+ಕೋಲ್+ಅ=ಕಬ್ಬು ಬಿಲ್ಲಾಗಿ ಉಳ್ಳವ, ಮನ್ಮಥ |
| ಇಂದೀವರ | ೪-೨ | ಕನ್ನೈದಿಲೆ |
| ಇಂದು | ,, | ಚಂದ್ರ |
| ಇನಿಯ | ೩-೩೮, ೪-೨೨ | ಪ್ರಿಯ |
| ಇಂಪುಗೊಳ್ | ೭-೫ | ತಾಳ್ಮೆಹೊಂದು, ಸುಖಪಡು |
| ಇಂಬು | ೨-೧೬ | ಅವಕಾಶ, ಎಡೆ |
| ಇರವು | ೨-೪೩ | ಸ್ಥಿತಿ |
| ಇರುಳು | ೮-೫೦ | ಕತ್ತಲೆ |
| ಇಹ | ೫-೪೮ | ಈ ಲೋಕ, ಐಹಿಕ |

## ಈ

| | | |
|---|---|---|
| ಈಡು | ೯-೭ | ಪಾತ್ರ, ಸಮ |
| ಈಡಾಡು | ೭-೨೫ | ಎಸೆ, ಬೀಸಾಡು |

## ಉ

| | | |
|---|---|---|
| ಉಗ್ರ | ೨-೨೮, ೭-೨೨, ೯-೪೪ | ಕ್ರೂರ, ಕಠಿಣವಾದ |
| ಉಗು | ೬-೪೫ | ಸುರಿ, ಸ್ರವಿಸು |
| ಉಜ್ಜುಗ | ೩-೩೯, ೮-೩೬ | ಸಂ. ಉದ್ಯೋಗ, ಕೆಲಸ |
| ಉಡಿ | ೨-೮ | ಒಡೆ, ಮುರಿ |
| ಉಡುಗು | ,, | ಕುಗ್ಗು, ಕಡಮೆಯಾಗು |

| | | |
|---|---|---|
| ಉದ್ದಂಡ | ೪-೪೧ | ಹೆಚ್ಚಿಕೊಂಡಿರುವ, ಗರ್ವಿಷ್ಠ |
| ಉನ್ನತಿ | ೫-೨೫ | ದೊಡ್ಡಸ್ತಿಕೆ, ಘನತೆ |
| ಉಪಕರಣ | ೮-೨೯ | ಸಾಮಾನು, ಸಲಕರಣೆ |
| ಉಪಸ್ಕರ | ೮-೨೬ | ಪದಾರ್ಥ |
| ಉರವಣಿಸು | ೭-೨೦ | ದುಡುಕು |
| ಉರು | ೨-೩೨, ೮-೨೭ | ಹೆಚ್ಚು |
| ಉಲಿ | ೭-೨೨ | ಶಬ್ದಮಾಡು, ಧ್ವನಿಮಾಡು |

## ಊ

| | | |
|---|---|---|
| ಊಡು | ೬-೨೫ | ತಿನ್ನಿಸು, ಊಟಮಾಡಿಸು |
| ಊಣೆಯ | ೪-೪೨ | ಕುಂದು, ಲೋಪ |
| ಊಳಿಗ | ೧-೪೫, ೫-೪೩ | ಸೇವೆ, ಪರಿಚರ್ಯೆ |

## ಎ

| | | |
|---|---|---|
| ಎಡೆ | ೨-೧೪, ೪-೩೭, ೭-೪೭ | ಸ್ಥಳ, ಅವಕಾಶ |
| ಎಣಿಸು | ೩-೪೩, ೭-೩೧ | ಯೋಚಿಸು, ಹಂಬಲಿಸು |
| ಎಣೆ | ೨-೨೬, ೩-೪೬ | ಸಮ, ಸರಿ |
| ಎರಕ | ೧-೨೮, ೬-೪೧, ೭-೩೧ | ಅಂತಃಕರಣ, ಪ್ರೇಮ |
| ಎರಗು | ೨-೧, ೬-೨೨ | ನಮಸ್ಕರಿಸು, ಬಾಗು |
| ಎರವು | ೬-೫೦, ೭-೪೮ | ದೂರ, ಅಂತರ, ಭೇದ |
| ಎರೆಯ | ೭-೪೭ | ಪ್ರಭು, ಸ್ವಾಮಿ |
| ಎರೆ | ೪-೧೯ | ಸುರಿ, ಹನಿಸು, ಯಾಚಿಸು |
| ಎಲರ್ | ೨-೭, ೭-೩೩ | ಗಾಳಿ |
| ಎಲೆಗೆ | ೫-೩೭ | ಸಂಬೋಧನೆ ಎಲೇ! |
| ಎಸಕ | ೨-೮, ೪-೨೬, ೬-೨೪, ೭-೫ | ಕೆಲಸ, ಸಾಮರ್ಥ್ಯ |
| ಎಸಗು | ೨-೩೫, ೩-೧೬, ೪-೩, ೭-೧೧ | ಮಾಡು |
| ಎಸೆ | ೧-೧೦, ೨-೩೦, ೩-೪೬ | ಹೊಳೆ, ಪ್ರಕಾಶಿಸು |

| | | |
|---|---|---|
| ಎಳಮೆ | ೪-೪೭ | ಚಿಕ್ಕತನ, ಬಾಲ್ಯ |
| ಎಳಸು | ೧-೨೧, ೫-೧೯ | ಬಯಸು, ಆಶಿಸು |

## ಏ

| | | |
|---|---|---|
| ಏಳಿಸು | ೨-೭ | ತಿರಸ್ಕರಿಸು |
| ಏಳ್ಗೆ | ೨-೫೧, ೫-೮ | ಹೆಚ್ಚಳ, ಅಭಿವೃದ್ಧಿ |

## ಐ

| | | |
|---|---|---|
| ಐಸಲೆ | ೧-೨೯, ೨-೧೫ | ಅಲ್ಲವೆ |
| ಐತರು | ೭-೩ | ಹತ್ತಿರಕ್ಕೆ ಬರು |
| ಐದೆ | ೧-೩೮ | ಚೆನ್ನಾಗಿ |

## ಒ

| | | |
|---|---|---|
| ಒಗೆ | ೧-೯, ೫-೧೦ | ಹುಟ್ಟು, ಉಂಟಾಗು |
| ಒಡಬಡು | ೩-೨೦ | ಸಮ್ಮತಿಸು, ಒಪ್ಪು |
| ಒಡರಿಸು | ೩-೧೫, ೫-೬, ೬-೪೮ | ಉಂಟಾಗು, ಉಂಟುಮಾಡು, ಮಾಡಿಸು |
| ಒತ್ತು | ೧-೨೮, ೪-೮ | ಹತ್ತಿರ, ನಿಕಟ |
| ಒದವಿಪುದು | ೩-೧೧ | ಒದಗಿಸುವುದು |
| ಒಪ್ಪ | ೭-೧೬, ೮-೩೭ | ಚೆಲುವು, ಮೆರುಗು |
| ಒಯ್ಯನೆ | ೩-೧೬, ೮-೩೬ | ಮೆಲ್ಲಗೆ, ಮೃದುವಾಗಿ |
| ಒರಲು | ೭-೨೫ | ನರಳು, ಸಂಕಟಪಡು |
| ಒರೆ | ೭-೨೩ | ಹೇಳು |
| ಒಲವು | ೩-೨೦ | ಪ್ರೀತಿ |
| ಒಲುಮೆ | ೬-೨೦ | ಪ್ರೇಮ |
| ಒಲೆ | ೮-೩೭ | ಬಾಗು, ಬಳುಕು |
| ಒಸೆ | ೪-೨೬, ೫-೧೦ | ಪ್ರೀತಿಸು, ಪ್ರಸನ್ನವಾಗು |
| ಒಳವು | ೨-೨೨ | ಉಂಟು |

## ಓ

| | | |
|---|---|---|
| ಓ | ೩-೪೮ | ಪ್ರೀತಿಸು |

| | | |
|---|---|---|
| ಓಪ | ೭-೭ | ಪ್ರಿಯ, ಪತಿ |
| ಓರಗೆ | ೪-೨೩ | ಸಮಾನ, ಒಂದೇ ವಯಸ್ಸಿನ |
| ಓರಂತೆ | ೧-೩೦, ೫-೪೫ | ಚೆನ್ನಾಗಿ |
| ಓವು | ೪-೪೫ | ಸಾಕು, ಕಾಪಾಡು |
| ಓಸರಿಸು | ೩-೨೧ | ಹಿಮ್ಮೆಟ್ಟು, ಪಕ್ಕಕ್ಕೆ ಸರಿ |

## ಕ

| | | |
|---|---|---|
| ಕಕ್ಕಸ | ೨-೨೮, ೪-೨೯ | ಸಂ. ಕರ್ಕಶ, ಶ್ರಮ, ದುಷ್ಟತನ |
| ಕಜ್ಜ | ೮-೩೫ | ಸಂ. ಕಾರ್ಯ |
| ಕಟ್ಟಾಣಿ | ೧-೨೭ | ಚಿನ್ನದ ಮಣಿಗಳಿಂದ ಮಾಡಿದ ಸರ |
| ಕಡಲು | ೬-೨ | ಸಮುದ್ರ |
| ಕಡೆಗಣಿಸು | ೫-೨, ೬-೯ | ಅಲಕ್ಷ್ಯಮಾಡು |
| ಕದುಬು | ೧-೨೫, ೩-೧೧, ೭-೩೨ | ಉತ್ಸಾಹ, ಚಿಂತೆ, ಆಗ್ರಹ |
| ಕನಲು | ೩-೧೮, ೬-೪೦ | ಸಿಟ್ಟಾಗು, ಕೋಪಿಸು |
| ಕಬ್ಬ | ೧-೨೯ | ಸಂ. ಕಾವ್ಯ |
| ಕರಣ | ೬-೩೬, ೭-೧೬, ೮-೨೩ | ಇಂದ್ರಿಯ |
| ಕರಿಗಣ್ಮು | ೭-೨ | ದಡವನ್ನು ತೊಳೆ |
| ಕಲ್ಪ | ೭-೨೭, ೮-೪೦ | ಬಹುಕಾಲ, ಸಾವಿರ ಯುಗಗಳಷ್ಟು ಅವಧಿ |
| ಕಲೆ | ೮-೪೦ | ನಿಮಿಷ |
| ಕವಿ | ೧-೨೧, ೭-೪೩ | ಮುಸುಕು, ದಟ್ಟವಾಗು |
| ಕವೆಕೋಡು | ೩-೨೪ | ಮೋಸ, ತಟವಟ |
| ಕಾತರಿಸು | ೭-೩೨ | ತಹತಹಪಡು, ಕಳವಳಿಸು |
| ಕಾಪು | ೪-೭, ೮-೩೮ | ಕಾವಲು, ರಕ್ಷಣೆ |
| ಕಾರ್ಪಣ್ಯ | ೩-೧೮ | ಬಡತನ, ದೈನ್ಯ |
| ಕಾಯ | ೪-೩೦, ೭-೧೧ | ಒಡಲು, ಶರೀರ |
| ಕಾಳಾಂಜಿ | ೧-೧೬ | ಉಗಿಯುವ ಪಾತ್ರೆ |

| | | |
|---|---|---|
| ಕಿಟ್ಟು | ೫-೨೩ | ಸೋಂಕು, ಸ್ಪರ್ಶಿಸು |
| ಕಿಲುಬು | ೮-೨೪ | ಕಪ್ಪು, ಕಳಂಕ, ಕರೆ |
| ಕುಂಚ | ೧-೧೬ | ಚಾಮರ |
| ಕುತ್ತ | ೪-೨೧ | ತಪ್ಪು, ದೋಷ, ಸಂಕಟ, ರೋಗ |
| ಕುರುಪು | ೫-೪೮, ೮-೪೪ | ಗುರುತು, ನೆನಪು |
| ಕುಲಪಾಲಿಕೆ | ೨-೩೬, ೮-೨೫ | ಪತಿವ್ರತೆ |
| ಕೂರ್ತು | ೨-೩೪ | (ಧಾತು : ಕೂರ್) ತೀಕ್ಷ್ಣವಾಗಿ ಇಷ್ಟಪಟ್ಟು |
| ಕೂರ್ಮೆ | ೩-೩೮, ೫-೪೯ | ಪ್ರೇಮ, ವಾತ್ಸಲ್ಯ |
| ಕೃಚ್ಛ್ರ | ೨-೧೩ | ಕಷ್ಟಸಾಧ್ಯವಾದ, ಕಠಿಣ |
| ಕೆಳದಿ | ೭-೭, ೮-೪೫ | ಸಖಿ, ಸ್ನೇಹಿತೆ, ಜತೆಗಾತಿ |
| ಕೇಣ | ೪-೪೨, ೭-೨೦ | ಮತ್ಸರ, ಅಸಹನೆ |
| ಕೇಳಿ | ೩-೪೮ | ಆಟ |
| ಕೈಗೆಡೆ | ೪-೨೪ | ವಶ, ಅಧೀನ |
| ಕೊಂಕು | ೬-೧೮ | ವಕ್ರ, ಡೊಂಕು |
| ಕೊನಬು | ೩-೩೮ | ಕೋಪ, ಮುನಿಸು |
| ಕೊನರು, ಕೊನರಿಸು | ೨-೩೩, ೩-೨೩ | ಚಿಗುರು, ಹೆಚ್ಚುಮಾಡು |
| ಕೋಟಲೆ | ೬-೧೨ | ತೊಂದರೆ |
| ಕೋವಿದ | ೪-೪೧, ೫-೧೧ | ಕುಶಲ, ನಿಪುಣ |
| ಕಂಪು | ೧-೨೬ | ಪರಿಮಳ, ಸುವಾಸನೆ |

## ಖ

| | | |
|---|---|---|
| ಖತಿ | ೨-೪೪, ೩-೨೮ | ರೋಷ, ಆಕ್ರೋಶ |

## ಗ

| | | |
|---|---|---|
| ಗಡಣ | ೫-೨, ೭-೧೯ | ಸಮೂಹ |
| ಗನ್ನಗದುಕ | ೩-೨೨ | ಮರೆಮೋಸ |
| ಗರತಿ | ೩-೩೩, ೪-೩೬, ೭-೯ | ಗೃಹಸ್ತ್ರೀ, ಪತಿವ್ರತೆ |

| | | |
|---|---|---|
| ಗಲಗು | ೩-೨೮, ೬-೨೩ | ಗದ್ದಲ, ಗಲಾಟೆ |
| ಗಳಪು | ೨-೩೯ | ಹರಟು |
| ಗಾಡಿ | ೬-೨೧ | ಚೆಲುವು, ಸೊಬಗು |
| ಗಾಂಪ | ೫-೧೮ | ಬಹಳ ದಡ್ಡ |
| ಗಾರುವಡು | ೩-೨೩ | ಬಿರುಸಾಗು, ಕಠಿಣವಾಗು |
| ಗಾವಿಲ | ೫-೭ | ಸಂ. ಗ್ರಾಮೀಣ , ಮೂಢ |
| ಗಾವುದ | ೧-೭, ೯-೧೯ | ಹರಿದಾರಿ (೩ ಮೈಲಿ) |
| ಗ್ರಾಸ | ೩-೨೧ | ತುತ್ತು, ಆಹಾರ |
| ಗಾಳು | ೩-೨೧ | ಕೀಳು, ದುಷ್ಟ |
| ಗೀಷ್ಪತಿ | ೨-೪೫ | ಬೃಹಸ್ಪತಿ |
| ಗುಣಕರುಗೊಳ್ | ೬-೪೯, ೭-೧ | ಇಷ್ಟವಾಗು, ಪ್ರೀತಿಪಡು |
| ಗೈಮೆ | ೧-೩೪, ೬-೨೫ | ಕೆಲಸ, ದುಡಿಮೆ |

## ಘ

| | | |
|---|---|---|
| ಘುರಿಕ್ಕನೆ | ೬-೩೮ | ಸರ್ರನೆ, ತಟ್ಟನೆ |
| ಘುಳಿಲನೆ | ೭-೪೫ | ಬೇಗನೆ |

## ಚ

| | | |
|---|---|---|
| ಚತುಷ್ಷಷ್ಟಿ | ೧-೧೮ | ಅರುವತ್ತನಾಲ್ಕು |
| ಚರಾಚರ | ೮-೧ | ಜಂಗಮ ಸ್ಥಾವರ, ಚಲಿಸುವ ನೆಲಸಿರುವ |
| ಚಲ್ಲ | ೬-೧೪ | ಸರಸ |
| ಚಾದಗೆ | ೬-೨೬ | ಸಂ. ಚಾತಕ |
| ಚಾಂದ್ರಾಯಣ | ೨-೧೩ | ಒಂದು ವ್ರತ, ನೇಮ |
| ಚಾರಿವರಿ | ೩-೩೭ | ಸುತ್ತಾಟ |
| ಚುನ್ನ | ೪-೧೩, ೯-೭ | ಸುಳ್ಳು |
| ಚೆಂಬೊನ್ನು | ೧-೩೫ | ಕೆಚ್ಚನೆಯ + ಪೊನ್ < ಚೆಂಬೊನ್ (ಚಿನ್ನ, ಬಂಗಾರ) |
| ಚೊಲ್ಲೆಹ | ೭-೧೮ | ತುರುಬು |

## ಛ

| | | |
|---|---|---|
| ಛಲ | ೩-೩೭ | ಹಟ, ಮೊಂಡತನ |

## ಜ

| | | |
|---|---|---|
| ಜಸ | ೩-೪೭, ೪-೫ | ಸಂ. ಯಶಸ್ |
| ಜಾನ | ೭-೪೯ | ಸಂ. ಧ್ಯಾನ |
| ಜಾವ | ೭-೨೭ | ಸಂ. ಯಾಮ ; ಮೂರು ಗಂಟೆಗಳ ಕಾಲ |
| ಜೊನ್ನವಕ್ಕಿ | ೬-೨೫ | ಸಂ. ಜ್ಯೋತ್ಸ್ನಾ ಪಕ್ಷಿ; ಚಕೋರ |
| ಜೋಗಿ | ೭-೩೪ | ಸಂ. ಯೋಗಿ |
| ಜವ್ವನ | ೬-೩, ೮-೩೫ | ಯವ್ವನ, ಪ್ರಾಯ |
| ಜಂಪು | ೬-೮ | ಗುಂಪು, ಸಮುದಾಯ |

## ಠ

| | | |
|---|---|---|
| ಠಾವು | ೯-೨೦ | ಸಂ. ಸ್ಥಾನ, ಎಡೆ, ತಾವು |

## ತ

| | | |
|---|---|---|
| ತಣಿ | ೫-೧೧, ೭-೪೮ | ತೃಪ್ತಿಹೊಂದು |
| ತನಿ | ೧-೪೩, ೭-೨೬ | ಹೆಚ್ಚಾದ |
| ತರಿಳ, ತರಿ ? | ೬-೨೮ | ತಳಲು, ಒರಟು, ಕಣ |
| ತರಿಸಲ್ | ೬-೨೬ | ನಿಶ್ಚಯಿಸು |
| ತವಕ | ೭-೨೧ | ಕುತೂಹಲ, ಆತುರ |
| ತಳುವು | ೩-೧೫ | ತಡಮಾಡು |
| ತಳೆ | ೩-೪೬ | ತಾಳು |
| ತಾಪತ್ರಯ | ೯-೩೮ | ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕ ಸಂಬಂಧವಾದ ತೊಂದರೆಗಳು |
| ತಾಳಿಗೆ | ೯-೨೫ | ಸಂ. ತಾಲುಕಾ; ಗಂಟಲು |
| ತಿಲಕ | ೮-೧೦ | ಹಣೆಬೊಟ್ಟು, ಲಾಂಛನ |
| ತೀವು | ೮-೧೪ | ತುಂಬು |
| ತುಂಗ | ೨-೩೦ | ಶ್ರೇಷ್ಠ, ಎತ್ತರವಾದ |
| ತುಡುಕು | ೬-೩೮ | ಹಿಡಿ, ಮುಟ್ಟು |
| ತುರುಚನ ಗಿಡು | ೭-೨೬ | ದುಸ್ಸ್ಪರ್ಶದ ಗಿಡ |

| | | |
|---|---|---|
| ತುರು | ೮-೮, ೯-೨೩ | ಹಸು, ದನ |
| ತೆಂಕಣ | ೧-೭ | ದಕ್ಷಿಣದ |
| ತೆತ್ತಿಗ | ೪-೨೧ | ನೆಂಟ, ಆಪ್ತ |
| ತೆರ | ೪-೪೬ | ರೀತಿ, ಪ್ರಕಾರ |
| ತೇಜಿ | ೨-೮ | ಕುದುರೆ |
| ತೋಟಿ | ೬-೭ | ಜಗಳ, ಕಲಹ |

## ದ

| | | |
|---|---|---|
| ದುಗುಲ | ೫-೨೦, ೬-೪೩ | ಸಂ. ದುಕೂಲ, ರೇಷ್ಮೆ ಬಟ್ಟೆ |
| ದ್ಯೂತ | ೩-೪೮ | ಜೂಜು |
| ದೆಸೆ | ೪-೩೦ | ಸಂ. ದಶಾ, ಅವಸ್ಥೆ |
| ದೇಗುಲ | ೭-೬ | ಸಂ. ದೇವಕುಲ, ದೇವಸ್ಥಾನ, ಗುಡಿ |
| ದೇಶಿಕ | ೮-೩೩ | ಸದ್ಗುರು |
| ದೇಸಿ | ೩-೧೭ | ಸೊಗಸು |
| ದೊರೆ | ೨-೨೪, ೩-೪೦ | ಸಮಾನ, ಶ್ರೇಷ್ಠ |

## ಧ

| | | |
|---|---|---|
| ಧಾಮ | ೧-೧ | ವಾಸಸ್ಥಳ |
| ಧುರ | ೧-೧೩ | ಯುದ್ಧ |

## ನ

| | | |
|---|---|---|
| ನಗ | ೩-೨ | ಪರ್ವತ, ಬೆಟ್ಟ |
| ನತಿ | ೮-೩೩ | ನಮಸ್ಕಾರ |
| ನಲವು | ೨-೩೭, ೪-೮ | ಸಂತೋಷ, ಪ್ರೀತಿ |
| ನಲ್ಲ | ೪-೪೭ | ಪ್ರಿಯ, ಒಳ್ಳೆಯವ |
| ನವಿರು | ೬-೩೯, ೭-೩೯ | ರೋಮಾಂಚ |
| ನಳಿನ | ೭-೪೫ | ಕಮಲ |
| ನಿಗಮ | ೧-೫೭ | ವೇದ |
| ನಿಟ್ಟಿಸು | ೬-೧೫, ೮-೩೭ | ನೋಡು |
| ನಿಧಿ | ೭-೪೧ | ದ್ರವ್ಯ, ಭಂಡಾರ |
| ನಿರವಿಸು | ೩-೩೩ | ಸಂ. ನಿರೂಪಿಸು; ಹೇಳು |

| | | |
|---|---|---|
| ನೀಕರಿಸು | ೪-೩೭, ೫-೩೧ | ತಾತ್ಸಾರಮಾಡು, ಧಿಕ್ಕರಿಸು |
| ನೀಟ | ೯-೧೯ | ಉದ್ದ, ಸಮನಾದ |
| ನೀತ | ೩-೨೯ | ವಿಹಿತ, ಯೋಗ್ಯ, ತಕ್ಕಂಥ |
| ನೆಗಳು | ೩-೧೦ | ಮಾಡು |
| ನೆರೆ | ೩-೪೦ | ಚೆನ್ನಾಗಿ, ಸರಿಯಾಗಿ |
| ನೆಲೆ | ೧-೬, ೩-೧೦, ೭-೮ | ಸ್ಥಳ, ಮನಸ್ಸಿನ ದಾರ್ಢ್ಯ |
| ನೇಮ | ೩-೨೯, ೭-೮, ೮-೨೩ | ವಿಧಿ, ನಿಷ್ಠೆ, ಕ್ರಮ, ಸಂಯಮ |
| ನೇಹ | ೮-೪೫ | ಸಂ. ಸ್ನೇಹ, ಗೆಳೆತನ, ಪ್ರೀತಿ |
| ನೋಂಪಿ, ನೋನ್ | ೭-೩೨ | ವ್ರತ, ವ್ರತವನ್ನು ಕೈಕೊಳ್ಳು |

## ಪ

| | | |
|---|---|---|
| ಪಚನ | ೮-೨೬ | ಜೀರ್ಣ, ಬೇಯಿಸುವುದು |
| ಪಡಿ | ೧-೧೯, ೩-೬ | ಸಂ. ಪ್ರತಿ, ಸರಿಸಮ |
| ಪಡಿಗ | ೩-೩೨ | ಸಂ. ಪ್ರತಿಗ್ರಾಹ |
| ಪಡಿಮೊಗ | ೭-೨೯ | ಸಂ. ಪ್ರತಿಮುಖ, ಎದುರು |
| ಪಡಿವಿಡಿ | ೬-೪೫ | ಅನುಸರಿಸು |
| ಪಡಿಬರಿಸು | ೨-೪೮ | ಪ್ರತಿಭಟಿಸು |
| ಪಣ್ಣು | ೭-೪೮, ೯-೨೪ | ಮಾಡು |
| ಪತಿಕರಿಸು | ೮-೩೨ | ಸಂ. ಪ್ರತಿಕರಿಸು, ಉಪಚರಿಸು |
| ಪತ್ತುಗೆ | ೪-೨೧, ೫-೧೭ | ಹೊಂದಿಕೆ, ಸಂಬಂಧ, ಆಪ್ತತ್ವ |
| ಪದ್ಮಭವ | ೬-೯ | ತಾವರೆಯಲ್ಲಿ ಹುಟ್ಟಿದವನು, ಬ್ರಹ್ಮ |
| ಪದುಳ | ೫-೧೪, ೮-೪೩ | ಹದುಳ, ಕ್ಷೇಮ |
| ಪರ | ೬-೪ | ಸ್ವರ್ಗ, ಶ್ರೇಷ್ಠ |
| ಪರಕೆ | ೫-೨೫ | ಹರಕೆ, ಆಶೀರ್ವಾದ |
| ಪರಿ | ೨-೩೫, ೭-೪೮ | ಸುತ್ತು, ರೀತಿ, ಬಗೆ, ಕತ್ತರಿಸು, ಹರಿ |
| ಪರಿಕರ | ೩-೨೧ | ಪದಾರ್ಥ, ಸಲಕರಣೆ |
| ಪರಿಕಿಸು | ೫-೬ | ಪರೀಕ್ಷಿಸು |
| ಪರಿಜು | ೧-೧೮ | ವೇಷ, ಆಕಾರ, ರೂಪು |
| ಪರಿಣತಿ | ೭-೪೨ | ಸಿದ್ಧಿ, ನೈಪುಣ್ಯ, ಕೌಶಲ್ಯ |

| | | |
|---|---|---|
| ಪರಿಭವ | ೬-೨೯ | ತಾತ್ಸಾರ, ಹೀನಾಯ |
| ಪರಿಸರ | ೨-೧೭ | ಸಮೀಪ, ಸುತ್ತುಮುತ್ತು |
| ಪವಣಿಗೆ | ೧-೨೬ | ಹೊಂದಿಕೆ |
| ಪರ್ವ | ೫-೨೯ | ಹಬ್ಬ, ವಿಶೇಷ ದಿನ |
| ಪಸದನ | ೫-೧೪ | ಸಂ. ಪ್ರಸಾಧನ, ಅಲಂಕಾರ |
| ಪಸುಗೆ | ೫-೧೦ | ಪಾಲು, ಭಾಗ |
| ಪಳಿ | ೨-೯, ೫-೧೬ | ನಿಂದೆ, ದೂರು |
| ಪಾಟಿ | ೨-೨೭ | ಸಮಾನ |
| ಪಾಡು | ೨-೨೨, ೪-೧೩ | ಕಷ್ಟ, ತೊಂದರೆ |
| ಪಾರು | ೩-೨೫ | (ಧಾತು · ಪಾರ್), ನಿರೀಕ್ಷಿಸು |
| ಪಾರಣೆ | ೫-೨೯ | ಉಪವಾಸ ಮುಗಿಸುವ ದಿನ |
| ಪಾಸಟಿ | ೨-೨೩ | ಸಮಾನ, ಸದೃಶ |
| ಪಾಸು | ೭-೨೫ | ಹಾಸಿಗೆ |
| ಪಾಸಿಕೆ | ೯-೨೩ | ,, |
| ಪಾವುಗೆ | ೩-೩೨, ೬-೧ | ಸಂ. ಪಾದುಕಾ, ಪಾದರಕ್ಷೆ |
| ಪುತ್ತಳಿ | ೧-೨೨ | ಸಂ. ಪುತ್ರಿಕಾ, ಬೊಂಬೆ |
| ಪುರುಡಿಸು | ೪-೨೩ | ಸ್ಪರ್ಧಿಸು |
| ಪುರುಳು | ೧-೨೬, ೫ ೧೧ | ದ್ರವ್ಯ, ಸಾರ, ಅರ್ಥ |
| ಪುಳಕ | ೭-೪೪ | ರೋಮಾಂಚ |
| ಪುಂಗವ | ೨-೩೦ | ಶ್ರೇಷ್ಠ |
| ಪುಂಜ | ೧-೧೦ | ರಾಶಿ, ಗುಂಪು |
| ಪೆರ್ಚುಗೆ | ೬-೪೪ | ಹೆಚ್ಚಿಗೆ, ಆಧಿಕ್ಯ |
| ಪೆರ್ಮೆ | ೫-೪೦, ೯-೫೪ | ದೊಡ್ಡತನ, ಹೆಗ್ಗಳಿಕೆ, ಹಿರಿಮೆ |
| ಪೆಂಪು | ೬-೧೭ | ಅತಿಶಯ |
| ಪೆರ | ೩-೨೭, ೫-೫ | ಹಿಂದೆ, ಇತರ |
| ಪೇಸು | ೪-೧೪ | ಹೇಸು, ಅಸಹ್ಯಪಡು |
| ಪೊಡಮಡು | ೪-೮ | ನಮಸ್ಕರಿಸು |
| ಪೊಡೆ | ೪-೫೦ | ಹೊಟ್ಟೆ |
| ಪೊಂಜೆಳೆ | ೬-೩೯ | ಪೊನ್ + ಸೆಳೆ, ಚಿನ್ನದ ಬೆತ್ತ (=ತೆಳ್ಳಗಿರುವ, ಬಳುಕುವ) |
| ಪೊದ್ದು | ೧-೧೬ | ಹ.ಗ. ಪೊರ್ದು; ಸಮೀಪಿಸು |

| | | |
|---|---|---|
| ಪೊರು | ೬-೧೦ | ಹೊರು, ಧರಿಸು |
| ಪೊರೆ | ೫-೭ | ಕಾಪಾಡು |
| ಪೊಸತಿಲ್ | ೪-೪೩ | ಹ.ಗ. ಪೊಸಂತಿಲ್, ಹೊಸತಿಲು |
| ಪ್ರಾಯಶ್ಚಿತ್ತ | ೭-೨೪ | ದೋಷಪರಿಹಾರಕವಾದ ವಿಧಿ |

## ಬ

| | | |
|---|---|---|
| ಬಗೆ | ೩-೧೭, ೬-೨೭ | ಮನಸ್ಸು, ರೀತಿ |
| ಬಟ್ಟೆ | ೯-೧೯ | ಸಂ. ವರ್ತ್ಮನ್, ದಾರಿ |
| ಬಣ್ಣಿಗೆ | ೩-೧೭, ೬-೨೦ | ಸಂ. ಪಣ್ಣಿಕ, ರಚನೆ |
| ಬನ್ನಣೆ [ಬಣ್ಣನೆ] | ೧-೧೭ | ಸಂ. ವರ್ಣನೆ |
| ಬಲವರು | ೨-೧೦ | ಸುತ್ತು, ಪ್ರದಕ್ಷಿಣೆ ಮಾಡು |
| ಬಲವೈರಿ | ೧-೧೯ | ಇಂದ್ರ |
| ಬಸವಳಿ | ೭-೨೫ | ಶಕ್ತಿಗುಂದು |
| ಬಸುರು, ಬಸಿರು | ೧-೯, ೪-೨೫, ೫-೧೦ | ಹೊಟ್ಟೆ |
| ಬಿಂಕ | ೧-೧೬, ೨-೪೨, ೬-೧೮ | ಜಂಬ, ಗರ್ವ |
| ಬಿಜ್ಜಣಿಗೆ | ೧-೧೬, ೪-೧೮ | ಸಂ. ವ್ಯಜನಿಕಾ, ಬೀಸಣಿಗೆ |
| ಬಿಜ್ಜೆ | ೧-೨೯, ೩-೩೧ | ಸಂ. ವಿದ್ಯಾ |
| ಬಿಡುಗಣ್ಣ | ೫-೨ | ದೇವತೆ |
| ಬಿತ್ತರ | ೨-೧೯, ೭-೩ | ಸಂ. ವಿಸ್ತಾರ, ಅಗಲ |
| ಬಿನದ | ೩-೩೮, ೬-೨೯ | ಸಂ. ವಿನೋದ |
| ಬಿರುಬು | ೭-೨೬ | ಒರಟುತನ, ಕಾಠಿಣ್ಯ |
| ಬಿಳುವಕ್ಕಿ | ೨-೩೩ | ಪಾರಿವಾಳ |
| ಬೀಡು | ೧-೭ | ಇಳಿಯುವ ಸ್ಥಳ, ಮನೆ |
| ಬೀಯ | ೬-೪೨, ೭-೧೨ | ಸಂ. ವ್ಯಯ |
| ಬೀಳು | ೫-೧೯ | ಹೀನ, ಅಯೋಗ್ಯ |
| ಬೂತಾಟ | ೬-೭, ೮-೪೪ | ಬೂಟಾಟಿಕೆ, ಕಪಟ |
| ಬೆಕ್ಕಸ | ೭-೩೭ | ಸೋಜಿಗ, ಆಶ್ಚರ್ಯ |
| ಬೆಲೆಗೈ | ೫-೧೯ | ಮಾರು |
| ಬೆಸಗೊಳ್ | ೭-೩೪ | ಕೇಳು, ಪ್ರಶ್ನೆ ಮಾಡು |
| ಬೆಸನ | ೮-೪೧ | ಸಂ. ವ್ಯಸನ |
| ಬೆಳೆಗೈ | ೭-೪೪, ೯-೫೭ | ಗದ್ದೆ, ಹೊಲ |

| | | |
|---|---|---|
| ಬೇನೆ | ೪-೧೪ | ವೇದನೆ, ವ್ಯಥೆ, ರೋಗ |
| ಬೊಬ್ಬಿರಿ | ೩-೨೫ | ಕೂಗಾಡು |
| ಬಂದಿಗೊಳ್ | ೩-೧೭ | ಸೆರೆಗೈ, ವಶಪಡಿಸಿಕೊ |

## ಭ

| | | |
|---|---|---|
| ಭವನ | ೨-೧೪ | ಮನೆ, ಮಹಲು |
| ಭಾವೆ | ೩-೪೪, ೪-೩೩, ೮-೩೬ | ಮಹಿಳೆ, ಚೆಲುವೆ |
| ಭಿನ್ನಗೈ | ೬-೪೬ | ಒಡೆ, ದೂರಮಾಡು |
| ಭೂರಿ | ೮-೨೩ | ಹೆಚ್ಚಾದ |
| ಭೂರುಹ | ೨-೩೩ | ಮರ |
| ಭೇದ | ೩-೩೩, ೫-೩೮ | ತಂತ್ರ, ವ್ಯತ್ಯಾಸ |
| ಭೋಂಕನೆ | ೬-೩೯ | ಬೇಗ |

## ಮ

| | | |
|---|---|---|
| ಮಡಮುರಿ | ೬-೩೮ | ಹಿಮ್ಮೆಟ್ಟು, ಹಿಂದೆಗೆ |
| ಮಣಿ | ೮-೯ | ತಲೆಬಾಗು, ವಿನಯತೋರು |
| ಮನದನ್ನ | ೨-೨೬, ೫-೩೯, ೭-೧೩ | ಮನಸ್ಸು ಒಪ್ಪಿರುವ ಪ್ರಿಯ, ಪತಿ |
| ಮನ್ನಣೆ | ೨-೧೧, ೫-೨೫ | ಗೌರವ, ಮರ್ಯಾದೆ |
| ಮಾನಿಸ | ೫-೨೮ | ಸಂ. ಮನುಷ್ಯ |
| ಮನೆವಾಳ್ತೆ | ೨-೨೫, ೩-೨೦, ೭-೧೨ | ಮನೆಗೆಲಸ |
| ಮಬ್ಬು | ೮-೪೮ | ಮಬ್ಬು, ಕತ್ತಲೆ, ಮಂಕು |
| ಮರ್ಮ | ೩-೧೯, ೮-೪೧ | ಸೂಕ್ಷ್ಮ, ಗುಟ್ಟು |
| ಮರವಡು | ೬-೩೧ | ನಿಶ್ಶೇಷವಾಗು |
| ಮರುಕ | ೨-೩೧, ೪-೨೫ | ಕನಿಕರ, ದಯೆ |
| ಮರುಳು | ೧-೫೪, ೨-೪೩, ೭-೧೨ | ಹುಚ್ಚು, ದಡ್ಡ |
| ಮಸುಳು | ೧-೫೨ | ಮಂಕಾಗು, ಕುಂದು |
| ಮಾಟ | ೬-೩೧ | ರೀತಿ, ತರ |
| ಮಾಡ | ೭-೮ | ಮನೆಯ ಮಹಡಿ |
| ಮಿಾಹ | ೪-೨೪, ೮-೨೦ | (ಧಾತು ಮಿಾ) ಸ್ನಾನ |
| ಮಿಾಸಲು | ೮-೧೬ | ಉಪಯೋಗಿಸದೆ ಇರುವ, ಪವಿತ್ರವಾದ |

| | | |
|---|---|---|
| ಮುಡಿ | ೧-೪೪, ೨-೭, ೩-೩೪, ೮-೫ | ತಲೆ, ಶಿರಸ್ಸು, ತಲೆಗೂದಲು |
| ಮುಪ್ಪುರ | ೨-೪೮ | ಮೂರು ಪಟ್ಟಣಗಳು |
| ಮೂದಲಿಸು | ೪-೩೨ | ಹೀಯಾಳಿಸು, ಜರೆದಾಡು |
| ಮೇಳ | ೩-೪೪ | ಜತೆ, ಸಹವಾಸ |
| ಮೊನೆ | ೫-೩೮ | ಜಗಳ |
| ಮೊಳೆ | ೬-೩೫, ೮-೧೫ | ಮೊಳಕೆ, ಅಂಕುರ |
| ಮೋಡಿ | ೪-೧೧, ೬-೧೩ | ಬಿಗುಮಾನ, ಗರ್ವ |
| ಮಂದಿ | ೫-೩೯ | ಬಹಿರಂಗ, ಗುಂಪು |
| ಮಂದಿವಾಳ | ೫-೩೧ | ಅತಿ ಸಲುಗೆ, ಅಲಕ್ಷ್ಯ ? |

## ಯ

| | | |
|---|---|---|
| ಯತಿ | ೨-೪೫, ೮-೩೨ | ಸಂನ್ಯಾಸಿ, ಸಾಧು |
| ಯುಗ | ೭-೨೭ | ಸೃಷ್ಟಿಯ ಕಾಲಮಾನ |

## ರ

| | | |
|---|---|---|
| ರಮ್ಯ | ೮-೨೬ | ಸುಂದರ, ಮನೋಹರ |
| ರಾಗ | ೭-೪೦ | ಪ್ರೀತಿ |

## ಲ

| | | |
|---|---|---|
| ಲಹರಿ | ೭-೪೦ | ಅಲೆ, ತರಂಗ |
| ಲಾವಣ್ಯ | ೮-೩೬ | ಸತ್ವ, ಹೊಳಹು |
| ಲೋಗರು | ೪-೧೧ | ಲೋಗ, ಸಂ. ಲೋಕ, ಜನರು |
| ಲಂಬಣ | ೧-೪೨ | ಹಾರ, ಸರ, ಮಾಲೆ |

## ವ

| | | |
|---|---|---|
| ವಂದಾರು | ೭-೧ | ಹೊಗಳುವವರು, ಭಕ್ತರು |
| ವಸನ | ೩-೨೧ | ಬಟ್ಟೆ, ಉಡಿಗೆ |
| ವಾಂಛಿತ | ೬-೧ | ಬೇಕಾದ, ಇಷ್ಟವಾದ |
| ವಾರ್ಧಿ | ೯-೮ | ಸಮುದ್ರ |
| ವಿಜ್ಞಾನ | ೯-೧ | ತಿಳಿವಳಿಕೆ |

| | | |
|---|---|---|
| ವಿದಿತ | ೨-೧೫ | ತಿಳಿದದ್ದು |
| ವೃತ್ತ | ೪-೩ | ಸಂಗತಿ, ಸಮಾಚಾರ |
| ವೇಲೆ | ೭-೪ | ಸಮುದ್ರದ ಅಲೆ |
| ವೇದನೆ | ೭-೨೪ | ಸಂಕಟ, ಕಳವಳ |
| ವ್ಯಂಗ್ಯ | ೬-೨೨ | ಅಣಕವುಳ್ಳ, ಸೂಚಕ |
| ವೈಜಯಂತಿ | ೧-೨ | ಬಾವುಟ, ಪತಾಕೆ |

## ಶ

| | | |
|---|---|---|
| ಶಾಕ | ೮-೧೭ | ಕಾಯಿಪಲ್ಯ |
| ಶೌರಿ | ೬-೨ | ವಿಷ್ಣು |

## ಸ

| | | |
|---|---|---|
| ಸರ್ಗ | ೯-೪೨ | ಅಧ್ಯಾಯ, ಪ್ರಕರಣ |
| ಸಜ್ಜುವಡು | ೮-೩೬ | ಸಿದ್ಧವಾಗು, ಗೋಚರಿಸು |
| ಸದ್ಮ | ೮-೨ | ಮನೆ |
| ಸದೆದಟ್ಟು | ೧-೩೬ | ಹೊಡೆದೋಡಿಸು |
| ಸನ್ನಾಹ | ೧-೩೬ | ಸಮೂಹ |
| ಸಮನಿಸು | ೪-೧೯ | ಮಾಡಿಸು, ಒದಗಿಸು |
| ಸವನಿಸು | ೭-೧೮ | ,, ,, |
| ಸರ್ವಂಸಹೆ | ೬-೧೦ | ಭೂಮಿ |
| ಸಾರ | ೨-೩೯ | ತಿರುಳು |
| ಸಾರು | ೭-೨೯ | ಹತ್ತಿರಬರು |
| ಸಿಡಿಮಿಡಿಗೊಳ್ಳು | ೪-೭ | ರೇಗು, ಸಿಟ್ಟಾಗು |
| ಸಿದ್ಧಿ | ೪-೪೮ | ಉದ್ದೇಶದ ಸಫಲತೆ |
| ಸುಯ್ | ೭-೨೫ | ಉಸಿರು, ಉಚ್ಛ್ವಾಸ |
| ಸುಯಿಧಾನ | ೮-೨೬ | ಜಾಗರೂಕತೆ |
| ಸೂಸು | ೪-೧೮ | ಚಿಮುಕಿಸುವುದು |
| ಸೆಜ್ಜೆ | ೭-೬ | ಸಂ. ಶಯ್ಯಾ |
| ಸೇಕ | ೨-೪೬ | ಚಿಮುಕಿಸು |
| ಸೈಪಿಡು | ೮-೫ | ಸರಿಪಡಿಸು |
| ಸೈಪು | ೭-೧೮ | ಪುಣ್ಯ |
| ಸೊಗ | ೧-೪೩ | ಸಂ. ಸುಖ |

| | | |
|---|---|---|
| ಸೊಗಸು | ೫-೧೫ | ಚಂದುಳ್ಳ, ಲಕ್ಷಣವಾದ |
| ಸೊಬಗು | ,, | ,, ,, |
| ಸೊದೆ | ೬-೨೫ | ಸಂ. ಸುಧಾ; ಅಮೃತ |
| ಸೋಗೆ | ೩-೧೪, ೭-೪ | ನವಿಲು |
| ಸೌಸವ | ೭-೩೩ | ಸುಗಂಧ |
| ಸಂಗಾತಿ | ೭-೧೦ | ಜತೆಯುವಳು |
| ಸಂಚಿ | ೧-೩೬ | ಎಲೆ ಅಡಕೆಯ ಚೀಲ |
| ಸಂದಣಿಸು | ೭-೧೭ | ಒಟ್ಟುಗೂಡಿಸು, ಗುಂಪಾಗು |
| ಸಂದ | ೧-೫೦ | ಹೆಸರುವಾಸಿಯಾದ, ಪ್ರಸಿದ್ಧ (ಧಾತು ಸಲ್) |
| ಸಾಂಗ | ೨-೩೦ | ಚೆನ್ನಾಗಿ, ಸಂಪೂರ್ಣ |
| ಸಾಂತಪನ | ೨-೧೩ | ಉಗ್ರ ತಪಸ್ಸು |
| ಸಿಂಗರ | ೭-೧೦ | ಸಂ. ಶೃಂಗಾರ |
| ಸೊಂಪು | ೬-೮ | ಅಂದ, ಒತ್ತು |

## ಹ

| | | |
|---|---|---|
| ಹದನು | ೧-೬೧ | ರೀತಿ, ಸಂಗತಿ |
| ಹದಿಬದೆ | ೨-೧೫, ೩-೪೮ | ಸಂ. ಪತಿವ್ರತಾ, ಸಾಧ್ವಿ |
| ಹದುಗು | ೬-೩೬ | ಕುಗ್ಗು, ಸಂಕುಚಿತವಾಗು |
| ಹನ್ನಸ | ೩-೨೨ | ಕಿರುಕುಳ? |
| ಹಮ್ಮು | ೪-೧೫ | ಅಹಂಕಾರ, ಸೊಕ್ಕು |
| ಹಯನು | ೪-೪೫ | ಕರಾವಿನ ಹಸು |
| ಹೆಕ್ಕಳಿಸು | ೪-೧೫ | ಹ. ಗ. ಪೆಕ್ಕಳಿಸು, ಹೆಚ್ಚು |

೧೪೬-೨,೦೦೦—ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ, ಬೆಂಗಳೂರು—೧೯೪೦

## PUBLICATIONS OF THE UNIVERSITY

### *I. English*

| | | Rs | a. | p |
|---|---|---|---|---|
| 1 | THE MYSORE TRIBES AND CASTES by the late H V NANJUNDAYYA, M A, M.L, C I E., and Diwan Bahadur L. K ANANTAKRISHNA IYER, B A, M D HON (BRES) *Four Volumes Volume II, 1928, Volume III, 1930, Volume IV, 1931, Volume I, 1935 Each Volume is profusely illustrated* | | | |
| | *Vol I* | 15 | 0 | 0 |
| | *Other Vols Each* | 12 | 8 | 0 |
| | APPENDIX TO THE FOUR VOLUMES OF THE MYSORE TRIBES AND CASTES | | | |
| 2. | PRAMANASAMUCCHAYA OF ACHARYA DINNAGA, Cha I by H R RANGASWAMI IYENGAR, M.A | 3 | 0 | 0 |
| 3. | LABOUR AND HOUSING IN BANGALORE CITY by C. NARASIMHA MOORTY, M A and R K SRINIVASAN, M A | 0 | 8 | 0 |
| 4 | THE MUNRO SYSTEM OF BRITISH STATESMANSHIP IN INDIA by Dr K N VENKATASUBBASASTRI, M.A., Ph D, F R Hist S | 3 | 0 | 0 |
| 5 | SOURCES OF KARNATAKA HISTORY, Vol. I by S. Srikanta Sastry, M.A. | | | |
| | Ordinary | 3 | 0 | 0 |
| | Special | 3 | 8 | 0 |

## II. Kannada

| | | PRICE Rs | a | p |
|---|---|---|---|---|
| **(a) General** | | | | |
| 1 | HISTORY OF KANNADA LANGUAGE by the late Praktanavimarsa Vichakshana Mahamahopadhyaya Rao Bahadur R NARASIMHACHAR, M A, M R A S | 1 | 0 | 0 |
| 2 | HISTORY OF KANNADA LITERATURE by the late Praktanavimarsa Vichakshana Mahamahopadhyaya Rao Bahadur R NARASIMHACHAR, M A, M R A S | 1 | 0 | 0 |
| 3 | KANNADA KAIPIDI Vol I — Ordinary | 1 | 4 | 0 |
| | Special | 1 | 12 | 0 |
| **(b) Mysore University Kannada Publication Series** | | | | |
| 1 | HARISCHANDRAKAVYA SANGRAHA Abridged and Edited by T S VENKANNAIYA, M A and A R KRISHNA SASTRY, M.A. | 0 | 12 | 0 |
| 2 | KADAMBARI SANGRAHA Abridged and Edited by T S VENKANNAIYA, M.A | 0 | 12 | 0 |
| 3. | PRABHULINGALEELEYA SANGRAHA (2nd Edn ) Abridged and Edited by M. S. BASAVALINGAYYA, M A, B L and M. R. SRINIVASA MOORTY, B A. | 0 | 12 | 0 |
| 4. | SAKRATISANA KONEYA DINAGALU by A. N. MURTY RAO, M A. Translation of four Socratic Dialogues with an introduction — Ordinary | 0 | 12 | 0 |
| | Calico | 1 | 0 | 0 |

| | | PRICE Rs | a | p |
|---|---|---|---|---|
| 5 LIFE OF SRI RAMAKRISHNA PARAMAHAMSA (2nd Edn ) by K V PUTTAPPA, M A | Ordinary | 0 | 12 | 0 |
| | Calico | 1 | 4 | 0 |
| 6 RABINDRANATH TAGORE by M VENKATESA IYENGAR, M A | Ordinary | 0 | 12 | 0 |
| | Calico | 1 | 4 | 0 |
| 7 AROGYA ADARA JNANA MATTU SADHANA by J A ISWARAMURTHY, B A, L M S, B S Sc | Ordinary | 0 | 12 | 0 |
| | Calico | 1 | 4 | 0 |
| 8 PAMPARAMAYANA SANGRAHA by Asthana Mahavidvan Tiruvallur SRINIVASARAGHAVACHAR and D L NARASIMHACHAR, M A | Ordinary | 0 | 12 | 0 |
| | Calico | 1 | 0 | 0 |
| 9. HANA PRAPANCHA by V SITHARAMIAH, M A. | Ordinary | 0 | 12 | 0 |
| | Calico | 1 | 4 | 0 |
| 10 SANSKRIT DRAMA by A. R KRISHNA SASTRY, M A | Ordinary | 0 | 12 | 0 |
| | Calico | 1 | 4 | 0 |
| 11. JIVA VIJNANA by B. VENKATANARANAPPA, M A. | Ordinary | 0 | 12 | 0 |
| | Calico | 1 | 4 | 0 |

| | | PRICE Rs | a | p. |
|---|---|---|---|---|
| 12. HINDU DARSANA SARA by Mahamahopadhyaya L SRINIVAS-ACHAR | | | | |
| | Ordinary | 0 | 12 | 0 |
| | Calico | 1 | 4 | 0 |
| 13. RAJANITHI by H. KRISHNA RAO, M A | | | | |
| | Ordinary | 0 | 12 | 0 |
| | Calico | 1 | 4 | 0 |

**Note**:-The Publications are available for sale at the Oriental Library, Mysore and at the Karnataka Publishing House, Basavanagudi P O, Bangalore City

146-2,000–Kannada Sahitya Parishat Press, Bangalore City–1940